


ನಯೀ-ತಾಲೀಂ

ಧೀರೇಂದ್ರ ಮಜುಂದಾರ್

ಸಂಪಾದಕ : ಸಿದ್ದವನಹಳ್ಳಿ ಕೃಷ್ಣಶರ್ಮ

ನಯೀ - ತಾಲೀಂ

ಧೀರೇಂದ್ರ ಮಜುಂದಾರ್

ಅಧ್ಯಕ್ಷ – ಸರ್ವಸೇವಾ ಸಂಘ

ಗಾಂಧೀ ಸ್ಮಾರಕ ನಿಧಿ (ಮೈಸೂರು ಶಾಖೆ)

ಬೆಂಗಳೂರು-೨.

ಕೃತಜ್ಞತೆ

ಈ ಪುಸ್ತಕವನ್ನು ಕನ್ನಡಿಸಲು ಅಪ್ಪಣೆ ಕೊಟ್ಟ
ಶ್ರೀ ಧೀರೇಂದ್ರ ಮಜುಂದಾರರಿಗೆ ಸಂಪಾದಕನ ಕೃತಜ್ಞತೆ.

ಬೆಲೆ : ಆರಾಣೆ.

ಮುದ್ರಕರು :
ಶ್ರೀ ಸತ್ಯನಾರಾಯಣ ಪ್ರೆಸ್
ಅರಳೇಪೇಟೆ, — ಬೆಂಗಳೂರು-೨.

ಧೀರೇಂದ್ರ ಮಜುಂದಾರ್

ನಯೀ-ತಾಲೀಂ

ಹಿನ್ನೆಲೆ

ಈಗ ಲೋಕದಲ್ಲಿ ಚಿಂತೆ ಭಯ ಹೆಚ್ಚುತ್ತಿದೆ. ಒಂದು ವರ್ಗದಿಂದ ಇನ್ನೊಂದರ ಕೈಗೆ ಅಧಿಕಾರವನ್ನು ಬದಲಿಸಿದರೆ, ಬರೀ ರಾಜಕೀಯ ವಿಪ್ಲವ ಮಾಡಿದರೆ, ಈ ಭಯ-ಚಿಂತೆ ಕಳೆಯುವಂತಿಲ್ಲ. ಒಂದು ಬಲವಾದ ಕ್ರಾಂತಿಯೇ ಬೇಕು. ಯಾವ ರಾಜಕೀಯ ಆರ್ಥಿಕ ಸಾಮಾಜಿಕ ಕಾರಣಗಳಿಂದ ಲೋಕದಲ್ಲಿ ತ್ರಾಹಿ ತ್ರಾಹಿ ಎಂಬ ಬೊಬ್ಬೆ ಕೇಳಬರುತ್ತಿದೆಯೋ ಅವನ್ನು ಆಮೂಲವಾಗಿ ಪರಿವರ್ತನೆ ಮಾಡಬೇಕು. ಲೋಕವನ್ನು ಅಧಿಕಾರ ಪ್ರತಿಸ್ಪರ್ಧೆಗಳ ಆಧಾರ ತಪ್ಪಿಸಿ ಕರ್ತವ್ಯ ಸಹಕಾರಗಳ ತಳಹದಿಯ ಮೇಲೆ ನಿಲ್ಲಿಸಬಲ್ಲ ಪದ್ಧತಿಯನ್ನು ಮೊದಲಿಡಬೇಕು. ಮನುಷ್ಯನ ವಿಚಾರ ಭಾವನೆಗಳಲ್ಲಿಯೆ ಸಮೂಲ ಪರಿವರ್ತನೆಯಾಗಿ, ಶಿಕ್ಷಣದ ಕ್ರಾಂತಿಯಲ್ಲಿ ಅದು ಮೊದಲಾಗುವಂತಾದರೆ ಈ ರಚನೆ ಸಃಧ್ಯ.

ಶಾಸನ ತಂತ್ರ ಬಹಳ ಕೇಂದ್ರೀಕೃತವಾಗಿದೆ. ಬಂಡವಾಳಗಾರರ ಕೈಯಲ್ಲಿರಲಿ ಒಂದು ವಿಶಿಷ್ಟ ಗುಂಪಿನ ಕೈಯಲ್ಲಿರಲಿ, ಅದರ ರೂಪೇನೋ ಸರ್ವಾಧಿಕಾರ-ತಂತ್ರದ್ದೇ. ಆರ್ಥಿಕ ಕ್ಷೇತ್ರದಲ್ಲಿ ಕೇಂದ್ರೀಯ ಉದ್ಯೋಗ ಗಿರಣಿಗಾರಿಕೆ ಬಂದು, ಜನತೆಯ ಬಾಳು ಬದುಕಿಗೆ ಬೇಕಾದ ಸಾಮಗ್ರಿಯ ನಿರ್ಮಾಣ ಮುಖ್ಯವಾಗಿ ಬಂಡವಾಳಕ್ಕೆ ಅಧೀನವಾಯಿತು. ಸರ್ವಾಧಿಕಾರದ ಶಾಸನ ಪದ್ಧತಿಯಿಂದ ಬಂಡವಾಳಗಾರಿಕೆಯ ಆರ್ಥಿಕ ನೀತಿಯಿಂದ ಸಾಮಾಜಿಕ ಕ್ಷೇತ್ರದಲ್ಲಿ ಭಯಂಕರ ವೈಷಮ್ಯ ಸಾಮ್ರಾಜ್ಯವೇ ಹರಡಿಬಿಟ್ಟಿದೆ. ಹೀಗಾಗಿ ಮಾನವಕೋಟಿ ಶೋಷಿತ, ಶಾಸಿತ ಆಗಿ ವರ್ಗ-ವರ್ಣ ವಿಷಮತೆಯಿಂದ ಜರ್ಜರಿತವಾಗುತ್ತಿದೆ. ಗಾಂಧೀಜಿ ತಮ್ಮ 'ನಯೀ ತಾಲೀಂ' ಮೂಲಕ ಜನತೆಯನ್ನು ಕೇಂದ್ರವಾದದಿಂದ ಬಿಡುಗಡೆ ಮಾಡಲು ಬಯಸಿದರು; ನಿಜವಾದ ಪ್ರಜಾತಂತ್ರ ಸ್ಥಾಪನೆ ಮಾಡಲು, ಮನುಷ್ಯನ ಬಾಳನ್ನು ಬಂಡವಾಳದ ಮುಷ್ಟಿಯಿಂದ ಬಿಡಿಸಿ ಶ್ರಮದ ಆಧಾರದ ಮೇಲೆ ನೆಲೆಗೊಳಿಸಿ, ಸಾಮಾಜಿಕ ವೈಷಮ್ಯವನ್ನು ಅಳಿಯಿಸಿ ಸಾಮ್ಯವಾದವನ್ನು ಸ್ಥಾಪಿಸಲು, ನಿಜವಾದ ಕ್ರಾಂತಿಯ ನಿಶ್ಚಿತ ವ್ಯವಸ್ಥಿತ ಹೆಜ್ಜೆಯನ್ನು ಹಾಕಿದರು. ಈ ಸರ್ವಾಂಗೀಣ ಕ್ರಾಂತಿಗಾಗಿಯೆ ಗಾಂಧೀಜಿಯ ಜನ್ಮವಾಯಿತು.

'ನಯೀ ತಾಲೀಂ' ಹೇಗೆ ಈ ಮಹಾಕ್ರಾಂತಿಯ ದ್ಯೋತಕವೋ ಈ ಚಿಕ್ಕ ಪುಸ್ತಕದಲ್ಲಿ ತೋರಿಸಲು ಪ್ರಯತ್ನಿಸಲಾಗಿದೆ. ವಿಚಾರಶೀಲ ಪಾಠಕರಿಗೆ ಇದರಲ್ಲಿ ಗಾಂಧೀಜಿಯ ದೃಷ್ಟಿಯ ನೆರಳು ಕಂಡೀತೆಂದು ತಿಳಿದಿದೇನೆ.

ಧೀರೇಂದ್ರ ಮಜುಂದಾರ್

೧

ರೂಪ - ರೇಖೆ

ರೂಪ - ರೇಖೆ

೧

ಸಂಗ್ರಾಮ - ಸಂಘಟನೆ : ೧೯೨೧ ರಿಂದಲೇ ಗಾಂಧೀಜಿ ರಚನಾತ್ಮಕ ಕಾರ್ಯಕ್ರಮವನ್ನು ತಮ್ಮ ಕ್ರಾಂತಿಕಾರಿ ಯೋಜನೆಗೆ ತಳಹದಿಯಾಗಿ ಮಾಡಿದರು. ಸ್ವರಾಜ್ಯ ಸಂಗ್ರಾಮವನ್ನು ಮೊಟ್ಟಮೊದಲು ಪ್ರಾರಂಭಿಸಿ ದಾಗಲೇ ಅವರ ಮೊಟ್ಟಮೊದಲನೆಯ ಕಾರ್ಯಕ್ರಮ ಜೂನ್ ೩೦ ರೊಳಗಾಗಿ ದೇಶದಲ್ಲಿ ೨೫ ಲಕ್ಷ ರಾಟೆ ತಿರುಗುತ್ತಿರಬೇಕು; ೧ ಕೋಟಿ ರೂಪಾಯಿಯ 'ತಿಲಕ್ ಸ್ವರಾಜ್ಯ ಫಂಡ್' ಕೂಡಬೇಕು. ಇತ್ತ ಸ್ವಾತಂತ್ರ್ಯದ ಯುದ್ಧ ಹೂಡಿ ಸತ್ಯಾಗ್ರಹದ ಮೂಲಕ ಸ್ವರಾಜ್ಯದ ಕಡೆ ನಡೆಯುತ್ತ ಅತ್ತ ಹಲವು ಬಗೆಯ ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಮುಂದಿಟ್ಟ ಹೆಜ್ಜೆಯನ್ನು ದೃಢಗೊಳಿಸುತ್ತ ಬಂದರು.

ನಯೀತಾಲೀಂ, ಹುಟ್ಟು : ಹೀಗೆ ಕಾಲಕಾಲಕ್ಕೆ ರಾಟೆ ಗ್ರಾಮೋದ್ಯೋಗ ಹರಿಜನ ಸೇವೆ ಮುಂತಾದ ಬೇರೆ ಬೇರೆ ರಚನಾತ್ಮಕ ಕಾರ್ಯಕ್ರಮಗಳನ್ನು .ನೆಲೆಗೊಳಿಸುತ್ತ ಬಂದರು. ಅವಕ್ಕೆ ಸಂಘಟಿತ ರೂಪನ್ನು ಕೊಡಲು ಚರಖಾ ಸಂಘ, ಗ್ರಾಮೋದ್ಯೋಗ ಸಂಘ, ಹರಿಜನ ಸೇವಕ ಸಂಘ ಮುಂತಾದ ಸಂಸ್ಥೆಗಳನ್ನು ರಚಿಸಿದರು. ಕಟ್ಟಕಡೆಯಲ್ಲಿ ೧೯೩೭ ರಲ್ಲಿ ಕಾಂಗ್ರೆಸ್ಸಿನ ಕೈಗೆ ಆಡಳಿತ ಸೂತ್ರಗಳು ಬಂದಾಗ ದೇಶ ಇನ್ನೇನು ಸ್ವರಾಜ್ಯದ ಬಾಗಿಲಿಗೆ ಬಂದಿದೆ ಎನಿಸಿತು. ಆಗ ಅವರು 'ನಯೀ ತಾಲೀಮ್' ಯೋಜನೆಯನ್ನು ತಮ್ಮ ಕಟ್ಟಕಡೆಯ ಯೋಜನೆಯಾಗಿ ದೇಶದ ಮುಂದೆ ಇಟ್ಟರು. "ನಿಜವಾದ ಸ್ವರಾಜ್ಯ ದೊರೆಯಬೇಕಾದರೆ ದೇಶ ಈ 'ನಯೀ ತಾಲೀಮ್' ಯೋಜನೆಯನ್ನು ಪೂರ್ಣವಾಗಿ ಅನುಸರಿಸಬೇಕು" ಎಂದು ಅವರು ಹೇಳಿದರು. **ದೇಶದ ಸ್ವಾತಂತ್ರ್ಯ ಎಂದರೆ ಜನತೆಯ ಸ್ವಾತಂತ್ರ್ಯ.** ಜನತೆಗೆ

ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯ, ಸ್ವರಾಜ್ಯ ಸಿಗಬೇಕು ಎಂದ ಪಕ್ಷದಲ್ಲಿ ನಮ್ಮ ದೇಶದ ಏಳು ಲಕ್ಷ ಹಳ್ಳಿಗಳಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೂ, ಅವರು ತಮ್ಮ ತಮ್ಮ ಕರ್ತವ್ಯ-ಜವಾಬದಾರಿ ಅರಿತುಕೊಳ್ಳಬಲ್ಲಂತೆ ಶಿಕ್ಷಣ ಕೊಡುವುದು ಅಗತ್ಯ. ಅವರು ಸ್ವಾವಲಂಬಿಗಳಾಗಬೇಕು, ಕೇಂದ್ರೀಯ ಶಾಸನ ಯಂತ್ರದ ಭರಸೆಯನ್ನು ಬಿಟ್ಟು ದೇಶದ ಆಡಳಿತ ವನ್ನು ಸುಶಿಕ್ಷಿತ ರೂಪದಲ್ಲಿ ತಾವೇ ನಡಸುವಂತೆ ಆಗಬೇಕು. ಹೀಗೆ ಕಾಂಗ್ರೆಸ್ಸಿನ ಪ್ರಥಮ ಮಂತ್ರಿಮಂಡಲದ ಜೊತೆಯಲ್ಲಿಯೇ 'ನಯೀ 'ನಯೀ ತಾಲಿಮೂ' ಹುಟ್ಟಿಕೊಂಡಿತು.

ನಯೀ ತಾಲೀಮಿನ ಉದ್ದೇಶ: ಗಾಂಧೀಜಿ ನಮಗೆ ನೀಡಿದ ಯೋಜನೆಗಳಲ್ಲಿ ಇದೇ ಕಟ್ಟಕಡೆಯದು, ಇದೇ ಹೆಚ್ಚು ಕ್ರಾಂತಿಕಾರಿ ಯೋಜನೆ. ಆಧುನಿಕ ಸುಶಿಕ್ಷಿತ ಜನರನ್ನು ಹೆಚ್ಚು ದಿಕ್ಕುತೋಚದಂತೆ ಮಾಡುವ ಕಾರ್ಯಕ್ರಮ ಇದು. ಆಚಾರ್ಯ ಕೃಪಲಾನಿ ಇದರ ಬಗ್ಗೆ ಒಂದು ಪುಸ್ತಕ ಬರೆದು 'ಕಡೆಯ ಮೂರ್ಖತನ' ಎಂದು ಹೆಸರಿಟ್ಟಿ ದಾರೆ. ಆ ಪುಸ್ತಕ ಇಂಗ್ಲೀಷಿನಲ್ಲಿದೆ. ಇಂಗ್ಲೀಷು ಕಲಿತವರಿಗೆ ಸಾಧಾರಣವಾಗಿ ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮಗಳೆಲ್ಲಾ ಬರೀ ಹುಚ್ಚು ಆಗಿ ಕಾಣುತ್ತಿದ್ದವು. ಆದರೆ ಗಾಂಧೀಜಿಯೇನೋ ತಮ್ಮ ಕನಸಿನಂತೆ ದೇಶವನ್ನು ರೂಪಿಸುತ್ತಿದ್ದರು. ಯಾವ ದೇಶವನ್ನೇ ಆಗಲಿ ರೂಪಿಸಲು ಮುಖ್ಯವಾದ ಸಾಧನ ಶಿಕ್ಷಣ. ದೇಶವನ್ನು, ಸಮಾಜ ವನ್ನು ಒಂದು ಗೊತ್ತಾದ ದಿಕ್ಕಿನಲ್ಲಿ ವ್ಯವಸ್ಥೆಯಿಂದ ಸಂಘಟನೆ ಮಾಡ ಲೆಂದೇ ಶಿಕ್ಷಣ ಪದ್ಧತಿ ರಚಿತವಾಗುತ್ತದೆ.

ಈ ಹೊಸ ಶಿಕ್ಷಣದ ಸಿದ್ಧಾಂತ - ರೂಪುರೇಖೆಗಳನ್ನು ಅರಿತು ಕೊಳ್ಳಲು ಈ ಶಿಕ್ಷಣಯೋಜನೆಯ ಹಿನ್ನೆಲೆಯಲ್ಲಿ ಗಾಂಧೀಜಿಯ ಉದ್ದೇಶ್ಯ ವೇನು, ಇದರ ಮೂಲಕ ಅವರು ಲೋಕಕ್ಕೆ ಎಂಥ ರೂಪನ್ನು ಕೊಡಲು ಬಯಸಿದರು ಎಂಬುದನ್ನು ಅರ್ಥಮಾಡಿಕೊಳ್ಳುವುದು ಅತ್ಯಗತ್ಯ. ಜಗತ್ತಿ ನಲ್ಲಿ ಕಾಣಬರುವ ಪ್ರತಿಯೊಂದು ಶಿಕ್ಷಣ ಪದ್ಧತಿಯ ಹಿನ್ನೆಲೆಯಲ್ಲಿಯೂ ಒಂದು ನಿರ್ದಿಷ್ಟ ರೀತಿಯ ಸಾಮಾಜಿಕ ಆರ್ಥಿಕ. ರಾಜಕೀಯ ವ್ಯವಸ್ಥೆ ಯನ್ನು ನಿರ್ಮಿಸುವ ಉದೇಶ್ಯ ಇದ್ದೇ ಇರುತ್ತದೆ.

ಮೆಕಾಲೆಯು ಇಂಗ್ಲೀಷ್ ಶಿಕ್ಷಣ - ಭಾರತದ ರಾಯರ ಸಮಾಜ: ಹಿಂದಿನ ಕಾಲದಲ್ಲಿ ಭಾರತ, ಮಧ್ಯ ಏಷ್ಯಾ, ರೋಂ ಮುಂತಾದ ದೇಶಗಳಲ್ಲಿ ಒಂದು ಬಗೆಯು ಧಾರ್ಮಿಕ ತಳಹದಿಯ ಮೇಲೆ ಸಮಾಜವನ್ನು ಕಟ್ಟಿದ್ದರು. ಅವರ ಶಿಕ್ಷಣ ಪದ್ಧತಿ ಅದಕ್ಕೆ ಅನುರೂಪವಾಗಿಯೇ ಇತ್ತು. ಮಧ್ಯಕಾಲೀನ ಭಾರತದಲ್ಲಿ ಬ್ರಾಹ್ಮಣ ಪ್ರಧಾನ ಸಮಾಜ ವ್ಯವಸ್ಥೆ ಇತ್ತು. ಅದರಲ್ಲಿ ಬ್ರಹ್ಮಚರ್ಯಾಶ್ರಮದ ಪದ್ಧತಿ ವಿಶೇಷವಾಗಿ ನಡೆಯಿತು. ಆದ್ದರಿಂದ ಜೀವನದ ಇಡೀ ರೀತಿ ನೀತಿ ರೂಪುಗಳೇ ಬ್ರಹ್ಮಚರ್ಯಾಶ್ರಮವನ್ನು ಮುಗಿಸಿ ಬಂದ ವಿದ್ಯಾರ್ಥಿಗೆ ಸಮಾಜದಲ್ಲಿ ಸರಿಯಾದ ಸ್ಥಾನ ಸಿಗುವಂತೆ ರಚಿತವಾಗಿದ್ದವು. ಇಂಗ್ಲೀಷರು ತಮ್ಮ ರಾಜ್ಯ ಪ್ರಾರಂಭಿಸಿದಾಗಲೂ ಅವರಿಗೆ ಭಾರತದಲ್ಲಿ ಒಂದು ವಿಶಿಷ್ಟ ರೀತಿಯ ನೌಕರರ ಸಮಾಜ ಬೇಕಾಗಿತ್ತು. ಆದಕ್ಕಾಗಿಯೇ ಆಗ ಮೆಕಾಲೆ ಸಾಹೇಬ ಈಗಿರುವ ಶಿಕ್ಷಣ ಪದ್ಧತಿಯನ್ನು ಪ್ರಾರಂಭಿಸಿದ್ದು. ಆ ದೃಷ್ಟಿಯಿಂದಲೆ ಆತ ತನ್ನ ಶಿಕ್ಷಣ ಪದ್ಧತಿಯನ್ನು ರೂಪಿಸಿದ. ಇಂಗ್ಲೀಷು ಸಂಸ್ಕಾರ ಕೆಲವರಿಗಾದರೂ ಆದರೆ ಇಂಗ್ಲೀಷರ ಆಡಳಿತಕ್ಕೆ ಅವರು ಆಧಾರಸ್ತಂಭವಾಗುತ್ತಾರೆ. ಅವರಲ್ಲಿ ಸ್ವತಂತ್ರ ಬುದ್ಧಿ ವಿಕಾಸವಾಗದೆ, ಜನರಲ್ಲಿ ಯಾವ ಬಗೆಯ ನಿರ್ಮಾಣ ಕಾರ್ಯದ ಪ್ರೇರಣೆ ಪ್ರವೃತ್ತಿಗಳೂ ಇಲ್ಲದೆ ಇರಲಿ ಎಂದು ಅವನ ಬಯಕೆ.

ಹೀಗೆ ಇಂಗ್ಲೀಷು ಶಿಕ್ಷಣದ ಮೂಲಕ ದೇಶದಲ್ಲಿ ಸಾಹೇಬರ ಒಂದು ಸಮಾಜವನ್ನೇ ಅವನು ಕಟ್ಟಿದ. ಈ ಗುಂಪಿಗೆ ತಮ್ಮ ಕೈಕಾಲು ಆಡಿಸಲೂ ಬಾರದಂತಾಯಿತು; ಕೈಕಾಲನ್ನು ಆಡಿಸುವುದು ಒಂದು ದೊಡ್ಡ ಅವಮಾನ ಎಂದು ತಿಳಿದುಕೊಳ್ಳುವ ಹಾಗೆ ಆದರು.

ಇಂಗ್ಲಿಷ್ ಶಿಕ್ಷಣದ ಘಾತಕ ಪರಿಣಾಮ: ಮೆಕಾಲೆಯ ಈ ಶಿಕ್ಷಣ ಪದ್ಧತಿ ಇಷ್ಟಕ್ಕೇ ನಿಲ್ಲಲಿಲ್ಲ. ನಮ್ಮ ದೇಶದ ಪ್ರಾಚೀನ ಗ್ರಾಮ ವಿದ್ಯಾಲಯಗಳನ್ನು ನಾಶಮಾಡಿ ಶಿಕ್ಷಣ ವಿಧಾನವನ್ನು ಕೇಂದ್ರಿತಗೊಳಿಸಿ ತನ್ನ ಹಿಡಿತದಲ್ಲಿ, ನಿಯಂತ್ರಣದಲ್ಲಿ ಇಟ್ಟುಕೊಂಡಿತು. ಹಾಗೆ ಮಾಡಿ ಬಡಬಗ್ಗರಿಗೆ ಒಂದು ತೊಟ್ಟೂ ಶಿಕ್ಷಣ ಸಿಗಲಾರದಷ್ಟು ಶಿಕ್ಷಣವನ್ನು ತುಟ್ಟಿಯಾಗಿ ಮಾಡಿತು. ಹೀಗೆ ಯೋಜನಾಪೂರ್ವಕ, ಈ ದೇಶದ ಜನತೆಯನ್ನು ಎರಡು ವರ್ಗಗಳಾಗಿ ಎರಡು

ಗುಂಪಾಗಿ ಭಾಗಿಸಿತು. ಮೊದಲನೆಯ ಗುಂಪು ಹೆಳವರದು-ಅಕರ್ಮಣ್ಯರದು, ಕೆಲಸಮಾಡದವರದು; ಎರಡನೆಯ ಗುಂಪು ಬುದ್ಧಿಯಲ್ಲಿ ಹೆಳವರದು-ಬರೀ ಶರೀರಶ್ರಮ ಮಾಡುವ ದಡ್ಡರದು. ಇದರಿಂದ ದೇಶದಲ್ಲಿ ಎರಡು ಬಗೆಯ ಜೀವರಾಶಿ ಆಯಿತು. ಒಂದು-ಕುಷ್ಠ ರೋಗಿಗಳದು, ಇನ್ನೊಂದು ದನಗಳದು. ಅಂತೂ ಮನುಷ್ಯ ಪ್ರಾಣಿ ಯಾವುದೂ ಉಳಿಯ ಬಾರದೆಂಬ ಪ್ರಯತ್ನ ನಡೆಯಿತು. ಭಾರತೀಯ ಜನ ಏನು ಮಾಡಲೂ ಕೈಲಾಗದವರಾಗಲಿ, ಇಂಗ್ಲೀಷರ ಸಾಮ್ರಾಜ್ಯವಾದಿ ಶೋಷಣ ಸದಾ ಕಾಲವೂ ನಿರ್ವಿಘ್ನವಾಗಿ ನಡೆಯಲಿ ಎಂಬುದು ಅವರ ಮೂಲೋದ್ದೇಶ್ಯ.

ಶಿಕ್ಷಣ ಪದ್ಧತಿಗಳ ಉದ್ದೇಶ್ಯ : ದೊಡ್ಡ ದೊಡ್ಡ ಶಿಕ್ಷಣ ಶಾಸ್ತ್ರಿಗಳೂ ಜನನಾಯಕರೂ ಈ ಶಿಕ್ಷಣ ಪದ್ಧತಿ ನಮ್ಮ ಜನರನ್ನು ನಿರ್ವೀರ್ಯರನ್ನಾಗಿ ಮಾಡಿದೆ ಎಂದು ಈ ಶಿಕ್ಷಣವನ್ನು ಕಟುವಾಗಿ ಟೀಕಿಸುತ್ತಾರೆ. ಆದರೆ ಒಂದು ಮಾತನ್ನು ಇವರು ಮರೆಯುತ್ತಾರೆ. ಭಾರತವನ್ನು ತಮ್ಮ ಕೈಯೊಳಗೆ ಇಟ್ಟುಕೊಂಡಿರಬೇಕೆಂಬ ಆಸೆಯಿದ್ದವರು ನಮ್ಮ ತರುಣರಿಗೆ ಒಳ್ಳೆಯ ಶಿಕ್ಷಣ ಕೊಟ್ಟು ಅವರನ್ನು ಧೀರರನ್ನಾಗಿಮಾಡಿ, ಒಂದೆರಡು ದಿನದಲ್ಲಿ ತಮ್ಮನ್ನೇ ಆ ತರುಣರು ಹೊಡೆದೋಡಿಸುವಂತೆ ಮಾಡುವುದು ಸಾಧ್ಯವೆ? ಅಂಥ ತಪ್ಪನ್ನು ಅವರು ಮಾಡಿಯಾರೆ? ಇದೇ ರೀತಿ ಪ್ರತಿಯೊಂದು ಯುಗದಲ್ಲೂ ಪ್ರತಿಯೊಂದು ದೇಶದಲ್ಲೂ ಒಂದು ನಿಶ್ಚಿತ ಸಮಾಜ ವ್ಯವಸ್ಥೆ ನಡೆಸಲು, ನೆಲೆಗೊಳಿಸಲು ಆಯಾ ಪರಿಸ್ಥಿತಿಗೆ ಅನುಸಾರ ಬೇರೆ ಬೇರೆ ಶಿಕ್ಷಣ ಪದ್ಧತಿಗಳು ಹುಟ್ಟಿಕೊಂಡಿವೆ. ಅದೇ ರೀತಿ ತಮ್ಮ ಕಲ್ಪನೆಯ ಪ್ರಕಾರ ಹೊಸ ಸಮಾಜ ವ್ಯವಸ್ಥೆಯನ್ನು ನೆಲೆಗೊಳಿಸಲು ಗಾಂಧೀಜಿಯೂ ಒಂದು ಶಿಕ್ಷಣ ಪದ್ಧತಿಯನ್ನು ಕಂಡು ಹಿಡಿಯಲೇ ಬೇಕಾಗಿತ್ತು. ಆದ್ದರಿಂದ ಮೊಟ್ಟಮೊದಲು ನಾವು ಅರಿತುಕೊಳ್ಳಬೇಕಾದುದು - ಭಾರತದಲ್ಲಿ, ಅದರ ಮೂಲಕ ಲೋಕದಲ್ಲಿ, ಯಾವ ಬಗೆಯ ಸಾಮಾಜಿಕ, ಆರ್ಥಿಕ, ರಾಜಕೀಯ ವ್ಯವಸ್ಥೆಯನ್ನು ಗಾಂಧೀಜಿ ಸ್ಥಾಪಿಸಬೇಕೆಂದಿದ್ದರು? ಇದನ್ನರಿಯದೆ, ನಯೀ ತಾಲೀಮಿನ ಮೂಲ ಸಿದ್ಧಾಂತಗಳು ಸರಿಯಾಗಿ ತಿಳಿಯಲಿಕ್ಕಿಲ್ಲ.

೨

ಅವತಾರ - ಮಹಾಪುರುಷ : ಇದು ಮಾನವ ಸಮಾಜದ ರಾಜಕೀಯ ಯುಗ. ಪ್ರತಿಯೊಂದನ್ನೂ ರಾಜಕೀಯ ದೃಷ್ಟಿಯಿಂದ ನೋಡುವುದು ಮನುಷ್ಯ ಸ್ವಭಾವವಾಗಿದೆ ಈಗ. ಆದ್ದರಿಂದ ಎಂಥ ರಾಜಕೀಯ ವ್ಯವಸ್ಥೆಯನ್ನು ದೇಶದಲ್ಲಿ ಗಾಂಧೀಜಿ ಏರ್ಪಡಿಸಬೇಕೆಂದಿದ್ದರೋ ಮೊದಲು ಅರಿತುಕೊಳ್ಳುವುದು ಅಗತ್ಯ. ಗಾಂಧೀಜಿ ಬಯಸಿದ ಸಾಮಾಜ ವ್ಯವಸ್ಥೆ ಇತಿಹಾಸದ ಪರಂಪರೆಗೆ ಹೊಂದುತ್ತದೆಯೆ, ಇಲ್ಲವೆ? ಅವರದೇ ಒಂದು ಸ್ವತಂತ್ರ ಕಲ್ಪನೆಯೇ? ಕಾಲಕಾಲಕ್ಕೂ ತನ್ನ ಸುಖ ಶಾಂತಿ ಸ್ವಾತಂತ್ರ್ಯಗಳಿಗಾಗಿ ಮನುಷ್ಯ ಮಾಡಿದ ಪ್ರಯತ್ನಗಳೆಲ್ಲವೂ ಐತಿಹಾಸಿಕ ಪರಂಪರೆಯ ಕೊಂಡಿಗಳು. ಸಮಾಜದಲ್ಲಿ ಹುಟ್ಟಿ ಬರುವ ಕಲ್ಪನೆಗಳೆಲ್ಲ ಹಿಂದಿನ ಪ್ರಯೋಗಗಳ ಪರಿಣಾಮ, ಹಿಂದಿನ ಅನುಭವಗಳ ಸಾರ. ಯಾವ ಅವತಾರವೂ ಯಾವ ಮಹಾ ಪುರುಷನೂ ಮನಬಂದಂತೆ ಮಾತಾಡುವುದಿಲ್ಲ. ಲೋಕದಲ್ಲಿ ಆದ ಅವತಾರಗಳೆಲ್ಲ ಹುಟ್ಟಿದ ಮಹಾಪುರುಷರೆಲ್ಲ ಲೋಕದ ಸಮಷ್ಟಿಶಕ್ತಿಯ ಪ್ರತಿಬಿಂಬವೆಂದೇ ತಿಳಿಯಬೇಕು. ಅವತಾರವೆಂದರೆ ಯಾವುದೋ ಮುಗಿಲಿನಲ್ಲಿ ಕುಳಿತಿರುವ ದೇವರ ಅವತಾರವಲ್ಲ. ಇಡೀ ಮಾನವ ಸಮಾಜದ ಅನುಭವ ಸಮುಚ್ಚಯಕ್ಕೆ ಅವತಾರ ಹೊರತಲ್ಲ. ಮಾನವ ಸಮಾಜ ಮಾಡಿದ ಹಿಂದಿನ ಪ್ರಯೋಗಗಳಿಂದ ಹುಟ್ಟಿದ ಸಮಸ್ಯೆಗಳಿಗೆ ಪರಿಹಾರವನ್ನು ರೂಪಿಸಲೆಂದೇ ಅವರು ಹುಟ್ಟುತ್ತಾರೆ.

ಪ್ರಾಣಿಗಳ ಮೂಲ ಸ್ವಭಾವ : ಗಾಂಧೀಜಿ ಯಾವ ಬಗೆಯ ಸಮಾಜವ್ಯವಸ್ಥೆ ತರಬೇಕೆಂದು ಬಯಸಿದರೋ ಅರಿತುಕೊಳ್ಳಲು ಆದಿಕಾಲದಿಂದಲೂ ಮನುಷ್ಯ ತನ್ನ ಸಮಸ್ಯೆಗಳನ್ನು ಯಾವ ರೀತಿ ಬಗೆಹರಿಸಲು ಯತ್ನಿಸುತ್ತ ಬಂದಿದಾನೋ, ಅದರ ಇತಿಹಾಸವನ್ನು ತಿಳಿದುಕೊಳ್ಳಬೇಕು. ಪ್ರಾರಂಭದಲ್ಲಿ ಯಾವ ಬಗೆಯ ಸಾಮಾಜಿಕ ಸಂಘಟನೆಯೂ ಇರಲಿಲ್ಲ. ಆಗ ಮನುಷ್ಯ ಪ್ರಕೃತಿಯ ಮಡಿಲಲ್ಲಿ ಒಂಟಿಯಾಗಿಯೇ ಇದ್ದ. ತನ್ನ ಪ್ರಾಣವನ್ನು ಕಾಪಾಡಿಕೊಳ್ಳುವುದೇ ಅವನಿಗೆ ಆಗ ಮುಖ್ಯ ಕೆಲಸ.

ಆತ್ಮಸಂರಕ್ಷಣೆ, ತನ್ನನ್ನು ಕಾಪಾಡಿಕೊಳ್ಳುವುದು, ಪ್ರಾಣಿ ಮಾತ್ರದ ಮೂಲ ಸ್ವಭಾವ. ಸೃಷ್ಟಿಯ ವ್ಯಾಪಕ ರೂಪವನ್ನು ಅಧ್ಯಯನ ಮಾಡಿದರೆ ಇದು ತಿಳಿಯುತ್ತದೆ. ಇದು ಪ್ರಕೃತಿಯ ಒಂದು ಸಾಮಾನ್ಯ ನಿಯಮ. ತನ್ನ ತನ್ನ ಸ್ಥಿತಿಯನ್ನು ಮೊದಲಿನಂತೆಯೆ, ಯಥಾ ಸ್ಥಿತಿಯಲ್ಲಿಯೆ ಉಳಿಸಿಕೊಳ್ಳಲು ಪ್ರಾಣಿಗಳು ಯತ್ನಿಸುತ್ತವೆ. ಬದುಕಿರುವಷ್ಟು ಕಾಲವೂ ಬದುಕುವ ಕೆಲಸದಲ್ಲಿಯೆ ಮುಳುಗಿರುತ್ತವೆ. ಸತ್ತಮೇಲೂ ತನ್ನ ಸಂತಾನದ ಮೂಲಕ ಅದೇ ಸ್ಥಿತಿಯನ್ನು ಮುಂದೆಯೂ ಸಾಗಿಸಲು ಯತ್ನಿಸುತ್ತವೆ. ಆದ್ದರಿಂದ ಮಾನವಸೃಷ್ಟಿಯ ಪ್ರಾರಂಭದಲ್ಲಿ ಮನುಷ್ಯನಿಗೆ ತಾನು ಬದುಕಿರಲು ಆಗತ್ಯವಾದ ವಸ್ತುಗಳನ್ನು ಸಂಗ್ರಹಿಸುವುದೇ ಮುಖ್ಯ ಕೆಲಸವಾಗಿದ್ದಿರಬೇಕು. ವಿಶಾಲ ಪ್ರದೇಶಗಳಲ್ಲಿ ಸ್ವಚ್ಛಂದವಾಗಿ ವಿಹರಿಸುತ್ತಾ ಈ ಕೆಲಸವನ್ನು ಅವನು ಮಾಡುತ್ತಿದ್ದಿರಬೇಕು. ಬರುಬರುತ್ತ ಜನಸಂಖ್ಯೆ ಬೆಳೆದು, ಒಬ್ಬನ ಕೆಲಸದಿಂದ ಇನ್ನೊಬ್ಬನಿಗೆ ಅಡಚಣೆಯಾಗುವಂಥ ಪರಿಸ್ಥಿತಿ ಬಂದಿರಬೇಕು. ಅಂಥ ಪ್ರಸಂಗಗಳಲ್ಲಿ ಘರ್ಷಣೆ, ಹಿಂಸೆಯ ಪ್ರವೃತ್ತಿಗಳು ಹುಟ್ಟಿದುದು ಸ್ವಾಭಾವಿಕ. ಬದುಕಿಗೆ ಬೇಕಾದ ವಸ್ತುಗಳನ್ನು ಸಂಗ್ರಹಿಸುವ ಕೆಲಸದಲ್ಲಿ ಒಬ್ಬರನ್ನೊಬ್ಬರು ಹಿಂಸಿಸಿ ತಾವೇ ನಾಶವಾಗಿ ಹೋಗುವಂತಾಯಿತು ಅದರ ಪರಿಣಾಮ. ಜನಸಂಖ್ಯೆ ಕಡಮೆಯಿದ್ದಾಗ ನಾಶದ ಸಂಭವ ಕಡಮೆ ಇದ್ದಿರಬೇಕು. ಜನಸಂಖ್ಯೆ ಬೆಳೆದಾಗೆಲ್ಲ ಸಂಘರ್ಷಣೆಯ ಸಂದರ್ಭವೂ ಬೇಗ ಬೇಗ ಬರತೊಡಗಿತು. ಕಡೆಗೆ ಈ ಸಂಘರ್ಷಣೆ ಬೆಳೆಬೆಳೆದು ಮನುಷ್ಯನಿಗೆ ಆತ್ಮಸಂರಕ್ಷಣೆಯೇ ಒಂದು ಸಮಸ್ಯೆಯಾಯಿತು. ಬದುಕುವ ಪ್ರಯತ್ನದ ಫಲವಾಗಿಯೆ ಬದುಕುವುದು ಕಷ್ಟವಾಗಿ ಹೋಯಿತು. ತನ್ನ ಸ್ಥಿತಿಯನ್ನು ಸ್ಥಿರಗೊಳಿಸುವ ಪ್ರಕೃತಿಯ ಸ್ವಧರ್ಮ ಹೊಸ ರೂಪು ತಳೆದು ಇದಿರಿಗೆ ಬಂದು ನಿಂತಿತು. ಸಂಘರ್ಷಣೆ, ಹಿಂಸೆಗಳನ್ನು ಮಿತಿಯೊಳಗೆ ಇಡದಿದ್ದರೆ, ಅದಕ್ಕೊಂದು ನಿಯಂತ್ರಣವಿರದಿದ್ದರೆ ಪ್ರಕೃತಿ ತನ್ನ ಮೂಲರೂಪದಿಂದ ಉಳಿಯುವುದೇ ಅಸಂಭವವಾಯಿತು. ಆಗಿನಿಂದಲೇ ಮಾನವ ಸಮಾಜ ಹಿಂಸೆಯನ್ನು ಗೆಲ್ಲಲು ಹಲವು ಬಗೆಯ ಪ್ರಯತ್ನ ಮಾಡುತ್ತ ಬಂದಿದೆ.

ಕೇಂದ್ರವಾದದ ಗುಟ್ಟು : ಭಾಗವತದಲ್ಲಿ ಒಂದು ಕಥೆಯಿದೆ: ಜನರು 'ಮತ್ಸ್ಯ ನ್ಯಾಯ'ದಿಂದ ಸಂಕಟಗೊಂಡು ಬ್ರಹ್ಮನ ಬಳಿಗೆ ಹೋಗಿ ಮಾನವ ಸಮಾಜಕ್ಕೆ ಒದಗಿದ ಗಂಡಾಂತರವನ್ನು ತಿಳಿಸಿದರು. ಆಗ ಬ್ರಹ್ಮನು ಅವರ ರಕ್ಷಣೆಗಾಗಿ ಮನುವನ್ನು ದೊರೆಯಾಗಿ ಮಾಡಿ ಭೂಮಿಗೆ ಕಳಿಸಿದ. ಭಾಗವತದ ಈ ಕಥೆ ಮನುಷ್ಯನ ಈ ಪರಿಸ್ಥಿತಿಯ ಕಥೆ. ತಮ್ಮ ತಮ್ಮೊಳಗೆ ಸಂಘರ್ಷಣೆ ಹೆಚ್ಚಿ ಇಡೀ ಸಮಾಜವೇ ನಾಶವಾಗುವ ಸಂಭವ ಕಂಡು ಬಂದಾಗ ಮನುಷ್ಯ ಆ ಸಂಕಟವನ್ನು ತಪ್ಪಿಸಿಕೊಳ್ಳಲು ಉಪಾಯಗಳನ್ನು ಹುಡುಕತೊಡಗಿದ. ಸಮಾಜ ವ್ಯವಸ್ಥೆಯ ಒಂದು ಹೊಸ ಪ್ರಯೋಗ ಆಗ ಮೊದಲಾಯಿತು. ಸಹಕಾರದ ತಳಹದಿಯ ಮೇಲೆ ಸಮಾಜ ಸಂಘಟನೆ ನಡೆಯಿತು. ಆ ವ್ಯವಸ್ಥೆ ನಿಶ್ಚಿತವಾಗಿ ನಿರ್ವಿಘ್ನವಾಗಿ ನಡೆಯಲು ಒಬ್ಬ ಯಜಮಾನ, ಮುಖಂಡ ಬೇಕಾಯಿತು. ಅವನ ಸೃಷ್ಟಿಯಾಯಿತು. ತಮ್ಮ ಶಕ್ತಿಯಲ್ಲಿ ಸ್ವಲ್ಪ ಸ್ವಲ್ಪವನ್ನು ಕೂಡಿಸಿ ಒಬ್ಬ ವ್ಯಕ್ತಿಯಲ್ಲಿ ಕೇಂದ್ರಿತಗೊಳಿಸಿದರೆ, ಅವನು ವಿಶೇಷ ಶಕ್ತಿಶಾಲಿಯಾಗಿ ಉಳಿದವರನ್ನು ಕಟ್ಟಿನಲ್ಲಿಡಬಲ್ಲ; ಕನಿಷ್ಠ ಪಕ್ಷ ಆ ಚೌಕಟ್ಟಿನಲ್ಲಾದರೂ ಹಿಂಸೆ ಮಿತಿಗೊಂಡೀತು, ಶಾಂತಿ ಸಂಯಮ ನೆಲೆಗೊಂಡಾವು ಎಂದು ಜನ ಯೋಚಿಸಿದರು. ಹೀಗೆ ಶಾಂತಿ ಸಂಯಮ ಸ್ವಾತಂತ್ರ್ಯಗಳ ರಕ್ಷಣೆಗಾಗಿ ಮೊಟ್ಟಮೊದಲು ರಾಜತಂತ್ರ ಹುಟ್ಟಿತು. ಇದೇ ಕೇಂದ್ರ ವಾದದ ಪ್ರಾರಂಭ.

ಶಾಸಕ ವರ್ಗ-ಶೋಷಣೆ : ಈ ಕೇಂದ್ರ ಪುರುಷ ಅಥವಾ ದೊರೆ ಜನತೆಗಿಂತ ಹೆಚ್ಚು ಬಲಶಾಲಿ. ಅವನಿಗೆ ಹೆಚ್ಚಿನ ಗೌರವವಿತ್ತು. ಇದು ಒಡೆದು ಕಾಣುತ್ತದೆ. ತನ್ನ ಇರುವಿಕೆಯ ರೀತಿಯಿಂದಲೇ ಇವನು ಒಂದು ಬೇರೆ ಶ್ರೇಣಿಯ ಮನುಷ್ಯ ಎನಿಸಿಕೊಂಡ. ಹೀಗೆ ಸಮಾಜದಲ್ಲಿ ಎರಡು ವರ್ಗಗಳಾದವು : ಕೇಂದ್ರವರ್ಗ (ರಾಜವರ್ಗ), ಜನವರ್ಗ. ಕಾಲಕ್ರಮದಲ್ಲಿ ರಾಜನಿಗೆ ಸಂತಾನವಾಯಿತು. ತಮ್ಮ ಸ್ವರೂಪವನ್ನು ಯಥಾ ಸ್ಥಿತಿಯಾಗಿ ಸ್ಥಿರಗೊಳಿಸುವ ಬಯಕೆ ಆ ಸಂತಾನಕ್ಕೆ ಇರುವುದು ಸ್ವಾಭಾವಿಕ. ಈ ವ್ಯವಸ್ಥೆಯಲ್ಲಿ ಅಥವಾ ಶಾಸನ ಕ್ಷೇತ್ರದಲ್ಲಿ ಹೆಚ್ಚು ಜನರಿಗೆ ಸ್ಥಾನಕೊಡುವ ಆವಶ್ಯಕತೆಯಿರಲಿಲ್ಲ. ಆದ್ದರಿಂದ ತಮ್ಮ ಅಧಿಕಾರವನ್ನು ಸ್ಥಿರವಾಗಿಟ್ಟು

ಕೊಳ್ಳಲು ಉಳಿದ ಕ್ಷೇತ್ರಗಳಲ್ಲೂ ಅಧಿಕಾರ ಮಾಡಬೇಕಾಗಿ ಬಂತು. ಸಮಾಜದಲ್ಲಿ ಉಚ್ಚಸ್ಥಾನದಲ್ಲಿರಬೇಕೆಂದರೆ ಶಾಸನಕ್ಷೇತ್ರವನ್ನು ಬಿಟ್ಟರೆ ಇನ್ನೊಂದು ಆರ್ಥಿಕ ಕ್ಷೇತ್ರ. ಆದ್ದರಿಂದ ಈ ರಾಜವರ್ಗದವರು ಆರ್ಥಿಕ ಕ್ಷೇತ್ರದಲ್ಲಿ ಸ್ವಲ್ಪ ಕೊಡ-ತೆಗೆದುಕೊಳ್ಳಲು ಪ್ರಾರಂಭಿಸಿ, ಉತ್ಪಾದನೆ ಆಗಬೇಕು-ಆದರೆ ಸ್ವಯಂ ದುಡಿಯಬಾರದು, ಇಂಥದೊಂದು ಆದಾಯ ತರುವ ಪರಂಪರೆಯನ್ನು ಮೊದಲಿಟ್ಟರು. ಆಡಳಿತಗಾರರು ಹೀಗೆ ತಮ್ಮ ವರ್ಗವನ್ನು ವಿಸ್ತರಿಸಿ ಆರ್ಥಿಕ ಕ್ಷೇತ್ರದಲ್ಲಿಯೂ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡರು. ಇದರಿಂದ, ತನ್ನ ರಕ್ಷಣೆಗಾಗಿ ಮನುಷ್ಯ ನಿರ್ಮಿಸಿದ ವಿಶಿಷ್ಟ ಕೇಂದ್ರೀಯ ವರ್ಗವಾದ ರಾಜವರ್ಗ ರಾಜಕೀಯ ಆರ್ಥಿಕ ಎರಡೂ ಕ್ಷೇತ್ರಗಳನ್ನೂ ಸ್ವಾಧೀನಪಡಿಸಿಕೊಂಡಿತು. ಆಮೇಲೆ ಕ್ರಮೇಣ ಪ್ರಜೆಯ ಶಾಸನ-ಶೋಷಣ ಎರಡೂ ದಿನೇ ದಿನೇ ಹೆಚ್ಚತೊಡಗಿತು.

ಆದರೆ ಮತ್ತೆ ಒಂದು ದಿನ ಬಂತು : ಯಾವ ಸುಖ ಶಾಂತಿಯನ್ನು ಬಯಸಿ ಮನುಷ್ಯ ಕೇಂದ್ರ - ಪುರುಷನನ್ನು, ರಾಜನನ್ನು ಸ್ಥಾಪಿಸಿದ್ದನೋ ಅದಕ್ಕಾಗಿಯೇ ಅವನನ್ನು ಕಿತ್ತುಹಾಕಬೇಕೆಂದು ಯೋಚಿಸತೊಡಗಿದ. ಕೇಂದ್ರೀಯ ಶಕ್ತಿಯ ಮೂಲಕ ಯಾವ ಹಿಂಸೆಯನ್ನು ಮೀರಿಯೊಳಗಿಡ ಬಯಸಿದನೋ ಅದೇ ಹಿಂಸೆ ಶೋಷಣದ ರೂಪ ತಳೆದು ಹೆಚ್ಚು ಹೆಚ್ಚಾಗಿ ಹರಡುತ್ತಿರುವುದು ಕಂಡುಬಂತು. ಪ್ರಜೆಗೆ ಆತ್ಮಸಂರಕ್ಷಣೆಯ ಸಮಸ್ಯೆ ಬಂದು ನಿಂತಿತು. ಪ್ರಜೆಯ ಬಾಳು ಘೋರ ವಿಪತ್ತಿಗೆ ಒಳಗಾಯಿತು. ಈ 'ಕೇಂದ್ರವಾದ'ವನ್ನು ನಿರ್ಮಿಸಿ ನಾವು ದೊಡ್ಡ ತಪ್ಪುಮಾಡಿದೆವು ಎನಿಸಿತು ಪ್ರಜೆಗೆ. ಕೇವಲ ವ್ಯವಸ್ಥೆ ಆಡಳಿತಗಳಿಗಾಗಿ 'ಕೇಂದ್ರ' ವನ್ನು ನಿರ್ಮಿಸಿದರೆ, ಅದು ಆರ್ಥಿಕ ಕ್ಷೇತ್ರದಲ್ಲೂ ಕಾಲಿಡಬೇಕೆ! ಮನುಷ್ಯನ ಆವಶ್ಯಕತೆಗಳ ನಿಯಂತ್ರಣದ ಅಧಿಕಾರವನ್ನು ತನ್ನ ಕೈಯಲ್ಲಿಟ್ಟುಕೊಂಡಿತು ಇದು. ಹೀಗೆ ಆರ್ಥಿಕ ಕ್ಷೇತ್ರದಲ್ಲಿ ಕಾಲಿಟ್ಟು ಮನುಷ್ಯನಿಗೆ ಮಾರಿಯಾಯಿತು ಕೇಂದ್ರವಾದ.

ಪ್ರಜಾತಂತ್ರದ ಉದಯ : ರಾಜಕೀಯದ ಜೊತೆಗೆ ಆರ್ಥಿಕ ಜೀವನವನ್ನೂ ವಶಪಡಿಸಿಕೊಂಡುದರಿಂದ ಆಡಳಿತಗಾರರ ವರ್ಗಕ್ಕೆ ಪ್ರಜೆಯನ್ನು ಅದುಮಿಹಾಕಲು ಹೆಚ್ಚು ಸಾಮರ್ಥ್ಯ ಬಂತು. ಆಮೇಲೆ ಗುಲಾಮ

ಗಿರಿಯ ಪದ್ಧತಿ ಬೆಳೆಯಿತು. ಆದರಿಂದಂತೂ ಪ್ರಜೆಯ ಸ್ಥಿತಿ ಮತ್ತಷ್ಟು ಶೋಚನೀಯವಾಯಿತು. ಮನುಷ್ಯನಿಗೆ ಮೂಲಭೂತ ಸ್ವಾತಂತ್ರ್ಯವೇ ಇಲ್ಲದಾಯಿತು. ಇದರ ಪರಿಣಾಮವಾಗಿ ಪ್ರಜೆಗೆ ಹೇಗಾದರೂ ಮಾಡಿ ಈ ಕೇಂದ್ರವನ್ನು ಮುರಿದುಹಾಕಬೇಕೆಂಬ ವಿಚಾರ ಹುಟ್ಟಿತು. ತಾವೇ ತಮ್ಮ ಶಕ್ತಿಯನ್ನು ಧಾರೆಯೆರೆದು ಒಬ್ಬ ಕೇಂದ್ರೀಯ ವ್ಯಕ್ತಿಯ ಕೈಗೆ ಕೊಟ್ಟಿದ್ದುದನ್ನು ಮತ್ತೆ ತಮ್ಮ ಕೈಗೇ ತೆಗೆದುಕೊಳ್ಳಲು ಪ್ರಜೆ ಸಂಕಲ್ಪ ಮಾಡಿತು. ಕೇಂದ್ರೀಯ ಅಧಿಕಾರದ ವಿಕೇಂದ್ರೀಕರಣವನ್ನು ಆಲೋಚಿಸ ತೊಡಗಿದರು. ರಾಜಕೀಯ ಭಾಷೆಯಲ್ಲಿ ಇದನ್ನೇ ಪ್ರಜಾತಂತ್ರದ ಸ್ಥಾಪನೆ ಎನ್ನುತ್ತೇವೆ. ಆದರೆ ಜನತೆ ಕೊಟ್ಟ ಅಧಿಕಾರವನ್ನು ಭೋಗಿಸುತ್ತ ಕೇಂದ್ರಕ್ಕೆ ಕೆಲವು ತಲೆಮಾರೇ ಆಗಿಹೋಗಿದ್ದವು. ಆ ಭೋಗವನ್ನು ಬಿಡುವುದು ಸುಲಭ ಸ್ವಾಭಾವಿಕ ಆಗಿರಲಿಲ್ಲ. ಕೇಂದ್ರಕ್ಕೂ ಪ್ರಕೃತಿಯ ಮೂಲ ಸ್ವಭಾವಾನುಸಾರ ತನ್ನ ಸ್ವರೂಪ ಸಂರಕ್ಷಣೆಯ ಪ್ರಯತ್ನ ಸಹ ಜವೇ. ಆದ್ದರಿಂದ ತನ್ನ ರಕ್ಷಣೆಗಾಗಿ ಕೇಂದ್ರ ನೂರಾರು ವರ್ಷಗಳಿಂದ ಕೂಡಿಟ್ಟಿದ್ದ ಸಾಧನ-ಶಕ್ತಿಗಳನ್ನು ಪ್ರಜಾತಂತ್ರವನ್ನು ತುಳಿದುಹಾಕಲು ಉಪಯೋಗಿಸಿತು. ಆದರಿಂದ ರಾಜನಿಗೂ ಪ್ರಜೆಗಳಿಗೂ ಘರ್ಷಣೆ ಯಾಯಿತು. ಅದು ರಾಜಕೀಯ ಕ್ರಾಂತಿಯ ರೂಪನ್ನು ತಳೆಯಿತು. ಫ್ರಾನ್ಸಿನ ರಾಜ-ವಿಪ್ಲವದಿಂದ ಮೊದಲಾಯಿತು ಈ ಕ್ರಾಂತಿ. ಆಮೇಲೆ ಯೂರೋಪಿನಲ್ಲೆಲ್ಲಾ ಹರಡಿತು. ಈ ಕ್ರಾಂತಿಯ ಇದಿರಿಗೆ ರಾಜಶಕ್ತಿ ನಿಲ್ಲಲಾರದೆ ಹೋಯಿತು. ಒಂದು ರೀತಿಯಲ್ಲಿ ಪ್ರಜೆಯ ಸಫಲ ಕ್ರಾಂತಿ ಪ್ರಜಾತಂತ್ರವನ್ನು ನೆಲೆಗೊಳಿಸಿತು. ಪ್ರಜಾತಂತ್ರದ ಅಲೆಗಳು ಕೇಂದ್ರೀಯ ರಾಜತಂತ್ರವನ್ನು ನಾಶಮಾಡಿದವು.

ಔದ್ಯೋಗಿಕ ಕ್ರಾಂತಿ-ಅದರ ಪರಿಣಾಮ : ರಾಜಕೀಯದಲ್ಲಿ ಸಫಲ ವಾದ ಪ್ರಜಾತಂತ್ರ ಆರ್ಥಿಕ ಕ್ಷೇತ್ರಕ್ಕೆ ಹರಡುವುದು ಸ್ವಾಭಾವಿಕವಾಗಿತ್ತು. ಜಗತ್ತಿನಲ್ಲಿ ಯಾವುದೂ ಒಂದೇ ಸ್ಥಾನದಲ್ಲಿ ನಿಂತುಹೋಗುವುದಿಲ್ಲ. ಅದಕ್ಕೆ ಇನ್ನೊಂದು ಶಕ್ತಿ ಅಡ್ಡ ಬಂದು ತಡೆಯುವವರೆಗೂ ಇದು ಮುಂದೆ ಸಾಗಬೇಕು–ಇದು ಪ್ರಕೃತಿನಿಯಮ. ರಾಜಕೀಯ ಸತ್ತೆಯನ್ನು ವಿಕೇಂದ್ರಿತ ಗೊಳಿಸುವ ಚಳುವಳಿ ನಡೆಯುತ್ತಿರುವಾಗಲೇ ವಿಜ್ಞಾನಿ ಜೇಮ್ಸ್‌ವಾಟ್

ಆವಿಯ ಶಕ್ತಿಯನ್ನು ಕಂಡುಹಿಡಿದ. ಕೇಂದ್ರವಾದಿಗಳು ತಮ್ಮ ಸ್ಥಿತಿಯನ್ನು ಸಂಘಟಿಸಿಕೊಳ್ಳಲು ಆ ಶಕ್ತಿಯನ್ನು ಸಾಧನವಾಗಿ ಮಾಡಿಕೊಂಡರು. ಮೊದಲು ಕೈಗಾರಿಕೆಯ ಕಸಬುದಾರರನ್ನು ತಮ್ಮ ಕಾರಖಾನೆಗಳಲ್ಲಿ ಗುಲಾಮರನ್ನಾಗಿಮಾಡಿಟ್ಟುಕೊಂಡು ಸಮಾಜಕ್ಕೆ ಬೇಕಾದ ಪದಾರ್ಥಗಳ ಹುಟ್ಟುವಳಿ ಮಾಡುತ್ತಿದ್ದರು. ಈಗ ಕೆಲಸಗಾರರ ದಾಕ್ಷಿಣ್ಯ ಅಗತ್ಯವಿಲ್ಲ ವಾಯಿತು. ದೊಡ್ಡ ದೊಡ್ಡ ಯಂತ್ರಗಳು ಉತ್ಪಾದನೆ ಮಾಡತೊಡಗಿದವು. ಉತ್ಪತ್ತಿಯ ರೀತಿಯಲ್ಲಿ ಕ್ರಾಂತಿಯಾಯಿತು. ಶ್ರಮಿಕ ವರ್ಗದಲ್ಲಿ ನಿರುದ್ಯೋಗ, ಕಷ್ಟ ಹೆಚ್ಚಿತು. ಒಂದು ಕಡೆ ರಾಜಕೀಯ ಕ್ರಾಂತಿಯ ಮೂಲಕ ಆಡಳಿತದ ಚೌಕಟ್ಟನ್ನು ಸಡಲಿಸುತ್ತಿದ್ದರೆ, ಇನ್ನೊಂದು ಕಡೆ ಅದೇ ಸಮಯದಲ್ಲಿ ಔದ್ಯೋಗಿಕ ಕ್ರಾಂತಿಯ ಮೂಲಕ ಉತ್ಪಾದನಕ್ರಮ ವನ್ನು ಕೇಂದ್ರೀಕರಿಸುತ್ತಿದ್ದರು. ಕೇಂದ್ರೀಕರಣದ ಈ ಕಾರ್ಯ ಬಹಳ ಪ್ರಬಲ, ಬಹಳ ಮೋಹಕ ಆಗಿತ್ತು. ಇದಕ್ಕೆ ಜನ್ಮಕೊಟ್ಟವರೇ ಅದರ ಸಂಚಾಲಕರೇ ಅದರ ಆಸೆಗೆ ಬಲಿಯಾಗಿ ತಾವೇ ಅದರ ಮೇಲೆ ಗಟ್ಟಿಯಾಗಿ ಕುಳಿತುಬಿಟ್ಟರು. ಸಮಾಜದಲ್ಲಿ ಒಂದು ಹೊಸ ವೇಗ, ಹೊಸ ಪ್ರವೃತ್ತಿ, ಹೊಸ ಪರಿಣಾಮ ಕಂಡುಬಂದವು.

ಇಲ್ಲಿಯವರೆಗೆ ಉತ್ಪಾದನೆಯ ಯಂತ್ರ ಕೆಲಸಗಾರರ ಬಳಿಯಲ್ಲೇ ಇರುತ್ತಿತ್ತು. ಆದ್ದರಿಂದ ರಾಜಕೀಯ ಪ್ರಗತಿಯ ಜೊತೆಯಲ್ಲಿ ಆರ್ಥಿಕ ಕ್ಷೇತ್ರದಲ್ಲಿ ವಿಕೇಂದ್ರಿತ, ಸ್ವತಂತ್ರ, ಸ್ವಾವಲಂಬಿ ಆಗಿ ಇರುತ್ತಿದ್ದ ಕೆಲಸ ಗಾರರು, ಈಗ ತಮ್ಮ ತಮ್ಮ ಯಂತ್ರಗಳನ್ನು ಹೊತ್ತುಕೊಂಡು ಕಾರಖಾನೆ ಯಿಂದ ಹೊರಬಿದ್ದು ಸ್ವತಂತ್ರವಾಗಿ ಉತ್ಪಾದನೆ ಮಾಡಲು ಸಾಧ್ಯವಿರಲಿಲ್ಲ. ಆ ಉತ್ಪಾದನೆಗೆ ಕೆಲಸಗಾರ ಯಜಮಾನನಲ್ಲ. ತನ್ನ ಯಂತ್ರದಿಂದ ಉತ್ಪಾದನೆ ಮಾಡುವ ಸ್ವಾತಂತ್ರ್ಯವಿಲ್ಲದಾಯಿತು ಅವನಿಗೆ. ಬರಿಗೈಯಿಂದ ದೊಡ್ಡ ದೊಡ್ಡ ಗಿರಣಿಗಳಲ್ಲಿ ಬಹಳ ಬೃಹತ್ತಾದ ಯಂತ್ರಗಳ ಮೂಲಕ ಕೆಲಸಮಾಡಬೇಕಾಯಿತು. ಆವಿಯ ಯಂತ್ರಗಳನ್ನು ಕಂಡು ಹಿಡಿದುದರ ಫಲವಾಗಿ ಉತ್ಪಾದಕರ, ಶ್ರಮಿಕರ ಆರ್ಥಿಕ ನಿಃಶಸ್ತ್ರೀಕರಣವಾಯಿತು. ಆದರಿಂದ, ಸಮಾಜ ಯಾವ ವಿರಾಟ್ - ಕ್ರಾಂತಿಯನ್ನು ಮಾಡಿ ಎಂಥ ಪ್ರಗತಿಯನ್ನು ಸಾಧಿಸಬಯಸಿತ್ತೋ ಆ ಕಲ್ಪನೆಯೆಲ್ಲ ನಿಷ್ಫಲವಾಯಿತು.

ಮೂಲ ಕ್ರಾಂತಿಯು ಸಿಟ್ಟೇ ಬದಲಾಗಿ ಸಮಾಜದ ಎಲ್ಲಾ ಸಮಸ್ಯೆಗಳೂ ಇದ್ದವು ಇದ್ದಹಾಗೆಯೇ ಉಳಿದವು.

ಬಂಡವಾಳಗಾರ ಸತ್ತಾಧಾರಿಯಾದ : ಬದುಕಿನ ಸಾಧನಗಳನ್ನು ಸಂಗ್ರಹಿಸುವುದು ಮನುಷ್ಯನ ಮೂಲ ಸ್ವಭಾವ. ಈ ಸ್ವಭಾವದ ಪರಿಣಾಮವೇ ಉತ್ಪತ್ತಿ. ಆದ್ದರಿಂದ ಉತ್ಪತ್ತಿ ಯಾವ ಪ್ರಕಾರದ್ದೋ ಸಮಾಜದ ರಚನೆಯೂ ಅದೇ ಪ್ರಕಾರದ್ದು ಆಗಬೇಕು. ಉತ್ಪಾದನದ ರೀತಿ ಕೇಂದ್ರಿತವಾದಾಗ ಉಳಿದ ರೀತಿಯಲ್ಲೂ ಸಮಾಜ ಕೇಂದ್ರಿತವಾಗತೊಡಗಿತು. ಆದ್ದರಿಂದ ಸಮಾಜದ ಸಮಸ್ತ ಸಂಘಟನೆ ಒಂದು ಕೇಂದ್ರೀಯ ಯಂತ್ರಕ್ಕೆ ಅಧೀನವಾಯಿತು. ಶಾಸನ-ಯಂತ್ರ ಕೇಂದ್ರಿತವಾದುದರಿಂದ ಅದನ್ನು ನಡೆಸುವವರು ಯಾರಾದರೊಬ್ಬ ನಿರ್ದಿಷ್ಟ ವ್ಯಕ್ತಿಯಾಗಿರಬೇಕು. ಎಲ್ಲರೂ ಅದನ್ನು ನಡೆಸಲಾರರು. ಆದ್ದರಿಂದ ಪ್ರತಿನಿಧಿಗಳ ವ್ಯವಸ್ಥೆಯರೂಪನ್ನು ತಳೆಯಿತು ಪ್ರಜಾತಂತ್ರ. ಜನರ ಅಭಿಪ್ರಾಯದಂತೆ ಯಾರನ್ನೋ ಒಬ್ಬರನ್ನು ಪ್ರತಿನಿಧಿಯಾಗಿ ಮಾಡಿ ಅವನ ಮೂಲಕ ಆಡಳಿತದ ಸೂತ್ರಗಳನ್ನು ಆಡಿಸುತ್ತ ಬಂದರು.

ಸತ್ತಾಧಾರಿ ವರ್ಗ ಯಂತ್ರಗಳನ್ನು ವಶಪಡಿಸಿಕೊಂಡು ಸಮಾಜದ ಉತ್ಪತ್ತಿಯನ್ನು ಸ್ವಾಧೀನಪಡಿಸಿಕೊಂಡುದರಿಂದ, ಉತ್ಪತ್ತಿಯಾದ ವಸ್ತುಗಳ ಬಲದಿಂದ ಜನರ ಮತವನ್ನು ಕೊಂಡುಕೊಳ್ಳಲೂ ತಾವೇ ಪ್ರತಿನಿಧಿಗಳಾಗಲೂ ಅವರಿಗೆ ಸುಲಭವಾಯಿತು. ಹೀಗೆ ಮಾಡಿ ಶಾಸನ-ಯಂತ್ರವನ್ನೂ ಅವರು ತಮ್ಮ ಸ್ವಾಧೀನ ಮಾಡಿಕೊಂಡರು. ಯಾರ ಕೈಗೆ ಉತ್ಪಾದನ ಯಂತ್ರ ಬಂತೋ ಅವರ ಕೈಗೆ ಶಾಸನ ಯಂತ್ರವೂ ಬಂತು. ಶಾಸನ ಯಂತ್ರದಿಂದ ಉತ್ಪಾದನ ಯಂತ್ರ, ಉತ್ಪಾದನ ಯಂತ್ರದಿಂದ ಶಾಸನ ಯಂತ್ರ—ಹೀಗೆ ಯಾಜಮಾನ್ಯ ಬದಲಾಯಿತು. ಏನು ಬದಲಾದರೂ ಪ್ರಜೆಗಳೇನೋ ಇದ್ದಲ್ಲೇ. ಉತ್ಪಾದನೆ-ಶಾಸನ ಎರಡೂ ಪೂರಾ ಕೇಂದ್ರಿತವಾದುದರಿಂದ ಬಂಡವಾಳಗಾರರೇ ಸತ್ತಾಧಾರಿಗಳಾದರು. ಹಿಂದೆ ಪಾಳೆಯಗಾರಿಕೆಯಲ್ಲಿ ಆದದ್ದಕ್ಕಿಂತ ಹೆಚ್ಚು ಪ್ರಜಾಶೋಷಣೆ ಇವರಲ್ಲಿ ಆಯಿತು. ಪ್ರಜೆಗಳು ಹೆಚ್ಚು ತುಳಿತಕ್ಕೆ ಸಿಕ್ಕಿದರು.

ಗುಲಾಮಗಿರಿಯ ಕೊನೆ, ಕೂಲಿಗಾರರ ಪ್ರಾರಂಭ : ಪಾಳೆಯಗಾರಿಕೆಯಲ್ಲಿ ಸಮಾಜದಲ್ಲಿ ದುಡಿತಗಾರ ಗುಲಾಮನಾಗಿದ್ದ. ಅವನಿಗೆ ಯಾವ ಬಗೆಯ ಸ್ವಾತಂತ್ರ್ಯವೂ ಇರಲಿಲ್ಲ. ಧಣಿ ಏಳೆಂದರೆ ಎದ್ದ, ಕೂಡೆಂದರೆ ಕೂತ. ಬಂಡವಾಳಗಾರಿಕೆಯಲ್ಲಿ ಬಂಡವಾಳಗಾರರು ಸ್ವಾತಂತ್ರ್ಯದ ಸವಿಮಾತುಗಳನ್ನಾಡಿ ಗುಲಾಮಗಿರಿಯನ್ನು ಅಳಿಸಿಹಾಕಿ, ಅವರನ್ನು ಬಿಡುಗಡೆ ಮಾಡಿದರು. ಹೀಗೆ ಮಾಡದೆ ತಮ್ಮ ಸ್ವಾರ್ಥ ಸಿದ್ಧಿಸುವುದಿಲ್ಲವೆಂಬ ಲೆಕ್ಕಾಚಾರ ಅವರದು. ಆವಿಯ ಯಂತ್ರಗಳ ಮೂಲಕ ಉತ್ಪಾದನೆಯಾಗಲು ಮೊದಲಾಯಿತು. ಅದರಿಂದ ಮೊದಲಿನ ಹಾಗೆ ಶ್ರಮಿಕರ ಅಗತ್ಯವಿರಲಿಲ್ಲ. ಗುಲಾಮರನ್ನು ಪರಿವಾರ ಸಮೇತ ಸಾಕಿ ಸಲಹುವುದು ಬಹಳ ಕಷ್ಟಕರವಾಗಿತ್ತು. ಗುಲಾಮರನ್ನು ಬಿಡುಗಡೆ ಮಾಡಿ, ಕೆಲಸವಿದ್ದಾಗ ಕೂಲಿಗಾರರನ್ನು ಕರೆದು ಕೆಲಸ ಮಾಡಿಸಿಕೊಂಡರೆ, ಅದರಲ್ಲಿ ಲಾಭ ಹೆಚ್ಚು ಎಂಬುದನ್ನು ಲೆಕ್ಕ ಹಾಕಿದರು. ಗುಲಾಮ–ದುಡಿತಗಾರರಿಂದ ಮಾಡಿಸಿಕೊಳ್ಳುವುದಕ್ಕಿಂತ ಸ್ವತಂತ್ರ–ಕೂಲಿಗಾರರಿಂದ ಕೆಲಸ ಮಾಡಿಸಿಕೊಳ್ಳುವುದು ಅವರಿಗೆ ಹೆಚ್ಚು ಲಾಭಕರವಾಗಿ ಕಂಡಿತು. ಅದರ ಪರಿಣಾಮವಾಗಿ ಉದ್ಯೋಗವಿಲ್ಲದ ದುಡಿತಗಾರರ ಕುಟುಂಬಗಳು ಹೊಟ್ಟೆಗಿಲ್ಲದೆ ಸಾಯತೊಡಗಿದವು.

ಯಂತ್ರ–ಗಿರಣಿಗಳಿಂದ ಕೆಲಸ ನಡೆಯತೊಡಗಿತು. ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿತು. ಯಾರಾದರೊಬ್ಬ ಕೂಲಿಗಾರ ಬಂಡವಾಳಗಾರರ ಅತ್ಯಾಚಾರವನ್ನು ಸಹಿಸುವುದಿಲ್ಲವೆಂದರೆ, ಅವನ ಬದಲು ಕೆಲಸಕ್ಕೆ ಬರಲು ಅನೇಕ ನಿರುದ್ಯೋಗಿಗಳು ನಿರ್ಗತಿಕರು ಏನೇ ಕರಾರು ಹಾಕಿದರೂ ಒಪ್ಪಿ ಸಿದ್ಧರಾದರು. ಇದರಿಂದ ಅವರನ್ನು ಮನಸ್ಸಿಗೆ ಬಂದಂತೆ ಶೋಷಿಸಲು ಬಂಡವಾಳಗಾರರಿಗೆ ಸರಾಗವಾಯಿತು.

ಸ್ವಾವಲಂಬಿ ಉತ್ಪಾದನದ ನಾಶ—ಪ್ರಜಾತಂತ್ರದ ನಾಶ : ಬಂಡವಾಳಗಾರಿಕೆಯಿಂದ ಬರೀ ಕೂಲಿಗಾರರೇ ಅಲ್ಲ, ರೈತರೂ ಇತರರೂ ಮೊದಲಿಗಿಂತ ಹೆಚ್ಚು ಕಷ್ಟಕ್ಕೆ ಸಿಕ್ಕಿದರು. ಪಾಳೆಯಗಾರಿಕೆಯಲ್ಲಿ ಒಂದು ಅನುಕೂಲವಿತ್ತು. ಪಾಳೆಯಗಾರರೇ ಹೆಚ್ಚಾಗಿ ತಮ್ಮತಮ್ಮೊಳಗೆ ಕಚ್ಚಾಡುತ್ತಿದ್ದುದರಿಂದ

ಪ್ರಜೆ ಆದರ ಲಾಭಪಡೆಯುತ್ತಿದ್ದರು. ಅವರ ವೈಯಕ್ತಿಕಸ್ವಭಾವ - ವೃತ್ತಿಗಳಲ್ಲಿಯೂ ಬೇಕಾದಷ್ಟು ವೈವಿಧ್ಯವಿತ್ತು. ಇದರಿಂದಲೂ ಆಗಾಗ ಪ್ರಜೆಯ ಪರಿಸ್ಥಿತಿ ಬದಲಾಗುವ ಅವಕಾಶವಿತ್ತು. ಪಾಳೆಯಗಾರರಿಗೂ ಪ್ರಜೆಗಳಿಗೂ ಪ್ರಜೆಗಳಿಗೂ ಸ್ವಲ್ಪ ವೈಯಕ್ತಿಕ ಸಂಬಂಧವೂ ಇರುತ್ತಿತ್ತು. ಆದ್ದರಿಂದ ಪ್ರಜೆಗೆ ಆಗಾಗ ಏನಾದರೂ ಸ್ವಲ್ಪ ಪರಿಹಾರ ಸಿಗುತ್ತಿತ್ತು. ಉತ್ಪತ್ತಿಯ ಸಾಧನಗಳು ಉತ್ಪಾದಕರ ಕೈಯಲ್ಲಿಯೆ ಇದ್ದುದರಿಂದ ಕಾರಖಾನೆಗಳ ಹೊರಗೂ ತನಗೆ ಬೇಕಾದಷ್ಟನ್ನು ಉತ್ಪಾದಕರು ಹುಟ್ಟುವಳಿ ಮಾಡುತ್ತಿದ್ದರು. ಕೋಠಿ-ಕಾರಖಾನೆಗಳಲ್ಲಿ ಕೇಂದ್ರಿತವಾಗಿದ್ದರೂ ಬಹಳ ಮಟ್ಟಿಗೆ ಉತ್ಪಾದನೆ ವಿಕೇಂದ್ರಿತವಾಗಿಯೆ ಇತ್ತು. ತಮ್ಮ ಬಾಳು ಬದುಕಿನ ಅಗತ್ಯಗಳಿಗಾಗಿ ಪ್ರಜೆಗಳು ಪಾಳೆಯಗಾರರ ಮನೆಯ ಬಾಗಿಲು ಕಾದು ಕೂಡಬೇಕಾಗಿರಲಿಲ್ಲ. ಆಡಳಿತದ ರೂಪು - ರೀತಿ, ಆಕಾರ - ಪ್ರಕಾರ ಕೇಂದ್ರಿತವಾಗಿದ್ದರೂ ಪಾಳೆಯಗಾರರ ಸಂಖ್ಯೆ ಹೆಚ್ಚಾದುದುದರಿಂದ ಕೇಂದ್ರವೂ ವಿಕೇಂದ್ರಿತವಾಗಿಯೆ ಸಾಗಿತ್ತು. ಆದರೆ ಬಂಡವಾಳಗಾರಿಕೆಯಲ್ಲಿ ಕೇಂದ್ರೀಕರಣ ಹೆಚ್ಚುತ್ತ ಬಂತು. ಕ್ರಮೇಣ ಹಣಗಾರರದೇ ಒಂದು ಗುಂಪಾಯಿತು. ಚಿಕ್ಕ ಕಂಪೆನಿಗಳು ಮುರಿದು ದೊಡ್ಡ ಕಂಪೆನಿಗಳಾದವು. ಪ್ರಜೆಗೂ ಬಂಡವಾಳಗಾರರಿಗೂ ನಡುವೆ ದೂರ ಹೆಚ್ಚಾಯಿತು. ಉತ್ಪಾದನ ಸಾಧನಗಳು ಪ್ರಜೆಯ ಕೈಬಿಟ್ಟು ಬಂಡವಾಳಗಾರರ ಕೈಸೇರ ತೊಡಗಿದವು. ಪ್ರಜೆಯ ಆರ್ಥಿಕ ನಿಃಶಸ್ತ್ರೀಕರಣ ಸಂಪೂರ್ಣವಾಯಿತು. ಸ್ವತಂತ್ರ ಸ್ವಾವಲಂಬಿ ಪದ್ಧತಿಯನ್ನು ಬಿಟ್ಟು ಪ್ರಜೆ ತನ್ನ ಆವಶ್ಯಕತೆಗಳಿಗಾಗಿ ಈ ಹಣಗಾರರನ್ನೇ ಪೂರ್ತಿಯಾಗಿ ಆಶ್ರಯಿಸಬೇಕಾಯಿತು. ಆಗ ಅವರು ಹೇಳಿದ ಕರಾರುಗಳನ್ನೆಲ್ಲಾ ಒಪ್ಪಿಕೊಳ್ಳಲೇ ಬೇಕಾಯಿತು. ಇಷ್ಟೆಲ್ಲ ಆದರೂ ಎಲ್ಲವೂ ಪ್ರಜೆಯ ಅಭಿಪ್ರಾಯದಂತೆ, ಪ್ರಜಾಪ್ರತಿನಿಧಿಗಳ ಅಭಿಪ್ರಾಯದಂತೆ ನಡೆಯುತ್ತಿದೆ ಎಂದೇ ಹೇಳುತ್ತಿದ್ದರು. ಇಂಥ ಕೂಲಿಗಾರರ 'ಪ್ರತಿನಿಧಿ ತಂತ್ರ'ವನ್ನು 'ಪ್ರಜಾತಂತ್ರ' ಎಂದರೆ ಪ್ರಜಾತಂತ್ರವನ್ನು ಪರಿಹಾಸಮಾಡಿದ ಹಾಗೆ. ಹೀಗೆ ತಮ್ಮ ಬಾಳುಬದುಕಿನ ಅಗತ್ಯಕ್ಕಾಗಿ ಇತರರ ತುಳಿತಕ್ಕೆ ಸಿಕ್ಕ ಜನ ಏನು ಸ್ವತಂತ್ರಾಭಿಪ್ರಾಯ ಕೊಟ್ಟಾರು?

ಔದ್ಯೋಗಿಕ ಕ್ರಾಂತಿ ಹೀಗೆ ಬಂಡವಾಳಗಾರಿಕೆಗೆ ಜನ್ಮ ಕೊಟ್ಟಿತು. ಹುಟ್ಟುತ್ತಲೇ ಅದು ಪ್ರಜಾತಂತ್ರವನ್ನು ಕೊಂದುಹಾಕಿತು. ಪ್ರಜಾತಂತ್ರದ ಪವಿತ್ರ ಕಲ್ಪನೆಗಳೆಲ್ಲ ಪುಸ್ತಕಗಳಲ್ಲಿಯೆ ಉಳಿದವು. ಅವಕ್ಕೆ ಪ್ರಾಣವೇ ಬರಲಿಲ್ಲ. ಕೋರ್ಟಿನಲ್ಲಿ ಡಿಕ್ರಿ ಪಡೆದರೂ ರೈತನಿಗೆ ಹೊಲ ಸ್ವಾಧೀನವಾಗದೆ ಇರುತ್ತದಲ್ಲ ಒಮ್ಮೊಮ್ಮೆ; ಹಾಗಾಯಿತು ಪ್ರಜೆಯ ಸ್ಥಿತಿ.

ಸ್ವಚ್ಛಂದ ಉತ್ಪತ್ತಿಯ ಫಲ: ಬಂಡವಾಳಗಾರಿಕೆಯಲ್ಲಿ ಮನ ಬಂದಂತೆ ಉತ್ಪಾದನೆ ಮಾಡಿದುದರಿಂದ ಉಪಭೋಗ್ಯ ವಸ್ತುಗಳ ಅಪವ್ಯಯ ವಾಗತೊಡಗಿತು. ಸ್ವೇಚ್ಛೆಯಾಗಿ ಉತ್ಪಾದನೆ ಮಾಡುವಾಗ ಸಮಾಜಕ್ಕೆ ಏನು ಬೇಕು, ಎಂಥ ಸಾಮಗ್ರಿ ಬೇಕು ಎಂಬುದನ್ನು ಯಾರೂ ನೋಡರು. ತಾತ್ಕಾಲಿಕ ಪರಿಸ್ಥಿತಿಗೆ ಅನುಸಾರವಾಗಿ ಯಾವುದರಿಂದ ಹೆಚ್ಚು ಲಾಭ ಬರುತ್ತದೇ ಅದನ್ನು ಉತ್ಪತ್ತಿಮಾಡಲಿಕ್ಕೇ ಕಚ್ಚಾ ಮಾಲೆಲ್ಲವನ್ನೂ ಬಳಸು ತ್ತಾರೆ. ನಿರುದ್ಯೋಗ ಹೆಚ್ಚಿದುದರಿಂದ ಪ್ರಜೆಯ ಕ್ರಯಶಕ್ತಿ ಕಡಮೆ ಯಾಯಿತು. ಅದರಿಂದ ಕೊಳ್ಳುವವರ ಸಂಖ್ಯೆ ತಗ್ಗಿತು. ಯಾವ ವಸ್ತುವಿಗೆ ಗಿರಾಕಿಯಿದೆ, ಎಷ್ಟು ಎನ್ನುವುದೇ ಅನಿಶ್ಚಿತವಾಯಿತು. ಏನು ಬೆಳೆಯಬೇಕೋ ರೈತನಿಗೆ ತಿಳಿಯದಾಯಿತು. ಒಂದೊಂದು ವರ್ಷ ಒಂದೊಂದು ಪದಾರ್ಥಕ್ಕೆ ಹೆಚ್ಚು ಗಿರಾಕಿ ಬಂದರೆ, ಮುಂದಿನ ವರ್ಷ ಅದನ್ನೇ ಹೆಚ್ಚು ಬೆಳೆದಾಗ ಅದನ್ನು ಕೇಳುವವರೇ ಇಲ್ಲ. ರೈತನ ಅವಸ್ಥೆ ಶೋಚನೀಯವಾಯಿತು. ದಿಕ್ಕುತೋಚದೆ ಅವನು ಹುರುಪು ಕುಂದುತ್ತಿದ್ದ. ರೈತನಿಗೆ ಬಾಳೇ ಬೇಸರವಾಯಿತು. ಹೆಚ್ಚು ಬೆಳೆ ಬೆಳೆಯುವ ಹುಮ್ಮಸ್ಸೂ ಅಳಿದುಹೋಯಿತು. ಇದೆಲ್ಲದರಿಂದ ಬಂಡವಾಳಗಾರಿಕೆಯ ಪರಿಣಾಮ ವಿಚಿತ್ರವಾಯಿತು. ಬಹಳ ಹೆಚ್ಚು ಉತ್ಪತ್ತಿ ಮಾಡಿದುದರಿಂದ ಒಂದು ಕಡೆ ಆ ಪದಾರ್ಥಗಳನ್ನು ಸುಟ್ಟು ನಾಶಮಾಡತೊಡಗಿದರು; ಇನ್ನೊಂದು ಕಡೆ ಕೋಟಿಗಟ್ಟಲೆ ಜನ ಹೊಟ್ಟೆಗಿಲ್ಲದೆ ಹಸಿವಿನಿಂದ ನರಳತೊಡಗಿದರು. ಮಾನವ ಸಮಾಜದಿಂದ ಹಿಂಸೆ ಶೋಷಣೆ ಗುಲಾಮಗಿರಿ ಹಸಿವುಗಳನ್ನು ಹೊಡೆದೋಡಿಸಲೆಂದು ಪಾಳೆಯಗಾರಿಕೆಯನ್ನು ನಾಶಮಾಡಿದರೆ, ಬಂಡ ವಾಳಗಾರಿಕೆಯಲ್ಲಿ ಸಮಾಜಕ್ಕೆ ಆ ಸಂಕಟ ನೀಗುವುದರ ಬದಲು ಹೆಚ್ಚಿ ಹೋಯಿತು. ಮೊದಲಿಗಿಂತಲೂ ಹೆಚ್ಚು ಸಂಕಟಕ್ಕೆ, ವಿಪತ್ತಿಗೆ ಸಿಕ್ಕಿತು

ಮನುಷ್ಯನ ಬಾಳು. ಹೀಗಾಗಿ ತನ್ನ ಸಂರಕ್ಷಣೆಗಾಗಿ ಸಮಾಜ ಮತ್ತೊಮ್ಮೆ ಉಪಾಯವನ್ನು ಹುಡುಕಬೇಕಾಯಿತು. ಇದಕ್ಕಾಗಿ ಸಮಾಜ ಎಷ್ಟೋ ಪ್ರಯೋಗಮಾಡಿತು. ಅದರಲ್ಲಿ ಸಮಷ್ಟಿವಾದ, ಫ್ಯಾಸಿಸ್ಟ್ ವಾದಗಳು ಮುಖ್ಯವೆನ್ನಬಹುದು.

೩

ಕಾರ್ಲ್ ಮಾರ್ಕ್ಸ್ : ನೂರು ವರ್ಷದ ಕೆಳಗಿನ ಮಾತು. ಬಂಡವಾಳಗಾರಿಕೆಯಿಂದ ಪ್ರಜೆ ಬಹಳ ಸಂಕಟಪಟ್ಟು ವ್ಯಾಕುಲಗೊಂಡಿತು. ಅದರ ಸಾಮೂಹಿಕ ಅಧೀರತೆ ಕಾರ್ಲ್ ಮಾರ್ಕ್ಸ್‌ಗೆ ಜನ್ಮ ನೀಡಿತು. ಕಾರ್ಲ್‌ಮಾರ್ಕ್ಸ್ ಬಹಳ ದೊಡ್ಡ ಪಂಡಿತ, ಅದ್ಭುತ ವಿದ್ವಾಂಸ. ಆತ ಪರಿಸ್ಥಿತಿಯನ್ನೆಲ್ಲಾ ವೈಜ್ಞಾನಿಕ ದೃಷ್ಟಿಯಿಂದ ಅಧ್ಯಯನ ಮಾಡಿದ.

ಮಾರ್ಕ್ಸ್ ದರ್ಶನ: ಮಾರ್ಕ್ಸ್‌ಗೆ ಮೊಟ್ಟಮೊದಲು ಕಂಡದ್ದು – ಶಾಸನಯಂತ್ರವನ್ನು ವಿಕೇಂದ್ರಿತಗೊಳಿಸಲು ಹಿಂದಿನ ಕ್ರಾಂತಿಯಲ್ಲಿ ಮಾಡಿದ ಯತ್ನ ವಿಫಲವಾಯಿತು. ಅದಕ್ಕೆ ಕಾರಣ, ಪ್ರಜೆಯ ಐಶ್ವರ್ಯ ಬಂಡವಾಳಗಾರರ ಅಧೀನದಲ್ಲಿದ್ದುದರಿಂದ ಅವರು ಜನತೆಯನ್ನು ನಿರ್ದಯರಾಗಿ ಕುಟ್ಟಿ ಬೀಸುತ್ತಿದಾರೆ. ಬದುಕಿನ ಅಗತ್ಯಗಳೆಲ್ಲ ಬಂಡವಾಳಗಾರರ ಅಧೀನದಲ್ಲಿರುವವರೆಗೆ ಪ್ರಜೆಗಳೂ ಅವರಿಗೆ ಅಧೀನರಾಗಿಯೆ ಇರಬೇಕು. ಆದ್ದರಿಂದ ಸಮಾಜಕ್ಕೆ ಬೇಕಾದ ಭೋಗ್ಯ ಪಧಾರ್ಥಗಳು ಸಮಾಜದ ಅಧೀನಕ್ಕೆ ಬರುವವರೆಗೆ ಅವನ್ನು ಸಮಾಜ ಸರಿಯಾಗಿ ಭೋಗಿಸಲಾರದು. ಅಲ್ಲಿಯವರೆಗೆ ಶಾಸನಾಧಿಕಾರವೂ ಸಮಾಜದ ಕೈಗೆ ಬಾರದು. ಭೋಗ್ಯ ಪದಾರ್ಥ ಸಮಾಜದ ಅಧೀನದಲ್ಲಿರಬೇಕೆಂದರೆ ಆ ಪದಾರ್ಥಗಳ ಉತ್ಪಾದನೆ, ಅದರ ಸಾಧನ ಇವರ ಅಧೀನದಲ್ಲಿರಬೇಕು. ಏಕೆಂದರೆ, ಶಾಸನಕೇಂದ್ರ - ಆರ್ಥಿಕ ಕೇಂದ್ರಗಳೆರಡರಲ್ಲಿ ಒಂದನ್ನು ಸ್ವಾಧೀನಪಡಿಸಿಕೊಂಡರೆ ಆ ವರ್ಗದ ಅಧಿಕಾರ ಇನ್ನೊಂದಕ್ಕೂ ಹರಡುತ್ತದೆ; ಇತಿಹಾಸ ಇದನ್ನು ತೋರಿಸುತ್ತಿದೆ. ಆದ್ದರಿಂದ ಶಾಸನಯಂತ್ರ ಉತ್ಪಾದನಯಂತ್ರ ಎರಡೂ ಪ್ರಜೆಯ ಅಧಿಕಾರಕ್ಕೆ ಒಳಪಡಬೇಕು. ಇತಿಹಾಸದ ಆಧಾರ

ದಿಂದ ಹೀಗೆ ಯೋಚಿಸುವುದು ಸ್ವಾಭಾವಿಕವೇ. ಹೀಗಾಗಿ ಮಾರ್ಕ್ಸ್‌ನ ಮಾತು ಜನರ ಮನಸ್ಸಿಗೆ ಹಿಡಿಯಿತು. ಪ್ರಜೆ ಮತ್ತೆ ಕ್ರಾಂತಿ ಮಾಡಿದರು. ಮೊದಲು ಮಾಡಿದ ಕ್ರಾಂತಿ ಶಾಸನಯಂತ್ರವನ್ನು ಸ್ವಾಧೀನ ಪಡಿಸಿಕೊಳ್ಳ ಲಿಕ್ಕೆ. ಈಗ ಪ್ರಜೆ ಮಾಡಿದ ಕ್ರಾಂತಿ ಉತ್ಪಾದನಯಂತ್ರವನ್ನು ವಶಪಡಿಸಿ ಕೊಳ್ಳಲಿಕ್ಕೆ. ಕೆಲವು ಕಡೆ ಈ ಪ್ರಯತ್ನ ಸಫಲವಾಯಿತು. ಕೆಲವು ಕಡೆ ಅಲ್ಪ ಸ್ವಲ್ಪ ಸಫಲವಾಯಿತು. ಕೆಲವು ಕಡೆ ವಿಫಲವೂ ಆಯಿತು. ಆದರೆ ಸಿದ್ಧಾಂತ ವಿಚಾರಗಳ ಮಟ್ಟಿಗೆ ಜನರು ಈ ದಾರಿ ಹಿಡಿದರು. ಜಗತ್ತಿನಲ್ಲಿ ಶಾಂತಿ ಸ್ವಾತಂತ್ರ್ಯ ಸ್ಥಾಪನೆಯಾಗಬೇಕಾದರೆ ಮಾರ್ಕ್ಸ್ ತೋರಿದ ದಾರಿಯಲ್ಲಿಯೆ ಹೋಗಬೇಕು ಎಂದು ಜನ ಯೋಚಿಸ ಲಾರಂಭಿಸಿದರು.

ಫ್ಯಾಸಿಸ್ಟ್ ವಾದದ ಹುಟ್ಟು : ಈ ಎಲ್ಲ ಆಪತ್ತಿನ ಬೇರು ಬಂಡ ವಾಳಗಾರರ ಸ್ವಚ್ಛಂದ ನಿರ್ಬಂಧ ಉತ್ಪಾದನೆಯಲ್ಲಿ ಅಡಗಿದೆ ಎಂದು ಕೆಲವರಿಗೆ ಅನಿಸಿತು. ಈ ಪ್ರತಿನಿಧಿ ಪದ್ಧತಿಯಿಂದ ಪ್ರಜೆಗಳಲ್ಲಿ ಬೇಜವಾಬ ದಾರಿ ಹರಡಿದೆ; ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನಾರಿಸಿ ಅವರನ್ನು ನಂಬಿ ತಾವು ತೆಪ್ಪಗೆ ಕುಳಿತರು; ಇದರಿಂದ ಸಮಾಜದಲ್ಲಿ ಲೋಕದಲ್ಲಿ ಗೊಂದಲವಾಗಿದೆ; ಪ್ರಜೆಗಳ ಈ ನಿಶ್ಚಿಂತತೆಯಿಂದ ಅವರ ವಿಚಾರ ಶಕ್ತಿಯೇ ಊನವಾಗುತ್ತಿದೆ; ಬರುಬರುತ್ತ ಜನ ನಿಷ್ಕ್ರಿಯರಾಗುತ್ತಾರೆ– ಹೀಗೂ ಯೋಚಿಸಿದರು. ಹೀಗೆ ಸಮಾಜದಲ್ಲಿ ಎರಡು ವರ್ಗ ಉಳಿದವು– ಒಂದು ಸ್ವಚ್ಛಂದ ಬಂಡವಾಳಗಾರ, ಇನ್ನೊಂದು ಪ್ರತಿನಿಧಿಗಳನ್ನು ನಂಬಿ ಕುಳಿತ ಬೇಜವಾಬದಾರ ನಿಷ್ಕ್ರಿಯ ಪ್ರಜಾವರ್ಗ. ತಮ್ಮ ಅಜಾಗರೂ ಕತೆಯಿಂದ ಈ ಪ್ರಜೆಯನ್ನು ಚತುರರಾದ ಬಂಡವಾಳಗಾರರು ಕೊಂಡು ಬಿಟ್ಟರು. ಈ ಸಮಾಜವ್ಯವಸ್ಥೆಯನ್ನು ಸಚೇತನ, ಕುಶಲ, ಪರಿಸ್ಥಿತಿಗೆ ಅನುಕೂಲ ಆಗಿ ಮಾಡುವ ಒಂದು ಉಪಾಯ ಬೇಕಾಯಿತು. ಪ್ರಜೆ ಕ್ರಿಯಾಶೂನ್ಯರಾದಾಗ ಪ್ರಜಾತಂತ್ರಕ್ಕೆ ಬೆಲೆಯಿಲ್ಲ. ಆದ್ದರಿಂದ ಪ್ರಜಾ ತಂತ್ರದಲ್ಲಿ ಜನರಿಗೆ ಆಸಕ್ತಿಯೂ ಇಲ್ಲ. ತಮ್ಮ ವಿಚಾರದಲ್ಲಿ ಅಚಲ ಶ್ರದ್ಧೆಯುಳ್ಳ, ಯೋಗ್ಯ, ಜಾಗರೂಕ ಗುಂಪೊಂದು ಇತ್ತ ಪ್ರಜೆ, ಅತ್ತ ಬಂಡವಾಳಗಾರರು ಇಬ್ಬರನ್ನೂ ನಿಯಂತ್ರಣ ಮಾಡುತ್ತ ಜನರನ್ನು ಕ್ರಿಯಾ

ಶೀಲರನ್ನಾಗಿ ವ್ಯವಸ್ಥಿತರನ್ನಾಗಿ ಮಾಡುವುದು ಆಗತ್ಯವಾಯಿತು. ಇದೇನು ಸುಲಭವಾದ ಕೆಲಸವಲ್ಲ. ಬಂಡವಾಳಗಾರರ ಆಧೀನದಲ್ಲಿ ಮೊದಲಿನಿಂದಲೂ ಶಕ್ತಿ ಸಂಪತ್ತು ಇತ್ತು. ತಮ್ಮ ಮೇಲೆ ಇನ್ನೊಂದು ಗುಂಪು ಅಧಿಕಾರ ನಡೆಸಿದರೆ ಅವರು ಒಪ್ಪುವಂಥವರೆ? ಪ್ರಜೆಗಳಿಗೂ ಎಲಾ ವ್ಯವಸ್ಥೆಯೂ ತಮ್ಮ ಅಭಿಪ್ರಾಯದಂತೆಯೇ ನಡೆಯುತ್ತಿದೆಯೆಂಬ ಭ್ರಾಂತಿಯಿತ್ತು. ತಮ್ಮ ಮೇಲೆ ಇನ್ನೊಬ್ಬರ ಅಧಿಕಾರವೆಂದರೆ ಅವರೂ ಒಪ್ಪುವಂತಿಲ್ಲ. ಆದರೆ ಶಕ್ತಿವಂತ ಗುಂಪೊಂದು ಬಂದರೆ ಬಂಡವಾಳಗಾರರೂ ಪ್ರಜೆಗಳೂ ಇಬ್ಬರೂ ನೆಲಕ್ಕುರುಳಬೇಕು. ಸಮಾಜದ ಸಂಚಾಲನೆಯ ಚಿಂತೆ ಮಾಡುತ್ತಿದ್ದ ಜನರಿಗೆ ಅಂಥದೊಂದು ದೃಢ ಸಂಕಲ್ಪದ ಗುಂಪನ್ನು ಕಟ್ಟಿ ಇಡೀ ಸಮಾಜದ ಮೇಲೆ ತಮ್ಮ ಆಧಿಕಾರವನ್ನು ನಡೆಸಬೇಕಾಗಿ ಬಂತು. ಸಮಾಜದ ವ್ಯವಸ್ಥೆ, ಉತ್ಪಾದನೆ, ಹಂಚಿಕೆ ಸರಿಯಾಗಿ ನಡೆಯಲು ಅದೇ ದಾರಿ ಎನಿಸಿತು.

ಹೀಗೆ ಬಂಡವಾಳಗಾರರ ಮುಷ್ಟಿಯಿಂದ ಬಿಡುಗಡೆ ಹೊಂದಲು ಸಮಾಜದಲ್ಲಿ ಎರಡು ವಿಚಾರ ಹುಟ್ಟಿದವು. ಒಂದು ಮಾರ್ಕ್ಸನ ಸಮಷ್ಟಿವಾದ, ಇನ್ನೊಂದು ಇಟಲಿಯ ಫ್ಯಾಸಿಸಂ.

ನಿರಾಶಾಜನಕ ಸ್ಥಿತಿ : ಇವೆರಡೂ ಪ್ರಯೋಗ ಒಂದೇ ಕಾಲದಲ್ಲಿ ನಡೆದವು. ಸಮಾಜ ಉದ್ದೇಶಿಸಿದ್ದು ಹಿಂಸೆ ಗುಲಾಮಗಿರಿಗಳನ್ನು ಅಳಿಸಿ ಹಾಕುವುದು; ಸುಖ - ಶಾಂತಿಗಳನ್ನು ನೆಲೆಗೊಳಿಸಿ ಪ್ರಜಾತಂತ್ರವನ್ನು ಸ್ಥಿರಗೊಳಿಸುವುದು. ಇದಾವುದೂ ಈ ಪ್ರಯೋಗಗಳಿಂದ ಸಾಧಿಸಲಿಲ್ಲವೆಂದು ಕೆಲವು ದಿನ ಕಳೆದಮೇಲೆ ತಿಳಿದು ಬಂತು. ಫ್ಯಾಸಿಸ್ಟ್‌ವಾದ ತನ್ನ ಸರ್ವಾಧಿಕಾರದ ಭೀಷಣತೆಯಿಂದ ಇಡೀ ಜಗತ್ತನ್ನು ಘೋರ ಹಿಂಸೆಯಲ್ಲಿ ಮುಳುಗಿಸಿತು. ಅದರ ನಗ್ನ ಏಕತಂತ್ರದ ಬಗ್ಗೆಯಂತೂ ಏನೂ ಹೇಳಬೇಕಾಗಿಲ್ಲ. ಅದು ಸ್ವಯಂ ಸಿದ್ಧ. ಅತ್ತ ಮಾರ್ಕ್ಸ ವಾದದಿಂದಲೂ ಪ್ರಜೆಗೆ ಸ್ವಾತಂತ್ರ್ಯ ಸಿಗುವ ಸಂಭವ ಕಾಣಲಿಲ್ಲ. ಎರಡೂ ನಿರಾಶಾಜನಕವೇ.

ಹಿಂಸೆಯು ಪ್ರಗತಿಯನ್ನು ತಡೆಯುವ ಲಕ್ಷಣ ಒಂದೂ ಕಾಣಬರಲಿಲ್ಲ. ಸಮಷ್ಟಿವಾದಿ ರಾಷ್ಟ್ರಗಳಲ್ಲಿಯೂ ಫ್ಯಾಸಿಸ್ಟ್‌ವಾದಿ ರಾಷ್ಟ್ರಗಳಲ್ಲಿ

ದ್ದಂತೆ ಸರ್ವಾಧಿಕಾರಿ ತಂತ್ರವೇ ನಡೆಯ ತೊಡಗಿತು. ಭೇದವಿಷ್ಟೇ: ಫ್ಯಾಸಿಸ್ಟ್ ವಾದದಲ್ಲಿ ಸರ್ವಾಧಿಕಾರ ನಗ್ನ ಸ್ವರೂಪ ತಾಳಿ ಇದಿರಿಗೆ ಬಂತು; ಸಮಷ್ಟಿವಾದದಲ್ಲಿ ಪ್ರಜಾತಂತ್ರದ ಪರಿಭಾಷೆಯ ಜಾಲದಲ್ಲಿ ಅಡಗಿ ಬಂತು ಸರ್ವಾಧಿಕಾರ.

ಫ್ಯಾಸಿಸ್ಟ್ ವಾದದಲ್ಲಿ ಪ್ರಜೆಗೆ ತಾನು ಪರತಂತ್ರ, ದಲಿತ ಎಂಬುದು ಗೊತ್ತು. ಎಂದಾದರೊಂದು ದಿನ ಬೇಸತ್ತು ಸರ್ವಾಧಿಕಾರವನ್ನು ಕೊನೆಗಾಣಿಸಬಹುದು. ಆದರೆ ಸಮಷ್ಟಿ ವಾದದಲ್ಲಿ ಜನರು ಒಂದು ಭ್ರಾಂತಿಯಲ್ಲಿ ಮುಳುಗಿರುತ್ತಾರೆ. ಎಂದಾದರೊಂದು ದಿನ ತಾನಾಗಿಯೆ ಈ ಆಡಳಿತ - ಅಧಿಕಾರ ಎಲ್ಲವೂ ಬಾಡಿ ಸುರುಟಿಕೊಂಡು ಉದುರಿ ಹೋಗುತ್ತದೆ; ಇದು ಪ್ರಕೃತಿ ನಿಯಮ; ಆಗ ನಾವು ಸ್ವಾತಂತ್ರರಾಗುತ್ತೇವೆ ಎಂದು. 'ನಂಬಿ, ಕಡೆಗೆ ನಿಮಗೆ ಮುಕ್ತಿ ಸಿಗುತ್ತದೆ'- ಈ ರೀತಿಯ ಭ್ರಮೆಯೊಂದು ಅವರನ್ನು ಸದಾ ನಿಷ್ಕ್ರಿಯರಾಗಿರುವಂತೆ ಮಾಡುತ್ತದೆ. ಸರ್ವಾಧಿಕಾರ-ತಂತ್ರವನ್ನು ಕೊನೆಗಾಣಿಸುವ ಪ್ರಯತ್ನಮಾಡಲು ಅವರಿಗೆ ಮನಸ್ಸೇ ಬಾರದು.

ಸಮಷ್ಟಿವಾದದ ಸಮಸ್ಯೆ: ವೈಯಕ್ತಿಕ ಸಂಪತ್ತಿನ ನಾಶ: ಸಮಾಜದಲ್ಲಿರುವ ಹಿಂಸೆ ಜಗಳ ಎಲ್ಲಕ್ಕೂ ಮನುಷ್ಯನಲ್ಲಿರುವ ಸ್ವಾರ್ಥದ ಅತಿರೇಕವೇ ಮೂಲಕಾರಣ ಎಂಬುದನ್ನು ಸಮಷ್ಟಿ ವಾದಿಗಳು ಕಂಡರು. ಸಮಾಜದ ಹಾಸಿಗೆ ನಿಜವಾಗಿಯೂ ಹಿಂಸೆಯೊಂದೇ ಕಾರಣ, ಮತ್ತಾವುದೂ ಇಲ್ಲ. ಮಾನವ ಸಮಾಜ ಹುಟ್ಟಿದಾಗಿನಿಂದಲೂ ಕಂಡುಬಂದಿದೆ- ಹಿಂಸೆ ಹುಟ್ಟುವುದು. ಸ್ವಾರ್ಥ-ಸಂಘರ್ಷಣೆಗಳಿಂದ. ಈ ಹಿಂಸೆಯನ್ನೇ ನಿರ್ಮೂಲ ಮಾಡೋಣವೆಂದು ಸಮಷ್ಟಿವಾದ ಯೋಚಿಸಿತು ಸಂಪತ್ತಿನಿಂದ ಸ್ವಾರ್ಥ ಹುಟ್ಟುತ್ತದೆ. ಸಂಪತ್ತಿನಲ್ಲಿಯೆ ಸ್ವಾರ್ಥವೆಲ್ಲವೂ ಅಡಗಿದೆ. ಆದ್ದರಿಂದ ವ್ಯಕ್ತಿಯನ್ನು ಸಂಪತ್ತಿಹೀನನನ್ನಾಗಿಸಿದರೆ ಸ್ವಾರ್ಥಕ್ಕೆ ಅವಕಾಶವೇ ಇರದು. ಆದ್ದರಿಂದ ಸಮಷ್ಟಿವಾದಿ ವ್ಯವಸ್ಥೆಯಲ್ಲಿ ವ್ಯಕ್ತಿಗತ ಸಂಪತ್ತು-ಸೊತ್ತುಗಳಿಗೆ ಸ್ಥಾನವೆ ಇಲ್ಲದಂತೆ ಮಾಡಿದರು.

ವರ್ಗಹೀನ ಸಮಾಜದ ಅಗತ್ಯ: ಹಿಂಸೆಯ ಇನ್ನೊಂದು ರೂಪ ಶೋಷಣೆ. ಸಮಾಜದಲ್ಲಿ ಹಲವು ವರ್ಗಗಳಿವೆ. ಈ ಬೇರೆ ಬೇರೆ ವರ್ಗ

ಗಳಿರುವವರೆಗೆ ಸಮಾಜದಲ್ಲಿ ಶೋಷಣೆ ತಪ್ಪದು. ಬಂಡವಾಳಗಾರರು, ಮಧ್ಯಮವರ್ಗದವರು, ಶ್ರಮಿಕವರ್ಗ ಇತ್ಯಾದಿ ಭಿನ್ನ ಭಿನ್ನ ಶ್ರೇಣಿಗಳಾಗಿ ಸಮಾಜ ರಚಿತವಾಗಿರುವ ವರೆಗೆ ಒಬ್ಬರನ್ನು ಹಿಂಡಿ ಹೀರಿ, ಶೋಷಣೆ ಮಾಡಿಯೆ ಇನ್ನೊಬ್ಬರು ಬದುಕಬೇಕಾಗುತ್ತದೆ. ಆದ್ದರಿಂದ ಸಮಾಜದಲ್ಲಿ ಇಂಥ ವರ್ಗಭೇದವೇ ಇರಬಾರದು ಎನಿಸಿತು ಸಮಷ್ಟಿವಾದಿಗಳಿಗೆ. ಈ ರೀತಿ ಸಮಷ್ಟಿವಾದದ ಸಿದ್ಧಾಂತದ ಪ್ರಕಾರ ಲೋಕದಲ್ಲಿ ವರ್ಗಹೀನ ಸಮಾಜರಚನೆ ಅಗತ್ಯವಾಯಿತು.

ಶಾಸನಹೀನ ಸಮಾಜದ ಆವಶ್ಯಕತೆ: ಅವರು ಇನ್ನೊಂದು ಮಾತನ್ನೂ ಕಂಡುಹಿಡಿದರು :—ಅಂತಃಕಲಹ, ಪರಸ್ಪರ ಹಿಂಸೆಯನ್ನು ಮಿತಿಯಲ್ಲಿಡಲು ಮನುಷ್ಯ ಶಾಸನವ್ಯವಸ್ಥೆಯನ್ನು ರಚಿಸಿದ. ವ್ಯಕ್ತಿಗಳ ಅಲ್ಪ ಹಿಂಸೆಯನ್ನು ದಮನ ಮಾಡಲು ಶಾಸನ ರೂಪದ ದೊಡ್ಡ ಹಿಂಸೆ ಯನ್ನು ರಚಿಸಬೇಕಾಯಿತು. **ಶಾಸನ ಎಂದರೆ ಬಲಾತ್ಕಾರ ಅಥವಾ ಸ್ವಾತಂತ್ರ್ಯವಿಹೀನತೆ.** ಎಷ್ಟುಮಟ್ಟಿಗೆ ಮನುಷ್ಯನ ಮೇಲೆ ಶಾಸನ ವಿದೆಯೋ ಅಷ್ಟುಮಟ್ಟಿಗೆ ಅವನು ಶಾಸನಕ್ಕೆ ಅಧೀನ, ಅಷ್ಟುಮಟ್ಟಿಗೆ ಅವನಿಗೆ ಸ್ವಾತಂತ್ರ್ಯ ಕಡಮೆ. ಅಂತೂ ಸಮಷ್ಟಿವಾದದ ಪ್ರಕಾರ ಲೋಕ ದಲ್ಲಿ ಹಿಂಸೆ ಶೋಷಣಗಳನ್ನು ಕೊನೆಗಾಣಿಸಲು ಸಮಾಜ ಶಾಸನಹೀನವಾಗ ಬೇಕಾದ್ದು ಅಗತ್ಯ.

ಸಮಷ್ಟಿವಾದದ ಗುರಿ ; ಸಮಷ್ಟಿವಾದದ ಕಲ್ಪನೆ ಹೀಗೆ ಜಗತ್ತನ್ನು ಹಿಂಸಾರಹಿತ ಶೋಷಣರಹಿತ ಸ್ವತಂತ್ರ ಆಗಿ ಮಾಡಲು ಸಮಾಜವನ್ನು ವರ್ಗಹೀನ ಶಾಸನಹೀನ ವ್ಯವಸ್ಥೆಯ ಆಧಾರದ ಮೇಲೆ ಕಟ್ಟಬಯಸು ತ್ತದೆ. ಅವರ ಕಲ್ಪನೆಯಂತೆ ವೈಯಕ್ತಿಕ ಸೊತ್ತು ಇರಲಾಗದು, ಸಮಾಜದಲ್ಲಿ ಯಾವ ಬಗೆಯ ವರ್ಗವಿಷಮತೆಯೂ ಶಾಸನ ವ್ಯವಸ್ಥೆಯೂ ಇರಬಾರದು. ಇಂಥ ಸಮಾಜವನ್ನು ರೂಪುಗೊಳಿಸಿದಾಗ ಪ್ರಜೆ ಇಷ್ಟು ಕಾಲ ಮಾಡಿದ ಪ್ರಯತ್ನ ಸಾರ್ಥಕವಾದೀತು. ಭವಿಷ್ಯದ ಸಮಾಜಕ್ಕೆ ಈ ಪೀಠಿಕೆ ಹಾಕಿ ಕಾರ್ಲ್ ಮಾರ್ಕ್ಸ್ ಮಾನವಕೋಟಿಗೆ ದೊಡ್ಡ ಉಪಕಾರ ಮಾಡಿದ. ಕೇಂದ್ರ ಸತ್ತೆಯ ವಿಕಟ ಜಾಲದಿಂದ ಪ್ರಜೆಯನ್ನು ಬಿಡಿಸಲು ಒಂದು ವೈಜ್ಞಾನಿಕ ದೃಷ್ಟಿಕೋನದಿಂದ ಆತ ವಿಚಾರ ಮಾಡಿದ. ಅದರಲ್ಲಿ

ಒಂದು ನಿಶ್ಚಿತ ರೂಪೂ ನಿಶ್ಚಿತ ಧೋರಣೆಯೂ ಇವೆ. ಇದು ಮಾರ್ಕ್ಸ್‌ನ ಅಥವಾ ಸಮುಷ್ಟಿವಾದದ ಗುರಿಯ ಸ್ಪಷ್ಟ ಚಿತ್ರ.

ಸಮುಷ್ಟಿವಾದಿ ನೀತಿ : ಈ ಬಗೆಯ ವ್ಯವಸ್ಥೆಯನ್ನು ಸಾಧಿಸುವುದು ಹೇಗೆ ಎಂಬುದೇ ಪ್ರಶ್ನೆ. ಅದಕ್ಕೆ ಕಾರ್ಲ್ ಮಾರ್ಕ್ಸ್ ಹೇಳಿದ್ದು ಹೀಗೆ: ಸಂಪತ್ತಿನ ಎಂದರೆ ಉತ್ಪಾದನದ ಸಾಧನಗಳನ್ನು ಪ್ರಜೆಯ ಅಧಿಕಾರಕ್ಕೆ ಒಳಪಡಿಸಿ, ಶ್ರಮಿಕರ-ಉತ್ಪಾದಕರ ಕೈಗೆ ಸರ್ವಾಧಿಕಾರವನ್ನೂ ಕೊಟ್ಟರೆ ಇಂಥ ಸಮಾಜದ ರಚನೆಯಾಗುತ್ತದೆ. ಆದ್ದರಿಂದ ಮಾರ್ಕ್ಸ್ ಅನುಯಾಯಿಗಳೆಲ್ಲ ಉತ್ಪಾದನ ಸಾಧನಗಳ ಒಡೆತನವನ್ನು ಇತರರಿಂದ ಕಿತ್ತುಕೊಂಡು ಶ್ರಮಿಕರ ಸ್ವಾಧೀನಪಡಿಸುವ ಪ್ರಯತ್ನದಲ್ಲಿ ತೊಡಗಿದರು.

ಇಲ್ಲಿಯವರೆಗೆ ಸಮಾಜದಲ್ಲಿ ಐಶ್ವರ್ಯವಂತರು ಎಂದರೆ ಬಂಡವಾಳಗಾರರು, ರೈತರು. ತಮ್ಮ ದುಡಿತದಿಂದ ಬದುಕುತ್ತ ತಮ್ಮ ಬಳಿ ಏನೂ ಸೊತ್ತು-ಸಂಪತ್ತು ಇಲ್ಲದ ಬರೀ ಶ್ರಮಿಕರ ಶ್ರೇಣಿಯೂ ಒಂದು ಇತ್ತು. ಮಾರ್ಕ್ಸ್‌ವಾದಿಗಳಂತೆ ವೈಯಕ್ತಿಕ-ಸಂಪತ್ತಿಹೀನ, ಶಾಸನಹೀನ, ವರ್ಗವಿಹೀನ ಸಮಾಜವನ್ನು ನಿಜವಾಗಿಯೂ ಸ್ಥಾಪಿಸಬಲ್ಲದ್ದು ಈ ಶ್ರಮಿಕ ವರ್ಗ; ಇಂಥ ಸಮಾಜವನ್ನು ರಚಿಸುವ ಪ್ರಯತ್ನವನ್ನು ಕೈಗೊಂಡು ಸಾಧಿಸಬಲ್ಲದು ಇದೇ ವರ್ಗ. ಆದರೆ ಮೊದಲು ಈ ವರ್ಗದ ಕೈಗೆ ಸಮಸ್ತ ಅಧಿಕಾರವನ್ನೂ ವಶಪಡಿಸಿದರೆ ಆಮೇಲೆ ಅಧಿಕಾರ ಪೂರ್ವಕವಾಗಿ ಅವರು ಶಾಸನಹೀನ ವರ್ಗಹೀನ ಸಮಾಜವನ್ನು ಸ್ಥಾಪಿಸಬಲ್ಲರು. ಆ ಶಕ್ತಿ ಬಂದೀತು. ಆದರೆ ಈ ಕೆಲಸ ಸುಲಭವಾಗಿರಲಿಲ್ಲ. ಈ ಮಾತನ್ನು ಎಲ್ಲರೂ ಒಪ್ಪುವಂತಿರಲಿಲ್ಲ. ಬಂಡವಾಳಗಾರರು ರೈತರು ತಮ್ಮ ಸಂಪತ್ತನ್ನು ತ್ಯಜಿಸಿ ಎಲ್ಲವನ್ನೂ ಕೂಲಿಗಾರರಿಗೆ ಅರ್ಪಿಸಲು ಸಿದ್ಧರಾಗಿರಲಿಲ್ಲ. ಆದ್ದರಿಂದ ಬಲಾತ್ಕಾರವಾಗಿ ಎಲ್ಲವನ್ನೂ ವಶಪಡಿಸಿಕೊಳ್ಳಬೇಕಾಗಿ ಬಂತು. ಅದಕ್ಕೆ ಒಂದು ಸುಸಂಘಟಿತವಾದ ಕೂಲಿಕಾರರ ಗುಂಪು ಅಥವಾ ಪಕ್ಷ ಕಟ್ಟಿ, ಅವರು ಈ ಕೆಲಸ ಮಾಡುವಂತೆ ಯತ್ನಿಸಬೇಕಾಯಿತು. ತಮ್ಮ ಸಿದ್ಧಾಂತದ ಭಕ್ತರು ತಾವಲ್ಲದೆ ಮತ್ತಾರೂ ಸಿಗಲಾರರು, ಇನ್ನಾರೂ ಈ ಆದರ್ಶವನ್ನು ಸರಿಯಾಗಿ ಪಾಲಿಸಲಾರರು ಎಂದು ಮಾರ್ಕ್ಸ್‌ವಾದಿಗಳು ತಿಳಿದರು. ಅಂತೂ ಈ ಪಕ್ಷ ಶ್ರಮಿಕರ ಪರವಾಗಿ

ಮೊದಲು ಸಮಾಜದ ಇಡೀ ಜೀವನದ ಮೇಲೆ ಅಧಿಕಾರ ವಹಿಸಿಕೊಂಡಿತು. ಪ್ರಜೆಯ ಸ್ವಾತಂತ್ರ್ಯವನ್ನು ಮೊದಲು ಅಪಹರಿಸಿತು. ಆಮೇಲೆ, ಹಿಂದೆ ಪ್ರಜೆಗಳ ಧರ್ಮಪರಿಪಾಲನೆಯ ಗುತ್ತಿಗೆ ಹೊತ್ತ ಜನ ಹೇಗೆ ಪ್ರಜೆಯ ಆಧ್ಯಾತ್ಮಿಕ ಸಭ್ಯತೆಯ ರಕ್ಷಣೆಯ ನೆಪದಿಂದ ಅವರನ್ನು ಜೀವಂತ ಸುಟ್ಟು, ಮೇಲೆ ಅದೊಂದು ಕರುಣೆ ತೋರಿದಂತೆ ಆಶೀರ್ವಾದ ಸುರಿದಂತೆ ಎಂದರೋ, ಅದೇ ರೀತಿ ತಾವೂ ದಮನವನ್ನು ಮೊದಲಿಟ್ಟರು.

ಎರಡು ಧೋರಣೆ : ಸಮಾಜವನ್ನು ಬಂಡವಾಳಗಾರಿಕೆಯ ಸಂಕಟದಿಂದ ಬಿಡಿಸಲು ಎರಡು ಪ್ರಯೋಗ ಮೊದಲಾದವು : ಮೊದಲನೆಯದು– ಒಂದು ಬಲಿಷ್ಠ ಯೋಗ್ಯ ಗುಂಪಿನ ಮೂಲಕ ಬಂಡವಾಳಗಾರರ ಮೇಲೆ ಜನತೆಯ ಮೇಲೆ ಅಧಿಕಾರ ಗಳಿಸುವುದು ; ಸಮಾಜವನ್ನು ಸುವ್ಯವಸ್ಥಿತವಾಗಿ ನಡೆಸಿ ಸುಖ–ಸಂತೋಷಗಳನ್ನು ಸ್ಥಾಪಿಸುವುದು. ಎರಡನೆಯದು– ಬಂಡವಾಳಗಾರರನ್ನೂ ರೈತರನ್ನೂ ಬಲಾತ್ಕಾರದಿಂದ ಶ್ರಮಿಕರ ಮೂಲಕ ಗೆದ್ದು ಅವರನ್ನು ಒಂದು ಸುಸಂಘಟಿತ ಬಲಿಷ್ಠ ಗುಂಪಿಗೆ ಅಧೀನಮಾಡುವುದು, ಒಂದೇ ವರ್ಗದ ಸರ್ವಾಧಿಕಾರದ ದೆಸೆಯಿಂದ ಸಮಾಜದಲ್ಲಿ ಶೋಷಣೆ ಇಲ್ಲದಂತೆ ಮಾಡುವುದು. ಆದರೆ ಇವೆರಡೂ ಪ್ರಯೋಗಗಳಲ್ಲೂ ಹಿಂಸೆ ಮಾಡದೆ, ಒಂದೇ ದಲದ ಸರ್ವಾಧಿಕಾರ ನಡೆಯದೆ ಸಫಲತೆ ಸಿಗುವಂತಿಲ್ಲ. ಇದರಿಂದಲೇ ಈಗ ಜಗತ್ತಿನಲ್ಲಿ ಸರ್ವಾಧಿಕಾರದ ತಂತ್ರ ಬಹಳ ವೇಗವಾಗಿ ಹರಡುತ್ತಿದೆ. ಬಂಡವಾಳಗಾರಿಕೆಯ ಸ್ವಚ್ಛಂದ ಶೋಷಣದಿಂದ ಬೆದರಿ ಬೆಂಡಾದ ಜನತೆಗೆ ಬೇರೆ ಯಾವ ದಾರಿಯೂ ಕಾಣದಿದೆ; ಜನ ಓಡಿನಿಂದ ಧುಮುಕಿ ಒಲೆಯೊಳಗೇ ಬೀಳುತ್ತಿದಾರೆ.

ಬಂಡವಾಳಗಾರಿಕೆ - ಸಮಷ್ಟಿವಾದದ ವಿಧಾನಗಳು : ಉತ್ಪಾದನದ ರೀತಿ, ಅದಕ್ಕೆ ಸಂಬಂಧಿಸಿದ ವ್ಯವಸ್ಥೆ ಈ ಸರ್ವಾಧಿಕಾರ ಬೆಳೆಯಲು ಸಾಕಷ್ಟು ಸಹಾಯಮಾಡಿದೆ. ಉತ್ಪಾದನದ ರೀತಿ ಹೇಗೋ ಸಮಾಜದ ರಚನೆಯೂ ಹಾಗೇ. ಸಮಷ್ಟಿವಾದದ ಸಮಾಜದಲ್ಲಿ ಉತ್ಪಾದನೆಯ ರೀತಿ ಬಂಡವಾಳಗಾರಿಕೆಯ ರೀತಿಯದೇ ; ಏನೂ ವ್ಯತ್ಯಾಸವಿಲ್ಲ. ಎರಡರದೂ ಕೇಂದ್ರೀಯ ಪದ್ಧತಿ. ಭೇದ ಇಷ್ಟೇ : ಈ ಕೇಂದ್ರೀಯ ಯಂತ್ರಗಳ ಪಾರುಪತ್ಯವನ್ನು ಸಮಷ್ಟಿವಾದದಲ್ಲಿ ಶ್ರಮಿಕರ ಹೆಸರಿನಲ್ಲಿ ಒಂದು ಪಕ್ಷದ

ಕೈಗೆ ಕೊಡುತ್ತಾರೆ. ಬಂಡವಾಳಗಾರಿಕೆಯಲ್ಲಿ ಪ್ರತಿನಿಧಿಗಳ ಮೂಲಕ ನಡೆವ ಶಾಸನಯಂತ್ರವನ್ನು ಬಂಡವಾಳಗಾರರು ತಮ್ಮ ಪ್ರತಿನಿಧಿಗಳನ್ನು ಕಳಿಸಿ ವಶಪಡಿಸಿಕೊಂಡರು. ಶಾಸನ - ಉತ್ಪಾದನ ಎರಡೂ ಅವರ ಕೈಯಲ್ಲೇ. ಸಮಷ್ಟಿ ವಾದ ಈ ಎರಡೂ ಯಂತ್ರಗಳ ನಿಯಂತ್ರಣ ವನ್ನು ಬಂಡವಾಳಗಾರರ ಕೈತಪ್ಪಿಸಿ ಒಂದು ಪಕ್ಷದ, ಕೂಟದವರ ಕೈಗೆ ಕೊಟ್ಟಿತು. ಇಷ್ಟೇ ಭೇದ. (ಈ ಪಕ್ಷ ಶ್ರಮಿಕರ ಪ್ರತಿನಿಧಿತ್ವದ, ಅವರ ಕೈಗೆ ಅಧಿಕಾರ ಒಪ್ಪಿಸುವ ಮಾತನ್ನು ಆಡುತ್ತದೆ.)

ಐಶ್ವರ್ಯದ ಮೋಹಕ್ಕಿಂತ ಅಧಿಕಾರ ಮೋಹ ಬಲ : ಒಂದು ಸಲ ಐಶ್ವರ್ಯ ಕೈಹತ್ತಿದರೆ ಸಾಕು, ಯಾರೂ ಅದನ್ನು ಬಿಡಲು ಇಚ್ಛಿಸರು. ಅದನ್ನು ಹೆಚ್ಚಿಸಿಕೊಳ್ಳಬೇಕೆಂದೇ ಅವರ ಸರ್ವಪ್ರಯತ್ನ. ಇತರರನ್ನು ಶೋಷಿಸದೆ ಇದು ಸಾಧ್ಯವಿಲ್ಲ. ಆದರೆ ಮನುಷ್ಯನ ಸ್ವಾರ್ಥ ಬರೀ ಸಂಪತ್ತಿ ಸಂಗ್ರಹ ದಿಂದ ತೃಪ್ತವಾಗದು. ಐಶ್ವರ್ಯದ ಮೋಹಕ್ಕಿಂತ ಅಧಿಕಾರದ ಮೋಹ ಹೆಚ್ಚು ಬಲವಾದುದು. ಸಮಷ್ಟಿವಾದಿಗಳು ಇದನ್ನು ಮರೆತರು. ಅಧಿಕಾರ ಬಿಡುವುದಕ್ಕಿಂತ ಐಶ್ವರ್ಯತ್ಯಾಗ ಸುಲಭ. ಒಂದು ಸಲ ಒಂದು ಪಕ್ಷವೋ ಒಬ್ಬ ವ್ಯಕ್ತಿಯೋ ಅಧಿಕಾರ ಪಡೆದರೆ, ಮತ್ತೆ ಜನತೆಗೆ ಅದನ್ನು ಹಿಂದಿರು ಗಿಸುವುದಿಲ್ಲ. ತಮ್ಮ ಕೈಯಲ್ಲೇ ಕೇಂದ್ರೀಭೂತಗೊಳಿಸಲು ಯತ್ನ ಮಾಡುತ್ತಾರೆ. ಇತರರನ್ನು ತುಳಿದರೆ ತಾನೆ ಈ ಬಯಕೆ ಸಫಲವಾಗ ಬೇಕು ? ಇದರ ಪರಿಣಾಮ–ಮೊದಮೊದಲು ಶ್ರಮಿಕರ ರಾಜ್ಯ ಸ್ಥಾಪಿಸಲು ಹೊರಟ ಗುಂಪು ರಾಜ್ಯಸ್ಥಾಪನೆಯಾದೊಡನೆ ಶ್ರಮಿಕರಿಂದ ಅಧಿಕಾರ ಪಡೆಯುತ್ತದೆ; ಆಮೇಲೆ ತನ್ನನ್ನು ಭದ್ರಮಾಡಿಕೊಳ್ಳಲು 'ಶ್ರಮಿಕಷಾಹಿ' ರಾಜ್ಯವನ್ನು ಮೊದಲಿಡುತ್ತದೆ. ಇದೇ ಕಾರಣದಿಂದಲೇ, ಜನತೆಗೆ ಸ್ವಾತಂತ್ರ್ಯ ಕೊಡಿಸಲೆಂದು ಶಾಸನಾರೂಢವಾದ ಪಕ್ಷ ಈಗ ಹೇಗಾದರೂ ಮಾಡಿ ತನ್ನ ಅಧಿಕಾರವನ್ನು ಸ್ಥಿರವಾಗಿಟ್ಟುಕೊಳ್ಳುವ ಚಿಂತೆಯಲ್ಲಿ ಮುಳುಗಿದೆ.

ಕೇಂದ್ರೀಕರಣದ ಪರಿಣಾಮ : ಬಂಡವಾಳಗಾರರನ್ನೆಲ್ಲ ನಾಶಮಾಡಿ ಸಮಷ್ಟಿ ವಾದಿಗಳು ಏಕಪಕ್ಷದ ಆಡಳಿತವನ್ನು ಸ್ಥಾಪಿಸಿದ ಮೇಲೆ ಮನುಷ್ಯನ ಬಾಳಿಗೆ ಬೇಕಾದ ಸಾಮಗ್ರಿಗಳ ಉತ್ಪಾದನ ಸಾಧನಗಳನ್ನು

ಮೊದಲಿಗಿಂತ ಹೆಚ್ಚು ಕೇಂದ್ರೀಕರಿಸಿದರು. ಮೊದಲು ಹಲವು ಕೇಂದ್ರಗಳ ಸಾಮಗ್ರಿಗಳಲ್ಲಿ ಬೇಕಾದುದನ್ನು ಆರಿಸಿಕೊಳ್ಳಬಹುದಾಗಿತ್ತು. ಈಗ ಆ ಸ್ವಾತಂತ್ರ್ಯ ಅಳಿದು ಒಬ್ಬ ಸಂಚಾಲಕನ ಹೊರತು ಮತ್ತಾರಲ್ಲಿಗೂ ಹೋಗುವಂತಿಲ್ಲವಾಯಿತು. ತನ್ನನ್ನು ಬಿಟ್ಟರೆ ಬೇರೆ ಗತಿಯೆ ಇಲ್ಲ ಪ್ರಜೆಗೆ ಬದುಕಲಿಕ್ಕೆ ಎಂಬುದನ್ನು ಅರಿತುಕೊಂಡು ಈ ಸಂಚಾಲಕ ಅದನ್ನು ಗಟ್ಟಿಯಾಗಿ ಹಿಡಿದುಕೊಂಡು ಸರ್ವಾಧಿಕಾರಿಯಾಗಿ ಕುಳಿತ. ಇದರಿಂದ ಸಮಷ್ಟಿವಾದಿ ರಾಷ್ಟ್ರಗಳಲ್ಲಿಯೂ ಫ್ಯಾಸಿಸ್ಟ್ ವಾದಿ ರಾಷ್ಟ್ರಗಳಲ್ಲಿದ್ದಂತೆಯೆ ಜನತೆ ಸರ್ವಾಧಿಕಾರಿಯ ವಜ್ರಮುಷ್ಟಿ ಕೆಂಗಣ್ಣುಗಳಿಗೆ ಅಧೀನವಾಗಿ ಬಿದ್ದಿರಬೇಕಾಯಿತು.

೪

ಪ್ರಜಾತಂತ್ರ : ಒಂದು ಸಲ ಪ್ರಜೆ ಕೇಂದ್ರದ ಅಧೀನವಾಗಿ ಬಿಟ್ಟ ಮೇಲೆ ಆ ಬಲೆಯಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿದಷ್ಟೂ ಅದರಲ್ಲಿಯೆ ಮತ್ತಷ್ಟು ತೊಡರಿಕೊಂಡ ಹಾಗಾಗುತ್ತದೆ. ಮಾನವ ಇತಿಹಾಸವನ್ನು ನೋಡಿದರೆ ಇದು ಸ್ಪಷ್ಟವಾಗಿ ಕಾಣುತ್ತದೆ. ಹೀಗೆ ಪ್ರತಿ ಸಲವೂ ಪ್ರಜಾತಂತ್ರಕ್ಕಾಗಿ ಮಾಡಿದ ಪ್ರಯತ್ನಗಳನ್ನು ವಿಫಲಗೊಳಿಸುವುದು ಯಾವುದು ಎಂದು ಹುಡುಕಬೇಕಾಯಿತು. ಆಡಳಿತವನ್ನು ವಿಕೇಂದ್ರಿತಗೊಳಿಸುವುದು ಜನಕ್ರಾಂತಿಗೆ ಅಗತ್ಯವಾಗಿತ್ತು; ಪ್ರಜೆಯ ಕೈಗೆ ಅಧಿಕಾರ ಬರಲು ಅದು ದಾರಿ. ಹಾಗೆ ಮಾಡಿದುದೂ ಆಯಿತು. ಈ ಕೆಲಸದಲ್ಲಿ ಸಫಲವಾಗುವ ಹೊತ್ತಿಗೆ ಸರಿಯಾಗಿ ಔದ್ಯೋಗಿಕ ಕ್ರಾಂತಿಯಾಗಿ ಉತ್ಪಾದನದ ಸಾಧನಗಳೆಲ್ಲ ಕೇಂದ್ರಿತವಾದವು. ಬಂಡವಾಳಗಾರರು ಅದನ್ನು ವಶಪಡಿಸಿಕೊಂಡರು. ಉತ್ಪಾದನ ಸಾಧನಗಳು ವಶವಾದುದರಿಂದ ಆಡಳಿತದ ಯಂತ್ರವೂ ಬಂಡವಾಳಗಾರರ ವಶವಾಯಿತು. ಇನ್ನೂ ಎಳೆಗೂಸಾದ ಪ್ರಜಾತಂತ್ರವನ್ನು ಅವರು ಗೋಣು ಮುರಿದುಹಾಕಿದರು. ಆದದ್ದು ಇಷ್ಟೇ : ಅಧಿಕಾರವೇನು ವಿಕೇಂದ್ರಿತವಾಗಲಿಲ್ಲ, ಪಾರುಪತ್ಯಗಾರರು ಬೇರೆಯಾದರು ಹೀಗೆ ರಾಜ್ಯಾಧಿಕಾರ ಪಾಳೆಯಗಾರರ ಕೈ ಬಿಟ್ಟು ಬಂಡವಾಳಗಾರರ ಕೈಗೆ ಬಂತು. ಇದನ್ನು ನೋಡಿ ಉತ್ಪಾದನ ಯಂತ್ರವನ್ನು ವಶಪಡಿಸಿಕೊಳ್ಳಿ

ಎಂದು ಸಮಾಜಕ್ಕೆ ಕಾರ್ಲ್ ಮಾರ್ಕ್ಸ್ ಹೇಳಿದ. ಮಾರ್ಕ್ಸ್‌ನ ಈ ಸಲಹೆಯ ಪ್ರಕಾರ ಒಂದು ನೂರು ವರ್ಷ ಜನ ಕೆಲಸ ಮಾಡಿ ಅನುಭವ ಪಡೆದರು. ಆಮೇಲೆ ಗಾಂಧೀಜಿಯ ಜನ್ಮವಾಯಿತು. ಮಾರ್ಕ್ಸ್ ತೋರಿದ ದಾರಿ ಫಲಕಾರಿಯಲ್ಲ; ಉತ್ಪಾದನಯಂತ್ರ ಶಾಸನಯಂತ್ರಗಳು ಕೇಂದ್ರಿತವಾಗಿರುವವರೆಗೆ ಪ್ರಜೆಯ ಕೈಗೆ ಅಧಿಕಾರ ಬರುವ ಸಂಭವವಿಲ್ಲ ಎಂದು ಅವರಿಗೆ ಹೊಳೆಯಿತು. ಪ್ರಜಾಪ್ರತಿನಿಧಿಯಾಗಲಿ ಬಂಡವಾಳಗಾರರಾಗಲಿ, ಯಾರ ಕೈಯಲ್ಲಿ ಕೇಂದ್ರೀಯ ಯಂತ್ರಗಳ ಮೇಲೆ ಅಧಿಕಾರವಿರುತ್ತದೆಯೋ ಅವರ ಕೈಯಲ್ಲಿ ನಿಜವಾಗಿ ಅಧಿಕಾರ. ಅವರು ಹೇಗಾದರೂ ಮಾಡಿ ತಮ್ಮ ಕೈಯಲ್ಲಿಯೇ ಸದಾ ಕಾಲವೂ ಅಧಿಕಾರವಿರಬೇಕೆಂದು ಪ್ರಯತ್ನಿಸುತ್ತಾರೆ. ಆದ್ದರಿಂದ ಉತ್ಪಾದನ-ಶಾಸನ ಎರಡೂ ಪ್ರಜೆಗೆ ಸ್ವಾಧೀನವಾಗಿರಬೇಕು. ಬರೀ ಹೆಸರಿಗೆ ಮಾತ್ರ ಸ್ವಾಧೀನವಲ್ಲ, ನಿಜವಾಗಿಯೂ. ಕೇಂದ್ರೀಯ ಯಂತ್ರಗಳನ್ನು ವಿಕೇಂದ್ರೀಕರಿಸಿ ಅವನ್ನು ಜನತೆಗೆ ವಶಪಡಿಸಬೇಕು. ಯಂತ್ರಗಳ ವಿಕೇಂದ್ರೀಕರಣವಾಗುವವರೆಗೆ ಅಧಿಕಾರದ ವಿಕೇಂದ್ರೀಕರಣ ಅಸಂಭವ. ಶಾಸನ-ಉತ್ಪಾದನ, ಎರಡೂ ವಿಕೇಂದ್ರಿತವಾಗಿ ಪ್ರತ್ಯಕ್ಷವಾಗಿ ಪ್ರಜೆಯ ಕೈಗೆ ಬಂದ ಮೇಲೆಯೇ ನಿಜವಾದ ಪ್ರಜಾರಾಜ್ಯ ಸ್ಥಾಪನೆ ಸಾಧ್ಯ.

ಸ್ವತಂತ್ರತೆ: ಸಂಪೂರ್ಣ ವಿಕೇಂದ್ರೀಕರಣ : ಕೇಂದ್ರೀಯ ಶಾಸನ-ಉತ್ಪಾದನ ಯಂತ್ರಗಳು ಪ್ರತ್ಯಕ್ಷವಾಗಿ ಪ್ರಜೆಯ ಕೈಗೆ ಬರಬೇಕೆಂದರೆ, ತನ್ನ ಬಾಳುಬದುಕಿನ ಅಗತ್ಯಗಳ ಪೂರಯಿಕೆ, ಸಮಾಜದ ವ್ಯವಸ್ಥೆ ಎರಡರಲ್ಲಿಯೂ ಪ್ರಜೆ ಸ್ವಾವಲಂಬಿಯಾಗಬೇಕು ಎಂದು ಅರ್ಥ. ಶಾಸನ ಯಂತ್ರ ಉತ್ಪಾದನ ಯಂತ್ರಗಳ ಸಂಪೂರ್ಣ ವಿಕೇಂದ್ರೀಕರಣವೇ ಸಂಪೂರ್ಣ ಪ್ರಜಾಸ್ವಾತಂತ್ರ್ಯ. ಆ ಬಗೆಯ ಪೂರ್ಣ ಸ್ವಾತಂತ್ರ್ಯದಲ್ಲಿ ಕೇಂದ್ರೀಯ ವ್ಯವಸ್ಥೆಗೆ ಎಳ್ಳಷ್ಟೂ ಅವಕಾಶವಿಲ್ಲ.

ಹಿಂಸೆಯ ಸಮಾಪ್ತಿಗೆ ಶಾಸನ ಸಮಾಪ್ತಿ ಅಗತ್ಯ : ಬೇರೆ ದೃಷ್ಟಿಯಿಂದಲೂ, ಆಡಳಿತ ಎಂದರೆ ಸರಕಾರವನ್ನು ಕೊನೆಗಾಣಿಸಬೇಕಾದುದು ಅಗತ್ಯ. ವ್ಯಕ್ತಿಗಳ ಚಿಕ್ಕ ಪುಟ್ಟ ಹಿಂಸೆಗಳನ್ನು ನಿಗ್ರಹಿಸಲೆಂದು ಒಂದು ದೊಡ್ಡ ಹಿಂಸೆಯನ್ನು ಅಥವಾ ಶಾಸನ ಯಂತ್ರವನ್ನು ಸ್ಥಾಪಿಸಿದರು ಎಂದು

ಮೊದಲೇ ಹೇಳಿದೇನೆ. ಆಡಳಿತದ ಕೆಲಸ ಪ್ರಜೆಯನ್ನು ಅದುಮಿ ಅವರನ್ನು ಹಿಡಿತದಲ್ಲಿರಿಸುವುದು. ಎಂದರೆ, **ಸ್ವಾಭಾವಿಕವಾಗಿಯೆ ಶಾಸನ ಯಂತ್ರ ಹಿಂಸಾತ್ಮಕ.** ಆದ್ದರಿಂದ ಲೋಕದಲ್ಲಿ ಹಿಂಸೆಯನ್ನು ಕೊನೆಗಾಣಿಸಬೇಕಾದರೆ ಲೋಕದಲ್ಲಿ ಸರಕಾರವಿಲ್ಲದಾ ಬೇಕು. ಹಾಗೆ ಮಾಡಲು ಸಮಾಜ ಸ್ವಶಾಸನ ಅಥವಾ ಸುವ್ಯವಸ್ಥೆ ನಡೆಸುವ ಯೋಗ್ಯತೆ ಪಡೆಯಬೇಕು. ಜನರು ತಮ್ಮ ದಿನದ ಅಗತ್ಯಗಳ ಬಗ್ಗೆ ಸ್ವಾವಲಂಬಿಗಳಾದಾಗ ಈ ಯೋಗ್ಯತೆ ಬರುತ್ತದೆ.

ಸ್ವಚ್ಛಂದತೆ - ಸ್ವತಂತ್ರತೆ: ಮೊಟ್ಟಮೊದಲು ಮನುಷ್ಯ ಪೂರಾ ಸ್ವಚ್ಛಂದನಾಗಿದ್ದ. ಅವನ ಸ್ವಚ್ಛಂದತೆಯಿಂದ ಪರಸ್ಪರ ಹಿಂಸೆ ಹುಟ್ಟಿತು; ಸಮಾಜಕ್ಕೇ ಕುತ್ತಾಯಿತು. ಸಮಾಜವನ್ನು ಶಾಸನಹೀನಗೊಳಿಸಬೇಕೆಂದರೆ ಮನುಷ್ಯನ ಈ ಸ್ವಚ್ಛಂದತೆ ಹೋಗಿ ಅದರ ಬದಲು ಸ್ವತಂತ್ರತೆ ಬರಬೇಕು. ತಮಗೆ ಸ್ವತಂತ್ರತೆಯ ಯೋಗ್ಯತೆಯಿಲ್ಲದಿದ್ದರೆ ಜನರು ಸ್ವತಂತ್ರರಾಗಿರಲು ಸಾಧ್ಯವೇ ಇಲ್ಲ. ಆದ್ದರಿಂದ ಜನರಲ್ಲಿ ಸ್ವಾವಲಂಬಿ ವೃತ್ತಿ ಅತ್ಯಗತ್ಯ. ನಮ್ಮ ಶಿಕ್ಷಣದ ಪದ್ಧತಿ ಪ್ರತಿಯೊಬ್ಬನಿಗೂ ಭೌತಿಕ ಆವಶ್ಯಕತೆಗಳ ಪೂರಯಿಕೆಗಾಗಿ ಸ್ವಾವಲಂಬನ, ಸಮಾಜ ವ್ಯವಸ್ಥೆಗಾಗಿ ಯೋಗ್ಯತೆ, ಎರಡನ್ನೂ ಕೊಡುವಂಥದಾದರೆ ಇದು ಸಾಧ್ಯವಾದೀತು. ಸಮಾಜದ ಉದ್ದೇಶ್ಯಗಳನ್ನು ಸಫಲಗೊಳಿಸಲು ವ್ಯಕ್ತಿ ಅಣಿಯಾಗುವಂತೆ ಮಾಡುವುದೇ ಶಿಕ್ಷಣದ ನಿಜವಾದ ಉದ್ದೇಶ್ಯ.

ನಯೀ ತಾಲೀಂ - ಉದ್ದೇಶ್ಯ, ಪದ್ಧತಿ: ಈ ಉದ್ದೇಶ್ಯ ಪೂರ್ತಿಗಾಗಿಯೆ ಗಾಂಧೀಜಿ ನಯೀ ತಾಲೀಂ ಹೆಜ್ಜೆ ಹಾಕಿದುದು. ಸಾಮಾಜಿಕ ವಾತಾವರಣ, ಪ್ರಕೃತಿ ಪರಿಚಯಗಳ ಜೊತೆಗೆ ಕೈಗಾರಿಕೆಯನ್ನು ಅವರು ಈ ಶಿಕ್ಷಣದ ಮಾಧ್ಯಮವಾಗಿ ಮಾಡಿದರು. ಜನರು ತಮ್ಮ ತಮ್ಮ ಅಗತ್ಯಗಳನ್ನು ತಾವೇ ಪೂರಯಿಸಿಕೊಳ್ಳುವವರೆಗೆ ಸ್ವಾವಲಂಬಿ ಸಮಾಜ ಸ್ಥಾಪನೆ ಸಾಧ್ಯವಿಲ್ಲ. ಜನರಿಗೆ ಚಿಕ್ಕಂದಿನಿಂದಲೇ ಕೈಗಾರಿಕೆ ಅಭ್ಯಾಸವಾದರೆ, ಅದರ ಶಾಸ್ತ್ರೀಯ ಜ್ಞಾನ ಲಭಿಸಿದರೆ ಇದು ಸಾಧ್ಯ. ಹಿಂದಿನ ಕಾಲದಲ್ಲಿಯೂ ಕೈಗಾರಿಕೆಯಿತ್ತು. ಅದು ಶಾಸ್ತ್ರೀಯವಾಗಿರಲಿಲ್ಲ. ಬ್ರಾಹ್ಮಣ, ಶೂದ್ರ ಹೀಗೆ ಎರಡು ಬೇರೆ ಬೇರೆ ವಿಭಾಗಗಳಾದುದರಿಂದ ಜ್ಞಾನ-ಉದ್ಯೋಗ

(ಕರ್ಮ)ಗಳ ಸಮನ್ವಯವಾಗಲಿಲ್ಲ. ಅನುಭವದ ಅಭಾವದಿಂದ ಜ್ಞಾನ ಮುಳುಗಿಹೋಯಿತು. ಸಮಾಜವೇನೋ ತನ್ನ ಆವಶ್ಯಕತೆಗಳನ್ನು ಹಿಂದಿನಿಂದ ನಡೆದು ಬಂದ ಪದ್ಧತಿಯಿಂದಲೇ ಪೂರಯಿಸಿಕೊಳ್ಳುತ್ತಿತ್ತು. ಈ ದೃಷ್ಟಿಯಿಂದ ಅದು ಸ್ವಾವಲಂಬಿಯೇ. ಆದರೆ ಜ್ಞಾನ-ವಿಜ್ಞಾನ, ವ್ಯವಸ್ಥೆ, ಸಂಚಾಲನೆ ಒಂದು ವಿಶಿಷ್ಟ ವರ್ಗದ ಜವಾಬದಾರಿಯಾದುದರಿಂದ ಪ್ರಜೆ ಸ್ವಾವಲಂಬಿಯಾದರೂ ಸ್ವತಂತ್ರವಾಗಲಿಲ್ಲ. ಚಿಕ್ಕಂದಿನಿಂದಲೇ ಪ್ರತಿಯೊಂದು ಮಾತಿಗೂ ಕೇಂದ್ರ ತಂತ್ರವನ್ನೇ ಶರಣು ಹೋಗಬೇಕಾಗುತ್ತಿತ್ತು. ಗೃಹೋದ್ಯೋಗದ ಶಿಕ್ಷಣದ ಮೂಲಕ ಪ್ರಜೆಯನ್ನು ಭೌತಿಕ ಆವಶ್ಯಕತೆಗಳ ಬಗ್ಗೆ ಸ್ವಾವಲಂಬಿಗಳಾಗಿ ಮಾಡುವುದರ ಜೊತೆಗೆ ಅದೇ ಔದ್ಯೋಗಿಕ ಕಾರ್ಯದ ಮಾಧ್ಯಮದಿಂದ ಪ್ರಜೆಯನ್ನು ಜಾಗೃತ, ಸ್ವಾವಲಂಬಿ, ಸುವಿಕಸಿತ ನಾಗರಿಕರಾಗಿಯೂ ಮಾಡಲು ಬಯಸಿದರು ಗಾಂಧೀಜಿ. ಔದ್ಯೋಗಿಕ ಕಾರ್ಯದ ಮೂಲಕ ಜನರಿಗೆ ವಸ್ತು-ವಿಷಯಗಳ ಜ್ಞಾನ ಮಾಡಿಕೊಟ್ಟು ಗಾಂಧೀಜಿ ಅದರಲ್ಲಿ ಸ್ವಾವಲಂಬನೆಯನ್ನೂ ರಾಜಕೀಯ ಚೇತನಗಳನ್ನೂ ಜಾಗೃತಗೊಳಿಸಿಡ ಬಯಸಿದರು. ಜನರಿಗೆ ಕೈಗಾರಿಕೆಯ ನಿಶ್ಚಿತ ಉದ್ದೇಶ್ಯವೂ ತಿಳಿದಿರಲಿ ಎಂಬುದೂ ಒಂದು ಉದ್ದೇಶ್ಯ. ಹೀಗೆ ಜನರ ಬೌದ್ಧಿಕ ಸಾಮಾಜಿಕ ವಿಕಾಸವಾಗಿ, ಕೇಂದ್ರದ ಗೊಡವೆಯಿಲ್ಲದೆ ಯಾಂತ್ರಿಕ, ಆರ್ಥಿಕ ಸಮಸ್ಯೆಗಳನ್ನು ಸಮಯಾನುಕೂಲವಾಗಿ ಬಿಡಿಸಿಕೊಂಡು ಪರಿವರ್ತನಶೀಲವಾದ ಲೋಕದಲ್ಲಿ ಪ್ರಗತಿ ಹೊಂದಬಲ್ಲರು. ಈ ಬಗೆಯ ಯೋಗ್ಯತೆಯಿಲ್ಲದುದಕ್ಕೇ ಜನರು ತಜ್ಞರ ಹಿಡಿತದಲ್ಲಿ ಸಿಕ್ಕಿ ಅವರ ಗುಲಾಮರಾಗುತ್ತಾರೆ. ಉದ್ಯೋಗ ವೃತ್ತಿ ವಿಜ್ಞಾನಗಳನ್ನು ಮನುಷ್ಯನ ಜೀವನದ ಒಂದು ಅಂಗವಾಗಿ ಮಾಡಬೇಕಾದ್ದು ಅಗತ್ಯ. ಎಳೆತನದಿಂದಲೇ ಇವನ್ನು ಕ್ರಿಯಾತ್ಮಕವಾಗಿ ಅಭ್ಯಾಸ ಮಾಡಿದರೇನೇ ಇದು ಸಾಧ್ಯ. ನಿರಂತರ ಅಭ್ಯಾಸದಿಂದ ಮನುಷ್ಯನ ಸಂಸ್ಕಾರದಲ್ಲಿಯೆ ಸ್ವಾವಲಂಬನೆ ಸೇರಿಕೊಳ್ಳುತ್ತದೆ. ಗಾಂಧೀಜಿಯ 'ನಯೀ ತಾಲೀಮಿ'ನ ಉದ್ದೇಶ್ಯ ಅದೇ. ಅವರ ಪದ್ಧತಿಯೂ ಅದೇ.

ನಯೀ ತಾಲೀಮಿನ ಅಗತ್ಯ : ಒಂದು ಮಕ್ಕಳ ಕತೆಯಿದೆ. ಕೆಲವರು ರಾಕ್ಷಸರು ತಮ್ಮ ಪ್ರಾಣವನ್ನು ಒಂದು ಭ್ರಮರದೊಳಗಿಟ್ಟು ನಿಶ್ಚಿಂತೆ

ಯಿಂದ ವಿಹರಿಸುತ್ತಿದ್ದರು. ರಾಕ್ಷಸರು ಎಲ್ಲಿಯೋ ಹೋಗಿದ್ದಾಗ ಒಂದು ದಿನ ಒಬ್ಬ ರಾಜಕುಮಾರ ಆ ಭ್ರಮರವನ್ನು ಹಿಡಿದು ಮುಷ್ಟಿಯೊಳಗೆ ಇಟ್ಟುಕೊಂಡ. ರಾಕ್ಷಸರ ಪ್ರಾಣವೇ ಮುಷ್ಟಿಯಲ್ಲಿ ಬಂತು. ಆದ್ದರಿಂದ ಅವರು ಇವನ ಮುಷ್ಟಿಗೆ ಸಿಕ್ಕರು. ಆಗ ಇದಿರಿಲ್ಲದೆ ಆ ರಾಜಕುಮಾರ ರಾಕ್ಷಸರನ್ನು ಆಳತೊಡಗಿದ. ಕೇಳಲಿಕ್ಕೆ ಇದು ಕಥೆಯೆ. ಆದರೂ ಅದರಲ್ಲಿ ಒಂದು ದೊಡ್ಡ ಮಾತು ಅಡಗಿದೆ. ಒಂದು ಗಿರಣಿಯ ಹೊಗೆ-ಕೊಳವೆಯಲ್ಲಿ, ಒಂದು ಟ್ರಾಕ್ಟರ್ ಚಕ್ರದಲ್ಲಿ ಜನರು ತಮ್ಮ ಪ್ರಾಣವನ್ನು ಬಚ್ಚಿಟ್ಟರೋ, ಬಚ್ಚಿಟ್ಟು ನಿಶ್ಚಿಂತರಾದರೋ, ಯಾರಾದರೂ ಆ ಭ್ರಮರವನ್ನು ಮುಷ್ಟಿಯಲ್ಲಿ ಹಿಡಿದಾರು; ಹಿಡಿದು ಜನತೆಯ ಮೇಲೆ ಅಧಿಕಾರ ನಡಸಿಯಾರು. ಆದ್ದರಿಂದ ಜನರು ತಮ್ಮ ಪ್ರಾಣವನ್ನು ತಮ್ಮ ಶರೀರದಲ್ಲೇ ಇರಿಸಿಕೊಳ್ಳಬೇಕು. ತಮ್ಮ ಬಾಳಿಗೆ ಅಗತ್ಯವಾದ ಪದಾರ್ಥಗಳನ್ನು ತಮ್ಮ ಕೈಯಾರೆ ನಿರ್ಮಿಸಬೇಕು. ಹೀಗೆ ಮಾಡುವುದರಲ್ಲಿ ಜನರಿಗೆ ಕಷ್ಟವೆನಿಸಿದರೆ, ಉತ್ಪಾದನ ಕಾರ್ಯದಲ್ಲಿ ಅದನ್ನು ಮಾಡುತ್ತ ಬೇಸರಗೊಂಡರೆ, ಅದರ ಅರ್ಥ-ಜನರಿಗೆ ತಮ್ಮ ಅಮೂಲ್ಯ ಸ್ವಾತಂತ್ರ್ಯಕ್ಕಿಂತ ಗುಲಾಮಗಿರಿಯೇ ರುಚಿಸತೊಡಗಿದೆ ಎನ್ನಬೇಕು. ಆದುದರಿಂದ ಕೈಗಾರಿಕೆಯ ಕೆಲಸ ಕಲಾಪೂರ್ಣವಾಗಿರಬೇಕು; ಅದರ ವೇಗ ಹೆಚ್ಚಾಗಿರಬೇಕು; ಅದರ ಕೌಶಲ ಸುಗಮವಾಗಿರಬೇಕು. ಎಳೆತನದಿಂದ ರೂಢಿಯಾದಾಗ ಅದರ ಕೌಶಲ ಸುಗಮವಾಗುತ್ತದೆ. 'ನಯೀ ತಾಲೀಮಿ'ನಿಂದ ಈ ಅಭ್ಯಾಸ ದೃಢವಾಗುತ್ತದೆ. ಈ ಅಭ್ಯಾಸ ಏಕೆ ಅಗತ್ಯ, ಅದರ ಗುಟ್ಟೇನು ಎಂಬುದೂ ಅರಿವಾಗುತ್ತದೆ.

ನಯೀ ತಾಲೀಮಿನಿಂದ ಸಮಾಜ ವಿಜ್ಞಾನ: ಈ ಶಿಕ್ಷಣದಲ್ಲಿ ಸಾಮಾಜಿಕ ವಾತಾವರಣವನ್ನು ಶಿಕ್ಷಣದ ಮಾಧ್ಯಮವಾಗಿ ಮಾಡಿದೆ. ಹೀಗೆ ಮೊದಲಿನಿಂದಲೂ ಮಕ್ಕಳಿಗೆ ಸಮಾಜದ ವ್ಯವಸ್ಥೆಯ ಸಮಸ್ಯೆಗಳ ಜ್ಞಾನವಾಗುತ್ತದೆ. ಸಮಾಜವ್ಯವಸ್ಥೆ, ವಾತಾವರಣಗಳ ಅಧ್ಯಯನದ ಜೊತೆಗೆ ಮಕ್ಕಳಲ್ಲಿ ಸಮಸ್ಯೆಗಳಿಗೆ ಉತ್ತರ ಹುಡುಕುವ ಶಕ್ತಿ ಹುಟ್ಟುತ್ತದೆ. ಮಕ್ಕಳಾಗಲಿ ಮುದುಕರಾಗಲಿ, ಯಾವುದಾದರೊಂದು ಸಮಸ್ಯೆಯ ಬಗ್ಗೆ ವಿಚಾರಮಾಡ ತೊಡಗಿದರೆ ತಳದವರೆಗೂ ಇಳಿಯುವ ಅಭ್ಯಾಸ ರೂಢಿ

ಯಾಗುತ್ತದೆ. ವ್ಯವಸ್ಥೆಯ ಭಾರವನ್ನು ಹೊರಲು ಅವರು ಸಿದ್ಧರಾಗುತ್ತಾರೆ.

ಸ್ವಯಂ ವಿಕೇಂದ್ರೀಕರಣ : ಶಿಕ್ಷಣ ಸಾರ್ವಜನಿಕವಾದುದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಸ್ವಾವಲಂಬಿ ಉತ್ಪಾದಕ, ಸ್ವಾವಲಂಬಿ ವ್ಯವಸ್ಥಾಪಕ ಆಗುತ್ತಾನೆ. ಕ್ರಮೇಣ ಆಡಳಿತವನ್ನು ಪೂರಾ ವಿಘಟನೆ ಮಾಡಲು ಸಮರ್ಥನಾಗುತ್ತಾನೆ. ಪ್ರಜೆ ತನ್ನ ಅಗತ್ಯಗಳನ್ನು ತಾನೇ ಪೂರಯಿಸಿ ತನ್ನ ವ್ಯವಸ್ಥೆಯನ್ನು ತಾನೇ ಮಾಡಿಕೊಂಡರೆ ಬೇರೆ ಕೇಂದ್ರೀಯ ಆಡಳಿತದ ಆಸರೆಯೇಕೆ? ಹೀಗೆ ಇಡೀ ಸಮಾಜವೇ ವಿಕೇಂದ್ರಿತವಾಗುತ್ತದೆ.

ಗಾಂಧಿ - ಸಮಷ್ಟಿವಾದಿ : ಸಮಷ್ಟಿವಾದಿಗಳೂ ಸಹ ಪ್ರಜೆಯನ್ನು ಸ್ವತಂತ್ರರಾಗಿಸಿ ಸಮಾಜವನ್ನು ಶಾಂತಿಪೂರ್ಣವಾಗಿ ಮಾಡಲು ಜಗತ್ತಿನಲ್ಲಿ ಶಾಸನರಹಿತ ಸಮಾಜವನ್ನು ಸ್ಥಾಪಿಸಬಯಸುತ್ತಾರೆ. ಆದರೆ ಅವರ ದಾರಿ ಗಾಂಧೀ ದಾರಿಯಲ್ಲ, ಬೇರೆ. ಮೊದಲು ಶಾಸನಯಂತ್ರವನ್ನು ಬಿಗಿಮಾಡಿ ಆಮೇಲೆ ಸಡಲಿಸಬಯಸುತ್ತಾರೆ. ನಾವು ಎತ್ತಕಡೆಗೆ ಹೋಗಬೇಕೋ ನಮ್ಮ ದಾರಿಯೂ ಅತ್ತಕಡೆಗೇ ಇರಬೇಕು ಎನ್ನುತ್ತಾರೆ ಗಾಂಧೀಜಿ. ಇದಿರು ದಿಕ್ಕಿಗೆ ನಡೆದು ತನ್ನ ಗುರಿಯನ್ನು ಮುಟ್ಟಲು ಸಾಧ್ಯವೆ? ಶಾಸನವನ್ನು ಸಡಿಲಗೊಳಿಸಬೇಕೆನ್ನುವವರು ಅದನ್ನು ಬಿಗಿ ಮಾಡಿದರೆ ಆದೀತೆ? ಸಡಿಲಮಾಡುತ್ತ ಹೋದರೇನೇ ಸಡಿಲವಾಗುವುದು. ಆದ್ದರಿಂದಲೇ ಗಾಂಧೀಜಿ 'ನಯೀ ತಾಲೀಂ' ಮೂಲಕ ತನ್ನ ಅಗತ್ಯಗಳ ಪೂರಯಿಕೆ, ಸಮಾಜ ವ್ಯವಸ್ಥೆ ಎರಡರಲ್ಲೂ ಪ್ರಜೆ ಸ್ವಾವಲಂಬಿಯಾಗುವಂತೆ ಅಭ್ಯಾಸಮಾಡಿಸಿ, ಕ್ರಮವಾಗಿ ಶಾಸನ - ವ್ಯವಸ್ಥೆಗಳ ಚೌಕಟ್ಟನ್ನೇ ಸಡಿಲಗೊಳಿಸುವ ಪ್ರಯತ್ನಮಾಡಿದರು. ಕಡೆಗೆ ಇದೆಲ್ಲವೂ ಕುಸಿದುಬಿದ್ದು ಪ್ರಜೆ ಪೂರ್ಣವಾಗಿ ಮುಕ್ತವಾಗಬೇಕು. ಆದರೆ ನಮ್ಮ ದಾರಿಯೇ ಆಡಳಿತವನ್ನು ಬಿಗಿಮಾಡುವುದಾದರೆ, ಅದು ಎಷ್ಟೆಷ್ಟು ಬಿಗಿಯಾಗುತ್ತದೆಯೋ ಪ್ರಜೆಯ ಸ್ವಾತಂತ್ರ್ಯವೂ ಅಷ್ಟಷ್ಟುಕಡಮೆಯಾಗುತ್ತದೆ. ಇದು ಸಾಧಾರಣ ವಿವೇಕ, ಎಲ್ಲರಿಗೂ ತಿಳಿಯುವಂಥದು. ಇದಕ್ಕೆ ವಿರುದ್ಧವಾಗಿ ಹೀಗೆ ಬಿಗಿಮಾಡುತ್ತ ಬಂದರೆ ಅದು ತನ್ನಷ್ಟಕ್ಕೆ ತಾನೇ ಹೇಗೆ ಬಾಡಿ

ಒಣಗಿ ಉದುರಿ ಹೋಗುತ್ತದೆಯೋ, ಅದು ಯಾವಾಗಲೋ, ಅರ್ಥ ವಾಗದು. ಸಮಾಜ ಹೇಗೆ ಬಿಡುಗಡೆ ಹೊಂದುತ್ತದೆಯೋ ? ಆಮೇಲೆ ಪ್ರಜೆ ಬಿಡುಗಡೆ ಆಗಿತಾನೆ ಏನು ಮಾಡಬೇಕು ? ಕಟ್ಟಕಡೆಗೆ ಇದು ಸ್ಥಿತಿ ಎಂದರೆ ಪ್ರಜೆಗೆ ಆ ಆದರ್ಶದಲ್ಲಿ ಆಸಕ್ತಿಯಿಲ್ಲ. ಆ ಗುರಿ ಮುಟ್ಟುವುದ ರೊಳಗಾಗಿ ತನ್ನ ಸ್ಥಿತಿಯೇನಾಗುತ್ತದೆ ಎಂಬುದರಲ್ಲಿ ಆಸಕ್ತಿ. ರೇಖಾ ಗಣಿತದ ಬಿಂದುವಿನಂತೆ ಆದರ್ಶ ಕಾಲ್ಪನಿಕ; ಕಣ್ಣಿಗೆ ಕಾಣುವುದಲ್ಲ. ಹೀಗೆ ಗಾಂಧಿ-ಮಾರ್ಕ್ಸ ಇಬ್ಬರ ಯೋಜನೆಗಳಲ್ಲಿನ ಭೇದ ತಾನೇ ಕಾಣ ಬರುತ್ತದೆ. ಸಮಷ್ಟಿವಾದಿ ಯೋಜನೆಯಲ್ಲಿ ಪ್ರಜೆ ಬಲವಾದ ಕೇಂದ್ರದ ವಜ್ರಮುಷ್ಟಿಯಲ್ಲಿ ಸಿಕ್ಕಿ ತೊಳಲುತ್ತದೆ. ಗಾಂಧೀ ಯೋಜನೆಯಲ್ಲಿ ಶಾಸನವನ್ನು ಮುರಿದು ಸ್ವತಂತ್ರವಾಗಿ ಮುಂಬರಿಯುತ್ತದೆ.

ಆದರ್ಶ - ವ್ಯವಹಾರ : ಸಮಷ್ಟಿ ವಾದಿಗಳು ಹೇಳುವುದು ಹೀಗೆ - ಮೊದಲು ಆಡಳಿತವನ್ನು ಭದ್ರಪಡಿಸಿ ಪ್ರಜೆಗಳ ಸ್ವಾರ್ಥಬುದ್ಧಿಯ ನಿಯಂತ್ರಣ ಮಾಡೋಣ. ಶಾಸನದ ಚಕ್ರ ಪೂರ್ಣವಾದಾಗ ಅದು ತಾನೇ ಬಾಡಿ ಹೋಗುತ್ತದೆ. ಇದು ಪ್ರಕೃತಿಯ ಅಚಲ ನಿಯಮ. (ಪ್ರತಿಯೊಂದು ವಸ್ತುವೂ ಪೂರ್ಣತೆ ಪಡೆದ ಮೇಲೆ ಬಿದ್ದುಹೋಗಲೇ ಬೇಕು.) ಆಗ ಪ್ರಜೆ ಸ್ವತಂತ್ರ, ಶಾಸನರಹಿತ ಆದೀತು. ಆದರೆ ಇದು ಕಚ್ಚಾ ಆದರ್ಶವಾದ. ವ್ಯವಹಾರಕ್ಕೂ ಇದಕ್ಕೂ ಸಂಬಂಧವಿಲ್ಲ. ಏಕೆಂದರೆ, ಆದರ್ಶ ಯಾವಾಗಲೂ ಕಟ್ಟಕಡೆಯದು, ಯಾವಾಗಲೂ ಕೈಗೆ ಎಟುಕು ವುದೇ ಇಲ್ಲ. ಗುರಿಯ ಕಡೆ ಸಮಾಜ ಎಷ್ಟು ಮುಂಬರಿದರೆ ಅದೂ ಅಷ್ಟು ದೂರ ಬಿಸಿಲುಗುದುರೆಯಂತೆ ಓಡುತ್ತದೆ. ಒಂದು ಹೆಜ್ಜೆ ಮುಂದಿಟ್ಟರೆ ಉದ್ದೇಶ್ಯ ಸಾಫಲ್ಯದ ಕಡೆ ಹೋದ ಹಾಗಾದರೆ ಅದು ವ್ಯವಹಾರವಾದ.

ಅಭ್ಯಾಸ - ಸ್ಥಾಯಿತ್ವ : ಬರೀ ಕಲ್ಪನೆಯ ಕನಸಿನ ಲೋಕದಲ್ಲಿ ಓಡಾಡಿದರೂ ಈ ಮಾತು ಯುಕ್ತಿ - ಯುಕ್ತವಾಗಿಲ್ಲ. ಶಾಸನಾಧಿಕಾರದ ಪರವಾಗಿ ಜಗತ್ತಿನ ಸರ್ವಸ್ವವನ್ನೂ ವಶಪಡಿಸಿಕೊಂಡು, ಕೇಂದ್ರದ ಮೂಲಕವೇ ಸಮಾಜದ ಸರ್ವ ವ್ಯವಸ್ಥೆಯನ್ನೂ ಮಾಡಿದ ಮೇಲೆ, ಸಮಾಜಕ್ಕೆ ಎಟಕುವ ಕಾಲದಲ್ಲಿಯೇ ಶಾಸನ ಬಾಡಿ ಉದುರಿಹೋಯಿತು ಎನ್ನೋಣ. ಹಾಗೆ ಒಂದು ದಿನ ಆಡಳಿತ ಕುಸಿದುಬಿದ್ದರೆ ಜನರು

ಕಿಂಕರ್ತವ್ಯ ಮೂಢರಾಗಿ ದಿಕ್ಕೆಟ್ಟಾರು. ಎಲ್ಲ ಹೊಣೆಯನ್ನೂ ಕರ್ತೃತ್ವವನ್ನೂ ಕೇಂದ್ರಕ್ಕೆ ವಹಿಸಿ ನಿಶ್ಚಿಂತವಾಗಿ ಬಿದ್ದು ರೂಢಿಯಾದ ಮೇಲೆ ಇದ್ದಕ್ಕಿದ್ದಂತೆ ಒಮ್ಮೆಲೇ ಜನತೆಗೆ ಪ್ರೇರಣಾ ಶಕ್ತಿ ಎಲ್ಲಿಂದ ಬರಬೇಕು? ಯಾವ ಶಕ್ತಿಯನ್ನು ಅಭ್ಯಾಸ ಮಾಡುವುದಿಲ್ಲವೋ ಆ ಶಕ್ತಿಗೆ ಪಕ್ಷವಾಯು ತಗಲುತ್ತದೆ; ಇದು ವಿಜ್ಞಾನದ ನಿಯಮ. ಈ ಕಾಲ್ಪನಿಕ ಸ್ವಾತಂತ್ರ್ಯ ಸಮಾಜಕ್ಕೆ ಸಿಕ್ಕಿತು ಎನ್ನೋಣ. ಜನತೆಯಲ್ಲಿ ಪ್ರೇರಣಾಶಕ್ತಿಯಿಲ್ಲದುದರಿಂದ ಆಗ ಸಮಾಜ ನಡೆಯಲಾರದು.

ನಯೀ ತಾಲೀಂ - ಏಕಮಾತ್ರ ವೈಜ್ಞಾನಿಕ ಮಾರ್ಗ: 'ನಯೀ ತಾಲೀಮ್' ಜನರನ್ನು ಸ್ವಾವಲಂಬಿಗಳೂ ಶಾಂತಿಮಯರೂ ಆಗಿಸಿ ಅಹಿಂಸಾತ್ಮಕ ರೀತಿಯಿಂದ ಜಗತ್ತನ್ನು ಶಾಸನಹೀನತೆಯ ಕಡೆಗೆ ಯಶಸ್ವಿಯಾಗಿ ಕರೆದೊಯ್ದೀತು. ಈ ದಾರಿ ಹೆಚ್ಚು ವೈಜ್ಞಾನಿಕ, ಹೆಚ್ಚು ವ್ಯಾವಹಾರಿಕ, ಹೆಚ್ಚು ಪ್ರಗತಿಶೀಲ, ಹೆಚ್ಚು ಸುನಿಶ್ಚಿತ. ಇದರಲ್ಲಿ ಯಾವುದೋ ಅನಂತಕಾಲದ ಮುಕ್ತಿಯ ಆಸೆಯಿಟ್ಟುಕೊಂಡು ಪ್ರಜೆ ಕುಳಿತಿರಬೇಕಾದ್ದಿಲ್ಲ. ತನ್ನ ಸ್ವಯಂ ಪ್ರೇರಣೆಯಿಂದ, ಸ್ವತಂತ್ರ ಕಾರ್ಯದಿಂದ ಮುಂಬರಿಯಲು ಸದಾ ಅವಕಾಶವಿರುತ್ತದೆ.

೨

ಆರ್ಥಿಕ ಸಾಮಾಜಿಕ ಆಧಾರ

ಆರ್ಥಿಕ ಸಾಮಾಜಿಕ ಆಧಾರ

೧

ಸರ್ವಾಂಗೀಣ ಕ್ರಾಂತಿ : ನಯೀ ತಾಲೀಂ ಮೂಲಕ ಗಾಂಧೀಜಿ ಹೇಗೆ ನಿಜವಾದ ಜನತಂತ್ರವನ್ನು ಸ್ಥಾಪಿಸ ಬಯುಸಿದರೋ ನೋಡಿದೇವೆ. ವಿಕೇಂದ್ರೀಕರಣದ ತಳಹದಿಯ ಮೇಲೆ ಸ್ವಾವಲಂಬಿ ಸಮಾಜವನ್ನು ಕಟ್ಟುವ ಯೋಜನೆಯೆ ಪ್ರಜಾತಂತ್ರದ ಇತಿಹಾಸದಲ್ಲಿ ಒಂದು ದೊಡ್ಡ ಕ್ರಾಂತಿಕಾರಿ ಕಲ್ಪನೆಯೇ ಸರಿ. ಆಡಳಿತದ ಯಂತ್ರ ಅಥವಾ ಶಾಸನ ತಂತ್ರ ನಿರಂಕುಶ ದಬ್ಬಾಳಿಕೆ ನಡೆಸದಂತೆ ತಡೆಯಲು ಇದೊಂದೇ ಉಪಾಯ; ಬೇರಿಲ್ಲ. ಬರೀ ರಾಜಕೀಯ ಸ್ವರಾಜ್ಯದಿಂದಲೇ ಸಮಾಜದ ಸಮತೂಕ ಸಮರಸ ಸ್ಥಿರವಾಗಲಾರದು. ಅಸಮಗ್ರವಾದ ಏಕಾಂಗಿ ಕ್ರಾಂತಿಯಿಂದ ಜನರ ಉದ್ದೇಶ್ಯ ಯಾವಾಗಲೂ ಸಫಲವಾಗಿಲ್ಲ. ಇತಿಹಾಸದಿಂದ ಇದು ಕಂಡುಬರುತ್ತದೆ. ಆದುದರಿಂದ ಗುರಿಯನ್ನು ಸಾಧಿಸಬೇಕಾದರೆ ಜನತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಸರ್ವಾಂಗೀಣ ಕ್ರಾಂತಿಯನ್ನು ಮಾಡಬೇಕು. ಹಾಗಾದರೆ ಗುರಿ ಮುಟ್ಟಿ, ಕೆಲ ಕಾಲ ಆ ಸ್ಥಿತಿಯನ್ನು ನೆಲೆಗೊಳಿಸಬಹುದು. ಎಲ್ಲಾ ಕ್ಷೇತ್ರಗಳಲ್ಲಿಯೂ ಒಂಸೇ ನಿಟ್ಟಿನಲ್ಲಿ ಕೆಲಸ ನಡೆಯುಬೇಕು. ಕ್ರಾಂತಿಕಾರ ಜನ ಹುರುಪಿನ ಭರದಲ್ಲಿ ಎಲ್ಲೆಡೆಯೂ ಸರ್ವಾಂಗೀಣ ದೃಷ್ಟಿ ತರುವುದನ್ನು ಮರೆತು, ಬೇರೆ ಬೇರೆ ಕ್ಷೇತ್ರಗಳಲ್ಲಿ ಬೇರೆ ಬೇರೆ ದಿಕ್ಕಿಗೆ ಹೆಜ್ಜೆ ಹಾಕುತ್ತಾರೆ. ಆದ್ದರಿಂದ ಈ ಮಾತನ್ನು ಒತ್ತಿ ಹೇಳಬೇಕಾಗಿದೆ. ಈ ಕಾರಣಕ್ಕಾಗಿಯೆ ಗಾಂಧೀಜಿ ಮೊದಲಿನಿಂದಲೂ ರಾಜಕೀಯ, ಆರ್ಥಿಕ, ಸಾಮಾಜಿಕ, ಎಲ್ಲಾ ಕ್ಷೇತ್ರಗಳಲ್ಲಿಯೂ ಒಂದೇ ಸಲ ಕ್ರಾಂತಿಯನ್ನೆಬ್ಬಿಸಿದರು. ಗಾಂಧೀಜಿಯ ಈ ಸರ್ವಾಂಗೀಣ ಯೋಜನೆಯಿಂದ ಭಾರತದ ನಾಯಕರೂ ಜನರೂ ದಾಸ್ಯದ ಸಮಸ್ಯೆಯನ್ನು ಅರಿತು, ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯದ ಬಗ್ಗೆಯೇ ಹೆಚ್ಚು ಉತ್ಸಾಹ

ದಿಂದ ಕೆಲಸ ಮಾಡಿದರು. ಇವರ ಪರಿಣಾಮ–ತ್ರಿಸೂತ್ರ ಯೋಜನೆಯಿಂದ–ದೇಶದ ರಾಜಕೀಯ ಬಾಳನ್ನು ಸಾಮ್ರಾಜ್ಯವಾದದಿಂದ, ಸಾಮಾಜಿಕ ಜೀವನವನ್ನು ಪ್ರತಿಕ್ರಿಯಾವಾದದಿಂದ, ಆರ್ಥಿಕ ಜೀವನವನ್ನು ಬಂಡವಾಳ ಗಾರಿಕೆಯ ಕೈಯಿಂದ ಬಿಡಿಸಲು ಗಾಂಧೀಜಿ ಬಯಸಿದರು; ಆದರೆ ಈ ದೇಶ ಬರೀ ರಾಜಕೀಯವನ್ನೆ ಹಿಡಿದು ರಾಜಕೀಯ ಸ್ವಾತಂತ್ರ್ಯ ಗಳಿಸಿತು; ಉಳಿದೆರಡೂ ಶೂನ್ಯವಾದವು. ೧೯೨೧ ರಿಂದಲೇ ಗಾಂಧೀಜಿ ಇತ್ತ ಅಸಹ ಕಾರ ಸತ್ಯಾಗ್ರಹಗಳ ಮೂಲಕ ಇಂಗ್ಲೀಷ್ ಸಾಮ್ರಾಜ್ಯದೊಡನೆ ಹೋರಾ ಡುತ್ತ, ಅತ್ತ ರಚನಾತ್ಮಕ ಕಾರ್ಯಕ್ರಮವನ್ನೆ ಒತ್ತಿ ಹೇಳುತ್ತ ಮಾಡಿಸುತ್ತ ಇದ್ದರು. ಜನರ ಮನಸ್ಸನ್ನು ಆರ್ಥಿಕ–ಸಾಮಾಜಿಕ ಕ್ರಾಂತಿಯ ಕಟ್ಟ ಕಡೆಯ ಮಜಲಿನ ಕಡೆಗೆ ಸೆಳೆಯುತ್ತಲೇ ಇದ್ದರು. ಕೆಲಸಗಾರರು ಇದನ್ನು ಗಮನಿಸಲೇ ಇಲ್ಲ. ಒಂದು ಕಡೆ ರಾಜಕೀಯ ಕ್ಷೇತ್ರದಲ್ಲಿ ಹೊಸ ಬಗೆಯ ಕ್ರಾಂತಿಯ ಮೂಲಕ ಒಂದು ಹೊಸ ರಾಜಕೀಯ ರೂಪನ್ನೆ ತರಲು ಬಯಸಿದರು. ಮತ್ತೊಂದು ಕಡೆ ಈಗಿರುವ ಆರ್ಥಿಕ ಸಾಮಾಜಿಕ ವ್ಯವಸ್ಥೆ ಯಲ್ಲಿ ಆಮೂಲ ಪರಿವರ್ತನೆ ಮಾಡಿ, ಅದಕ್ಕೆ ಸ್ಥಿರವಾದ ಶೋಷಣಹೀನ ಎಂದರೆ ಅಹಿಂಸಾತ್ಮಕ ರೂಪನ್ನು ಕೊಡಲು ಪ್ರಯತ್ನಿಸಿದರು. ಆದ್ದರಿಂದ ನಾವು ಹೊಸ ಶಿಕ್ಷಣದ ಆರ್ಥಿಕ ಸಾಮಾಜಿಕ ಆಧಾರವನ್ನೂ ಅರಿತು ಕೊಳ್ಳುವುದು ಒಳಿತು.

ಉತ್ಪಾದನೆಯ ಯಂತ್ರಗಳ ವಿಸ್ತಾರ: ಮೊದಲು ಸಮಾಜದ ವ್ಯವಸ್ಥೆ ಈಗಿನಷ್ಟು ಜಟಿಲವಾಗಿರಲಿಲ್ಲ. ಮನುಷ್ಯ ಆಗ ಪ್ರಕೃತಿಯ ಮಡಿಲಲ್ಲಿ ಆಟವಾಡುತ್ತಿದ್ದ. ಪ್ರಕೃತಿ ಮಾತೆ ಮನುಷ್ಯನಿಗೆ ಮೊಲೆ ಯೂಡಿಸುತ್ತಿದ್ದಳು. ಅದರಿಂದ ಸುಲಭವಾಗಿ ಎಷ್ಟು ತನಗೆ ಸಿಗುತ್ತಿತ್ತೋ ಅದರಲ್ಲಿಯೆ ಅವನು ತೃಪ್ತನಾಗಿದ್ದ, ಸಂತೋಷಗೊಂಡಿದ್ದ. ಆಮೇಲೆ ಶ್ರಮವನ್ನೂ ಕಾಲವನ್ನೂ ಉಪಯೋಗಿಸಿ ತನ್ನ ಸಾಧಾರಣ ಬುದ್ಧಿಯ ಮೂಲಕ ಅಲ್ಪ ಸ್ವಲ್ಪ ಉತ್ಪಾದನೆ ಮಾಡತೊಡಗಿದ. ಹೀಗೆ ಕೃಷಿ-ಗೋಪಾಲನೆ, ಕೈಗಾರಿಕೆಗಳ ಮೂಲಕ ತನ್ನ ಬಳಕೆಗೆ ಬೇಕಾದ ಸಾಮ ಗ್ರಿಯ ಚಕ್ರವನ್ನು ಹಿಗ್ಗಿಸಿ ದೊಡ್ಡದು ಮಾಡಿದ. ಪ್ರಕೃತಿಯ ಅನಂತ ಸಾಧನಗಳನ್ನು ಬಳಸಿಕೊಂಡರೆ ಬಾಳಿಗೆ ಹೆಚ್ಚು ಸುಖ - ಹಾಯಿ ಸಿಗು

ತ್ತದೆ ಎಂದು ಕ್ರಮೇಣ ಅವನಿಗೆ ತಿಳಿಯಿತು. ಸರಿ, ಅವನ ದಾಹ ಹೆಚ್ಚಾಯಿತು. ಸಂತೋಷ ಕೊನೆಗಂಡಿತು. ಆದಷ್ಟು ಹೆಚ್ಚು ಹೆಚ್ಚು ಉತ್ಪಾದನೆ ಮಾಡುವ ಚಿಂತೆ ಅಂಟಿಕೊಂಡಿತು. ಉತ್ಪಾದನೆ ಮಾಡಲು ಬಗೆ ಬಗೆಯ ಯಂತ್ರಗಳನ್ನು ಸೃಷ್ಟಿ ಮಾಡಿದ. ಯಂತ್ರಗಳು ಹುಟ್ಟಿದ ಮೇಲೆ ಅದು-ಇದು ಬೇರೆ ಬೇರೆ ನಾನಾ ವಸ್ತುಗಳು ಬೇಕೆಂಬ ಬಯಕೆ ಮನುಷ್ಯ ಸಮಾಜದಲ್ಲಿ ಉತ್ಕಟವಾಗಿ ಹೋಯಿತು. ಈ ಬಯಕೆಯನ್ನು ಹಿಂಗಿಸಲೆಂದು ಜನ ಯಂತ್ರಗಳ ಆಕಾರ ಪ್ರಕಾರಗಳನ್ನು ಮತ್ತಷ್ಟು ಹೆಚ್ಚು ಜಟಿಲವಾಗಿಯೂ ವಿಶಾಲವಾಗಿಯೂ ಮಾಡಿದರು. ಹಬೆ, ಮಿಂಚು—ಬಗೆಬಗೆಯ ಶಕ್ತಿಗಳನ್ನು ಬಳಸಿಕೊಳ್ಳುವ ವಿಧಾನಗಳು ಹುಟ್ಟಿದವು. ಉತ್ಪಾದನೆಯ ರೀತಿಯಲ್ಲಿ ಕ್ರಾಂತಿಮಯ ಪರಿವರ್ತನೆಗಳು ಆದವು. ಒಂದು ಪರಿವರ್ತನ ಇನ್ನೊಂದಕ್ಕೆ, ಹೀಗೆ ಹೊಸ ಹೊಸ ಪರಿವರ್ತನೆಗಳಿಗೆ ಜನ್ಮ ಕೊಟ್ಟವು. ದಿನದಿನಕ್ಕೆ ಯಂತ್ರಗಳು ವಿಶಾಲ ತರವಾಗಿ ಬೆಳೆದವು.

ಮಹಾಪುರುಷರ ಬರವು : ಸಮಾಜದ ವ್ಯವಸ್ಥೆಗೆ ಉತ್ಪಾದನದ ರೀತಿಯೆ ಆಧಾರ. ಉತ್ಪಾದನದ ರೀತಿಗೆ ರೂಪು ಕೊಡುವುದು ಉತ್ಪಾದನ-ಸಾಧನಗಳ, ಉಪಕರಣ ಸಲಕರಣೆಗಳ ಸ್ವರೂಪ. ಅಂತೇ ಯಂತ್ರಗಳ ಜಟಿಲತೆ ವಿಶಾಲತೆಗಳ ದೆಸೆಯಿಂದ ಉತ್ಪಾದನದ ರೀತಿಯೂ ಜಟಿಲ ವಾಯಿತು, ಕೇಂದ್ರಿತವಾಯಿತು. ಕೇಂದ್ರಿತ ವ್ಯವಸ್ಥೆಯ ಸಮಾಜದ ಸಮಸ್ಯೆಗಳೂ ಬರುಬರುತ್ತ ಜಟಿಲವಾಗತೊಡಗಿದವು. ಒಂದು ಸಮಸ್ಯೆಯ ಹೊಟ್ಟೆಯಲ್ಲೇ ಮತ್ತೊಂದು ಹುಟ್ಟಲು ಮೊದಲಾಯಿತು. ಆ ಸಮಸ್ಯೆಗಳನ್ನು ಬಿಡಿಸಲು ಹೋಗಿ ಮನುಷ್ಯ ಮತ್ತಷ್ಟು ತೊಡಕು ಮಾಡಿಕೊಂಡ. ಈ ಸಮಸ್ಯೆಗಳನ್ನು ಬಿಡಿಸಲು ಒಂದೊಂದು ಯುಗದಲ್ಲಿ ಒಬ್ಬೊಬ್ಬ ಮಹಾಪುರುಷ ಹುಟ್ಟಿ ಬಂದಿದಾನೆ. ಕಾಲ-ಪರಿಸ್ಥಿತಿಗಳಿಗೆ ಅನುಸಾರವಾಗಿ ಆ ಮಹಾಪುರುಷರು ಒಂದೊಂದು ದಾರಿ ಕಂಡು ಹಿಡಿಪರು. ಈ ಯುಗದ ಸಮಸ್ಯೆಗಳ ಫಲವೇ ಗಾಂಧೀ—ಮಾರ್ಕ್ಸ್ ಇಬ್ಬರೂ.

ವಸ್ತುಸ್ಥಿತಿಯನ್ನರಿಯಬೇಕು : ಹಿಂದಿನ ಅಧ್ಯಾಯದಲ್ಲಿ, ಸಾಮಂತ ವಾದದ ತರುವಾಯ ಬಂಡವಾಳವಾದ, ಅದರ ತರುವಾಯ ಸಮಷ್ಟಿವಾದ

ಹುಟ್ಟಿದವು ಎಂದು ಹೇಳಿತು. ಆದರೆ ಇದೆಲ್ಲವೂ ಮುಖ್ಯವಾಗಿ ರಾಜಕೀಯ ಉದ್ದೇಶ್ಯದಿಂದಲೇ. ಈ ರಾಜಕೀಯ ಪ್ರಯೋಗಗಳಲ್ಲಿ ಆರ್ಥಿಕ-ಸಾಮಾಜಿಕ ತಿರುಗುಮುರುಗಿನ ಬೀಜ ಅಡಗಿಯೆ ಇತ್ತು. ಏಕೆಂದರೆ, ಸಮಾಜದ ಪ್ರತಿಯೊಂದು ಕ್ಷೇತ್ರವೂ ಆರ್ಥಿಕ ಸೂತ್ರಕ್ಕೆ ಹೆಣೆದುಕೊಂಡಿದೆ. ಇರಲಿ, ಈ ಭಯಂಕರ ಗಿರಣಿಗಾರಿಕೆಯಿಂದ ಮಾನವ ಸಮಾಜ ತನ್ನ ಗುರಿಯ ಕಡೆ ಹೆಜ್ಜೆ ಹಾಕಲು ಸಾಧ್ಯವಾಗಿದೆಯೆ? ಹಾಗೆ ಸಮಾಜ ತನ್ನ ಗುರಿಯ ಕಡೆ ನಡೆದಿದ್ದರೆ ಇವೊತ್ತು ಮನುಷ್ಯನೇಕೆ ಬಡತನ–ಅಭಾವಗಳಿಗೆ ತುತ್ತಾಗಬೇಕು? ಸಮೃದ್ಧನಾಗಿರಬೇಕಾಗಿತ್ತು. ವಸ್ತು ಸ್ಥಿತಿಯೇನೋ ಗಂಭೀರವಾಗಿ ನೋಡೋಣ.

೨

ಕೇಂದ್ರಿತ ಉದ್ಯೋಗದಿಂದ ವ್ಯರ್ಥ ಸಾಮಾಗ್ರಿಯ ಸೃಷ್ಟಿ : ಮೊಟ್ಟ ಮೊದಲು ಕೇಂದ್ರೀಯ ಉದ್ಯೋಗಗಳ ಗುಣ-ರೂಪನ್ನು ಅರಿತುಕೊಳ್ಳೋಣ. ಮನುಷ್ಯನ ಮೂಲಭೂತ ಆವಶ್ಯಕತೆಗಳನ್ನು ನೋಡಿದರೆ ಅವನ ಸುಖ ಸಂಪತ್ತಿಯ ಮಾತು ಅರ್ಥವಾಗುತ್ತದೆ. ಮೋಟಾರು, ಸಾಬೂನು ಮುಂತಾಧ ಪದಾರ್ಥಗಳು ಎಷ್ಟೇ ಹರಡಿದ್ದರೂ ಅನ್ನ ಬಟ್ಟೆ ವಸತಿಗಳಿಗೆ ಲೋಪವಾದರೆ, ಮನುಷ್ಯನ ಶಾರೀರಕ ಮಾನಸಿಕ ಸ್ವಾಸ್ಯದ ಸೌಕರ್ಯಗಳಿಲ್ಲದಿದ್ದರೆ, ಉಳಿದುದೆಲ್ಲಾ ಎಷ್ಟೇ ಇದ್ದರೂ ಅದರಿಂದ ಲಾಭಕ್ಕಿಂತ ಹಾನಿಯೆ ಹೆಚ್ಚು. ಸಮಸ್ತ ಪದಾರ್ಥಗಳಿಗೂ ತಲಕಾವೇರಿ ಭೂಮಿ. ಭೂಮಿಯಲ್ಲಿ ಹುಟ್ಟುವ ಬೆಳೆಯಿಂದಲೇ ನಮ್ಮ ಉಪಭೋಗದ ಸಾಮಗ್ರಿಯೆಲ್ಲ ಉತ್ಪತ್ತಿಯಾಗುವುದು. ಕೇಂದ್ರೀಯ ಗಿರಣಿಗಾರಿಕೆ ಮೊದಲಾದೊಡನೆ ಉಪಭೋಗಕ್ಕೆ ಅಗತ್ಯವಲ್ಲದ ಅನೇಕ ಪದಾರ್ಥ ಆಗತ್ಯವಾದವು. ವಿಶಾಲವಾದ ಭೂಭಾಗದಲ್ಲಿ ಬೆಳೆದ ಕಚ್ಚಾ ಪದಾರ್ಥವನ್ನು ಒಂದು ಕೇಂದ್ರಕ್ಕೆ ತಂದು ಅಲ್ಲಿ ಅದನ್ನು ಒಂದು ಪೂರ್ಣ ವಸ್ತುವಾಗಿ ಮಾಡಿ ಅದನ್ನು ಮತ್ತೆ ಅಲ್ಲಿಂದ ಜನರಿಗೆ ಒಯ್ದು ಮುಟ್ಟಿಸುವ ಪದ್ಧತಿಯಿಂದ ಅದೇ ಒಂದು ವ್ಯವಸ್ಥೆಯಾಗಬೇಕಾಯಿತು. ಮೇಲಿಂದ ಮೇಲೆ

ಒಂದೆಡೆಯಿಂದ ಇನ್ನೊಂದೆಡೆಗೆ ಪದಾರ್ಥಗಳನ್ನು ಕಳಿಸಲೂ ತರಿಸಲೂ ಆಮದು ರಫ್ತಿನ ಬೃಹತ್-ಸಂಘಟನೆಯೇ ಒಂದು ಬೇಕಾಯಿತು. ಅದಕ್ಕೂ ನಾನಾ ವಸ್ತುಗಳು ಅಗತ್ಯ. ಆಮೇಲೆ ಉದ್ಯೋಗವನ್ನು ಬೆಳೆಸಿ ಆ ಸಾಮಗ್ರಿಯನ್ನು ಮಾರಿಕೊಳ್ಳಲು ಉದ್ಯೋಗವಾದಿಗಳನ್ನು ಹಿಡಿದು, ಅವರ ಮೂಲಕ ಜೀವನದ ಮಟ್ಟ ಹೆಚ್ಚಬೇಕು ಎಂಬ ಪ್ರಚಾರವನ್ನು ಲೋಕದಲ್ಲೆಲ್ಲ ಮಾಡಿಸಿದರು. ಅದರ ಪರಿಣಾಮವಾಗಿ ಮನುಷ್ಯನ ಇಂದ್ರಿಯ ವಾಸನೆಯನ್ನು ತೃಪ್ತಿಗೊಳಿಸುವ ಸಾಮಗ್ರಿಗಳ ಬೇಡಿಕೆ ಬಹಳ ಬೆಳೆದಿದೆ. ನಿಜವಾಗಿ ಆ ಸಾಮಗ್ರಿ ಯಾವುದೂ ಬಾಳಿಗೆ ಅಗತ್ಯವಲ್ಲ. ಈ ಉದ್ಯೋಗವಾದಿಗಳ ಪ್ರಚಾರದಿಂದ ಮಾತ್ರವೇ ಅಲ್ಲ. ಗಿರಣಿಗಾರಿಕೆಯ ಔದ್ಯೋಗಿಕ ಕೇಂದ್ರೀಕರಣದ ಅನೈಸರ್ಗಿಕ ಸ್ಥಿತಿಯ ದೆಸೆಯಿಂದಲೂ ಶೃಂಗಾರ–ವಿಲಾಸಗಳಿಗಾಗಿ ನಿಷ್ಪ್ರಯೋಜಕ ಪದಾರ್ಥಗಳ ಅಗತ್ಯ ಹೆಚ್ಚುತ್ತಿದೆ. ಗಿರಣಿಗಾರಿಕೆಯ ಕೇಂದ್ರಗಳ ಜನಸಂದಣಿ, ಅನಾರೋಗ್ಯಕರ ವಾತಾವರಣಗಳಲ್ಲಿ ದಿನದ ದುಡಿತದ ಕೆಟ್ಟ ಪರಿಣಾಮವನ್ನು ತಪ್ಪಿಸಲು ಶುದ್ಧ, ನಿರ್ಮಲ ವಾಯುಪೂರ್ಣ, ಸುಂದರ ನೈಸರ್ಗಿಕ ವಾತಾವರಣ ಅತ್ಯಾವಶ್ಯಕ. ದೊಡ್ಡ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅದು ಸಾಧ್ಯವಲ್ಲ. ಆದ್ದರಿಂದ ಜನರಿಗೆ ವಿಶ್ರಾಂತಿಯ ಕೃತ್ರಿಮ ಸಾಧನಗಳು ಬೇಕಾಗುತ್ತವೆ. ಅದಕ್ಕಾಗಿ ನಾನಾ ಬಗೆಯ ನಿಷ್ಪ್ರಯೋಜಕ ಪದಾರ್ಥಗಳನ್ನು ಉತ್ಪತ್ತಿ ಮಾಡಬೇಕಾಗುತ್ತದೆ. ಕತ್ತಲು ಕೋಣೆಯಲ್ಲಿ ದಿನವೆಲ್ಲ ದುಡಿದು ದಣಿದ ಮನಸ್ಸಿಗೆ ಅದನ್ನು ಮರೆಯಿಸಬೇಕಲ್ಲ!

ಸಮಾಜದ ದಿವಾಳಿ: ಈ ಸಂದರ್ಭದಲ್ಲಿ ಒಂದು ಮಾತನ್ನು ನೆನಪಿಡಬೇಕು. ಗಿರಣಿಗಾರಿಕೆಯಿಂದ ಉತ್ಪಾದನೆ ಹೆಚ್ಚೀತು, ಉತ್ಪಾದನೆಯ ವೇಗವೂ ಹೆಚ್ಚೀತು. ಪರಿಣಾಮದಲ್ಲಿ ವಿಶೇಷ ವ್ಯತ್ಯಾಸವೇನೂ ಇಲ್ಲ. ಒಂದು ಪಲ್ಲಾ ಭತ್ತವನ್ನು ಒನಕೆಯಿಂದ ಕುಟ್ಟಿದರೂ ಅಷ್ಟೆ, ಗಿರಣಿಗೆ ಹಾಕಿದರೂ ಅಷ್ಟೇ ಅಕ್ಕಿ. ಹೆಚ್ಚಾಗುವುದಿಲ್ಲ. ಗಿರಣಿಗಳಿಂದ ಉತ್ಪತ್ತಿ ಹೆಚ್ಚುತ್ತದೆ ಎಂದು ಜನ ತಪ್ಪು ತಿಳಿದಿದಾರೆ. ಅದಕ್ಕೆ ತಿರುಗುಮುರುಗಾಗಿ ಗಿರಣಿಗಾರಿಕೆಯಿಂದ ಕೆಲಸಕ್ಕೆ ಬಾರದ ಪದಾರ್ಥಗಳ ಬೇಡಿಕೆ ಹೆಚ್ಚುತ್ತದೆ. ಎಲ್ಲಿ ಸುತ್ತಾಡಿದರೂ ಈ ಪದಾರ್ಥಗಳಿಗಾಗಿ ಭೂಮಿಯ

ಮೇಲೆ ತಾನೆ ಭಾರ ಬೀಳಬೇಕು? ಈ ಒತ್ತಡದಿಂದ ಜನರು ತಮಗೆ ಜೀವನಕ್ಕೆ ಅಗತ್ಯವಾದವನ್ನೆ ಬಿಟ್ಟು, ಗಿರಣಿಗಳ ಲೆಕ್ಕಾಚಾರದಲ್ಲಿ ಯಾವುದಕ್ಕೆ ಹೆಚ್ಚು ಹಣ ಸಿಗುತ್ತದೆಯೋ ಅಂಥ ದುಡ್ಡಿನ ಬೆಳೆಗಳನ್ನು - Money Crops - ಬೆಳೆಯ ತೊಡಗುತ್ತಾರೆ. ಹೀಗಾಗಿ ಸೊಗಸಾದ ಭತ್ತ ಜೋಳ ಮುಂತಾದವನ್ನು ಬೆಳೆವ ಭೂಮಿ ಕಬ್ಬು, ಸೆಣಬುಗಳ ಸುಳಿಯಲ್ಲಿ ಮುಳುಗಿ ಹೋಗುತ್ತದೆ, ತೆಂಗಿನ ತೋಟಗಳಲ್ಲಿ ಅಳಿದು ಹೋಗುತ್ತದೆ. ಬಂಗಾಳಕ್ಕೆ ಬಡಿದುಕೊಂಡಂಥ ಭೀಷಣ ಬರ ಬಡಿದು ಕೋಟಿ ಕೋಟಿ ಜನರನ್ನು ನುಂಗುವಾಗ ನಮ್ಮಲ್ಲೇನಿದೆ? ಅನ್ನವಲ್ಲ, ಸೆಣಬಿನ ಬರೀ ಚೀಲಗಳ ರಾಶಿ, ಹಮಾಮ್ ಸಾಬೂನಿನ ಡಬ್ಬಿಗಳು. ನಮ್ಮ ಸಮಾಜದ ದಿವಾಳಿಗೆ ಇದಕ್ಕಿಂತ ಕೀಳಾದ ರೂಪ ಮತ್ತೊಂದು ಬೇಕೆ?

ಭಯಂಕರ ಆರ್ಥಿಕ ಉಪಹಾಸ: ಬಂಗಾಳದಲ್ಲಿ ಭತ್ತ ಬೆಳೆವ ಗದ್ದೆ ರೇಶಿಮೆಯ ಹೊಲವಾಯಿತು. ಉತ್ತರ ಪ್ರದೇಶದಲ್ಲಿ ಗೋಧಿ ಬೆಳೆವ ಬಂಗಾರದಂಥ ನೆಲ ಕಬ್ಬಿಗೆ ಬಲಿಯಾಯಿತು. ಕೇರಳದಲ್ಲಿ ತಮಿಳು ನಾಡಿನಲ್ಲಿ ಭತ್ತದ ಗದ್ದೆ ತೆಂಗಿನ ಕಾಡು ಆಗಿದೆ. ಏಕೆ ಗೊತ್ತೆ? ಅದರಿಂದ ಹೆಚ್ಚಾಗಿ ವ್ಯಾಪಾರದ ಪದಾರ್ಥ - ಮಿಠಾಯಿ, ಸಾಬೂನು - ಉತ್ಪತ್ತಿಯಾಗಲಿ ಎಂದು. ಇದರಿಂದ ದೇಶದಲ್ಲಿ ಇಂಥ ಚಿಲ್ಲರೆ ಸಾಮಗ್ರಿ ಹೆಚ್ಚಾಯಿತು, ಹೊಟ್ಟೆಗೆ ಬೇಕಾದ ಅನ್ನಕ್ಕೇ ಅಭಾವವಾಯಿತು. ದಿಲ್ಲಿಯ ಬೀದಿಗಳಲ್ಲಿ ಇವೊತ್ತು ಒಂದಾಣೆಗೆ ಒಂದು ಬೇಕಾದಷ್ಟು ಬಾಚಣಿಗೆ ಸಿಗುತ್ತವೆ. ರೂಪಾಯಿಗೆ ಒಂದು ಸೇರು ಅಕ್ಕಿ ಸಿಗುವುದು ಕಷ್ಟ. ಇದೆಂಥ ಪರಿಸ್ಥಿತಿ? ಇದೇನು ಭಯಂಕರ ಆರ್ಥಿಕ ಉಪಹಾಸ?

ಅತ್ಯಂತ ಶೋಚನೀಯ ಸ್ಥಿತಿ: ಕಳೆದ ಇನ್ನೂರು ವರ್ಷಗಳಿಂದ ಪದಾರ್ಥಗಳೇನೋ ಹೆಚ್ಚಾದ ಹಾಗೇ ಇದೆ, ಮನುಷ್ಯ ಸದಾ ಏನೋ ಮಾಡುತ್ತಲೇ ಇದ್ದಾನೆ. ಆದರೆ ಈ ಬಿಸಿಲುಗುದುರೆ ಕೈಗೆ ಸಿಕ್ಕಿಲ್ಲ. ಅದರ ಬದಲು ಸಮಾಜದಲ್ಲಿ ಅನೇಕ ಜಟಿಲ ಸಮಸ್ಯೆ ಹುಟ್ಟಿ ಗಡ್ಡೆಗಟ್ಟಿ ಜಗತ್ ಯುದ್ಧಗಳಾಗುತ್ತಿವೆ. ಲೋಕ ಮಹಾಪ್ರಳಯದ ಮಡುವಿನಲ್ಲಿ ಮುಳುಗಿ ಸಾಯುವ ಸ್ಥಿತಿಗೆ ಬಂದಿದೆ. ನಿಸ್ಸಂದೇಹವಾಗಿ ಪರಿಸ್ಥಿತಿ ಶೋಚನೀಯವಾಗಿದೆ.

ಕೇಂದ್ರೀಕರಣ : ಯುದ್ಧ . ಸಂಘರ್ಷಣೆಗಳ ಬೇರು : ಹಿಂದಿನ ಕಾಲದಲ್ಲಿಯೂ ಯುದ್ಧಗಳಾಗುತ್ತಿದ್ದವು. ಅವುಗಳ ಗುರಿ ದೊರೆತನ. ಅಲ್ಲಿಗೇ ಅವು ಮುಕ್ತಾಯ. ಗೆದ್ದವನನ್ನು ಅರಸ ಎಂದರೆ ಅಲ್ಲಿಗೇ ಮುಕ್ತಾಯ. ಆದರೆ ಯುದ್ಧ ಜನತೆಯ ಆರ್ಥಿಕ - ಸಾಮಾಜಿಕ ಜೀವನವನ್ನು ವ್ಯಾಪಿಸಿದಾಗ, ಯುದ್ಧ ಎಂದರೆ ಸಹಜವಾಗಿಯೆ ಜನಜೀವನದಲ್ಲಿ ಅಲ್ಲಕಲ್ಲೋಲವಾಗತೊಡಗಿತು. ಕೇಂದ್ರೀಯ ವ್ಯವಸ್ಥೆಯಲ್ಲಿ ಜನಜೀವನದ ಆರ್ಥಿಕ - ಸ್ವಾವಲಂಬನ ಲೋಪವಾಗುತ್ತದೆ. ಆದ್ದರಿಂದ ಈ ಪರಿಸ್ಥಿತಿ ಆ ವ್ಯವಸ್ಥೆಯ ಹೊಟ್ಟೆಯಲ್ಲಿಯೆ ಅಡಗಿದೆ. ಸಾಂಪತ್ತಿಕ ವಿಕೇಂದ್ರೀಕರಣವಾದರೆ ರಕ್ಷಣೆಯೂ ಬೇಕಾಗಿಲ್ಲ, ಯುದ್ಧಗಳ ಗೊಂದಲವೂ ಇಲ್ಲ. ದೇಶಾದ್ಯಂತ ಹರಡಿದ ಸಂಪತ್ತನ್ನು ಕೂಡಹಾಕಿ ಕೇಂದ್ರದಲ್ಲಿ ರಾಶಿಮಾಡಿದರೆ ಸ್ವಾಭಾವಿಕವಾಗಿಯೆ ಇತರರ ಕಣ್ಣು ಆ ರಾಶಿಯ ಮೇಲೆ ಬೀಳುತ್ತದೆ. ಸಂಪತ್ತು ಕೇಂದ್ರೀಕೃತವಾದಷ್ಟೂ ಆದರ ಮೇಲೆ ಇತರರು ಧಾಳಿಮಾಡುವ ಸಂಭವ ಹೆಚ್ಚುತ್ತದೆ. ಅದರ ರಕ್ಷಣೆಯ ಸಮಸ್ಯೆ ಬೆಳೆಯುತ್ತದೆ. ರಕ್ಷಣೆಯ ಈ ಸಮಸ್ಯೆ ಜಟಿಲವಾದ ಹಾಗೆಲ್ಲ ಸೈನ್ಯ ಅನಿವಾರ್ಯವಾಗಿ ಬೇಕಾಗುತ್ತದೆ, ಶಸ್ತ್ರಗಳನ್ನು ಹೆಚ್ಚಿಸಬೇಕಾಗುತ್ತದೆ. ಈ ಕೇಂದ್ರಿತ ಸಂಪತ್ತಿನ ರಕ್ಷಣೆಗಾಗಿಯೇ ಯುದ್ಧ ನಡೆಯುತ್ತವೆ ಎಂದಲ್ಲ. ಕೇಂದ್ರೀಯ ಗಿರಣಿಗಾರಿಕೆಯಿಂದ ಕಚ್ಚಾ ಮಾಲಿಗಾಗಿ ಪರದಾಟ ಪ್ರಾರಂಭ. ಆಮೇಲೆ ಆದರ ಕೇಂದ್ರೀಕರಣ. ಇವುಗಳಿಂದಲೂ ಯುದ್ಧದ ಸಮಸ್ಯೆ ಹುಟ್ಟುತ್ತದೆ. ಯುದ್ಧದ ಭಾವನೆ, ಯುದ್ಧದ ಕಾರಣ ಕೂಡ ಇಲ್ಲೇ ಹುಟ್ಟುತ್ತವೆ. ಕೇಂದ್ರೀಯ ಗಿರಣಿಗಾರಿಕೆಯಿಂದ ಎಲ್ಲಾ ಕಡೆಯಲ್ಲೂ ಎಲ್ಲಾ ಪದಾರ್ಥ (ಬೇರೆ ಬೇರೆ ಪದಾರ್ಥ) ಉತ್ಪತ್ತಿಯಾಗುವುದು ತಪ್ಪಿ ಒಂದೊಂದು ವಿಶೇಷ ಕ್ಷೇತ್ರದಲ್ಲಿ ಒಂದೊಂದೇ ವಿಶಿಷ್ಟ ಸಾಮಗ್ರಿ ಉತ್ಪನ್ನವಾಗಲು ಪ್ರಾರಂಭವಾಗುತ್ತದೆ. ಆಗ ಅದಕ್ಕೆ ಗಿರಾಕಿ ಹುಡುಕ ಬೇಕು. ಗಿರಾಕಿ ಹುಡುಕುವುದರಲ್ಲಿಯೂ ಯುದ್ಧ ಹುಟ್ಟುತ್ತದೆ.

ಮೇಲೆ ಹೇಳಿದ ಕಾರಣಗಳಿಂದ ಲೋಕದಲ್ಲಿ ಸೈನ್ಯ ಸಂಘಟನೆ, ಶಸ್ತ್ರೀಕರಣದ ವೃದ್ಧಿಗಳಿಗಾಗಿಯೂ ಸ್ವಲ್ಪ ದುಡಿಯುಬೇಕು. ಏನೇ

ಮಾಡಿದರೂ ಮೀರಲಾರದ ಸೃಷ್ಟಿ ನಿಯಮವೊಂದಿದೆ: ಪ್ರತಿಯೊಂದಕ್ಕೂ ಒಂದು ಸ್ವಭಾವ ಒಂದು ಸ್ವಧರ್ಮ ಇದೆ. ಈ ಸ್ವಭಾವ ಸ್ವಧರ್ಮಗಳಿಗೆ ಅನುಸಾರವಾಗಿ, ಅನುರೂಪವಾಗಿಯೆ ಮನುಷ್ಯನೂ ಕರ್ಮ ಮಾಡುತ್ತಾನೆ. ಯುದ್ಧ, ಸೇನೆಯದು ಶಸ್ತ್ರದ್ದು ಸ್ವಾಭಾವಿಕ ಕರ್ಮ. ಆದ್ದರಿಂದ ಇವೆರಡರ ಸಂಘಟನೆ ಹೆಚ್ಚಿದಾಗ ಅದು ಏನಾದರೂ ನೆಪಹುಡುಕಿ ಯುದ್ಧವನ್ನು ಮೊದಲಿಡುತ್ತದೆ. ತೋಳದ ಸ್ವಭಾವ ಕುರಿಯನ್ನು ತಿನ್ನುವುದು. ಆದ್ದರಿಂದ ಕುರಿಮರಿಯನ್ನು ತಿನ್ನಲು ಸರಿಯಾದ ಕಾರಣವನ್ನೂ ಒಂದನ್ನು ಹುಡುಕಿತ್ತು ತೋಳ. ಅದೇ ರೀತಿ ಸೈನ್ಯ ಸಂಘಟನೆಗೆ ಯುದ್ಧಮಾಡುವ ಸಮಯ ಬಂದಾಗ ಬೇರೇನೂ ಕಾರಣ ಸಿಗದಿದ್ದರೆ 'ಯುದ್ಧವನ್ನು ಕೊನೆಗಾಣಿಸುವ ನಿಮಿತ್ತ'ವಾದರೂ ಯುದ್ಧ ಹೂಡುತ್ತದೆ. ಒಮ್ಮೆ ಯುದ್ಧ ಪ್ರಾರಂಭವಾಗಿಬಿಟ್ಟರೆ ಅದನ್ನು ನಡಸುತ್ತಿರಲು ಕೇಂದ್ರೀಯ ಗಿರಣಿಗಾರಿಕೆಯನ್ನು ಹೆಚ್ಚಿಸಬೇಕಾಗುತ್ತದೆ. ಅಂತೂ ಇದರಿಂದ ಲೋಕದಲ್ಲಿ ಒಂದು ಜಟಿಲ ಪರಿಸ್ಥಿತಿ ಏರ್ಪಡುತ್ತದೆ. ಆ ಮುಲಕು ಹೇಗೆ: ಗಿರಣಿಗಾರಿಕೆಯಿಂದ ಸಂಪತ್ತು ಕೇಂದ್ರಿತವಾಗುತ್ತದೆ; ಆದರಿಂದ ಗಿರಣಿಗಾರಿಕೆ ಬೆಳೆಯುತ್ತದೆ. ಆಗ ಅದನ್ನು ರಕ್ಷಿಸಲು ಸೈನ್ಯ ಕಟ್ಟಬೇಕು; ಸೈನ್ಯ ಬೆಳೆಸಿದರೆ ಯುದ್ಧ ಖಂಡಿತ; ಯುದ್ಧವಾದರೆ ಗಿರಣಿಗಾರಿಕೆ ಇನ್ನೂ ಬೆಳೆಯುತ್ತದೆ.

ಗಿರಣಿಗಾರಿಕೆ - ಯುದ್ಧದ ಮುಲಕು: ಹೀಗೆ ಸದಾ ಕಾಲವೂ ಯುದ್ಧ ಆವಶ್ಯಕವಾಗಿ ಬಿಡುತ್ತದೆ ಲೋಕದಲ್ಲಿ. ಆದರಿಂದ ಭೂಭಾರ ಹೆಚ್ಚುತ್ತದೆ. ಯುದ್ಧಗಳಿಗಾಗಿ ಯುದ್ಧ ಸಾಮಗ್ರಿಯನ್ನು ಉತ್ಪತ್ತಿ ಮಾಡಬೇಕಲ್ಲ. ತಿನ್ನುವ ಪದಾರ್ಥಗಳ ಬದಲು ಅವನ್ನು ಸೃಷ್ಟಿಸಬೇಕು. ಭೂಮಿಯಷ್ಟೇ ಈ ವಿಷಚಕ್ರಕ್ಕೆ ಬಲಿಯಾಗುವುದಿಲ್ಲ. ಉತ್ಪತ್ತಿ ಮಾಡಿದ ತಿನ್ನುವ ಪದಾರ್ಥಗಳನ್ನೂ ಕೂಡ ಯುದ್ಧ ಸಾಮಗ್ರಿಗಳನ್ನು ಮಾಡಲು ಬಳಸುತ್ತಾರೆ. ಇದಲ್ಲದೆ ಯುದ್ಧವನ್ನು ಯಶಸ್ವಿಯಾಗಿ ನಡೆಸಲು ಗಿರಣಿಗಾರಿಕೆಯನ್ನು ಹೆಚ್ಚಿಸಬೇಕಾಗುತ್ತದೆ. ಹೀಗೆ ಜಗತ್ತಿನಲ್ಲಿ ಈಗ ಒಂದು ಭಯಂಕರ ವಿಷಚಕ್ರ ಮೊದಲಾಗಿದೆ: ಗಿರಣಿಗಾರಿಕೆಯ ವಿಸ್ತಾರ; ವಿಸ್ತಾರಗೊಂಡ ಗಿರಣಿಗಾರಿಕೆಯ ರಕ್ಷಣೆಗಾಗಿ ಯುದ್ಧ; ಯುದ್ಧದ ನಿರ್ವಹಣ

ಕ್ಕಾಗಿ ಗಿರಣಿಗಾರಿಕೆಯ ವಿಸ್ತಾರ. ಈ ಸುಳಿಗೆ ಸಿಕ್ಕ ಜನತೆಗೆ ಬೇರೇನೂ ತೋಚದು; ಏನು ಯೋಚಿಸಲೂ ಬಿಡುವಿಲ್ಲ. ಇದರ ಫಲವಾಗಿ ಜಗತ್ತಿನ ಶಕ್ತಿಯೆಲ್ಲವೂ (ಶಾರೀರಕ, ಮಾನಸಿಕ) ಈ ಸುಳಿಗೆ ಸಿಕ್ಕಿಕೊಂಡು, ಜೀವನದ ಆವಶ್ಯಕತೆಗಳ ಅಭಾವದಿಂದ ಮೂಕ ಜನತೆ ತ್ರಾಹಿ ತ್ರಾಹಿ ಎನ್ನುತ್ತದೆ. ಗಿರಣಿಗಾರಿಕೆಯ ದೇಶಗಳ ಭೂಮಿ ಶಕ್ತಿ ಮೀರಿ ಕಚ್ಚಾ ವಸ್ತುಗಳನ್ನು ಬೆಳೆದಮೇಲೆ ಆ ದೇಶಗಳ ದೃಷ್ಟಿ ಇತರ ದೇಶಗಳ ಮೇಲೆ ಬೀಳುತ್ತದೆ. ಈ ದೇಶಗಳನ್ನು ಸ್ವಾಧೀನಪಡಿಸಿಕೊಳ್ಳದಿದ್ದರೆ ಗಿರಣಿಗಾರ ದೇಶದ ಉದ್ದೇಶ್ಯ ಸಫಲವಾಗದು. ಸರಿ, ಯುದ್ಧ. ಯುದ್ಧವೊಂದೇ ಅಲ್ಲ; ಗಿರಣಿಗಾರಿಕೆ ಹರಡಿದರೆ ಜಗತ್ತಿನಲ್ಲಿ ನಾನಾ ಬಗೆಯ ದುರ್ನೀತಿ ಬೆಳೆಯುತ್ತದೆ. ಮ್ಯಾಂಚೆಸ್ಟರಿನ ಒಟ್ಟೆಯ ಗಿರಣಿಗಳಿಗೆ ಹತ್ತಿಯನ್ನೊದಗಿಸಲು ಅಮೆರಿಕಾದ ರೈತರು ಗುಲಾಮರ ವ್ಯಾಪಾರವನ್ನು ಮೊದಲಿಟ್ಟರು. ಗಿರಣಿ-ಕಾರಖಾನೆಗಳಲ್ಲಿ ಕೂಲಿಗಾರರ ಮೇಲೆ ಎಷ್ಟು ಅತ್ಯಾಚಾರ್ಯ ನಡೆಯಿತೋ ಇತಿಹಾಸ ಹೇಳಿದೆ. ಇಂದಿಗೂ ಇಷ್ಟೆಲ್ಲ ಶ್ರಮಿಕ ಸಂಘಟನೆ-ಚಳುವಳಿ ನಡೆದರೂ ಈ ವಿಷಯದಲ್ಲಿ ನೈತಿಕ ಪ್ರಗತಿಯಾದಂತೆ ಕಾಣಬಾರದು. ಸ್ವತಂತ್ರ ಕೂಲಿಗಾರನಿಗಿಂತ ಗುಲಾಮ-ಕೆಲಸಗಾರ ತುಟ್ಟಿಯೆನಿಸಿದಾಗ ಗುಲಾಮಗಿರಿಯ ಪದ್ಧತಿ ತನಗೆ ತಾನೇ ನಿಂತುಹೋಯಿತು. ಆದರೆ ಯಂತ್ರಗಳು ವಿಕಾಸಗೊಂಡಂತೆಲ್ಲ ನಿರುದ್ಯೋಗ ಹೆಚ್ಚಿತು; ಕೆಲಸಗಾರರ ಮೇಲೆ ಅತ್ಯಾಚಾರವೂ ಹೆಚ್ಚಿತು. ಇದರ ಕರುಣ ಕಥೆ ದಿನವೂ ಪತ್ರಿಕೆಗಳಲ್ಲಿ ಕಾಣಬರುತ್ತದೆ. ಕೆಲಸಗಾರರಿಗೂ ಧಣಿಗಳಿಗೂ ತಿಕ್ಕಾಟ ಹೆಚ್ಚುತ್ತಿದೆ. ದಿನೇ ದಿನೇ ಸಮಾಜದ ಸ್ಥಿತಿ ಹೆಚ್ಚು ಹೆಚ್ಚು ಅನಿಶ್ಚಿತವಾಗುತ್ತಲಿದೆ. ಆದರಿಂದ ಯುದ್ಧ ನಡೆಯಲಿ ಶಾಂತಿಯಿರಲಿ, ಲೋಕದಲ್ಲಿ ತಿಕ್ಕಾಟ ಕಡಮೆಯಾಯಿತು ಎನಿಸದು. ಇಡೀ ಸೃಷ್ಟಿಯೆ ಯುದ್ಧಮಯವಾಗುತ್ತಿದೆ. ಯುದ್ಧ ಕಾಲದಲ್ಲಂತೂ ಯುದ್ಧ ನಡೆದೇ ನಡೆಯುತ್ತದೆ. ಯುದ್ಧವಿಲ್ಲದಿದ್ದಾಗಲೂ ಸಂಘರ್ಷಣೆಯ ಒಳಯುದ್ಧ ನಡೆದೇ ಇರುತ್ತದೆ. ಆದರಿಂದಾಗಿ, ಸಮಾಜದ ನೀತಿಯ ಮಟ್ಟ ತಗ್ಗಿಹೋಗುತ್ತದೆ. ಬಹಳ ಕರುಣಾಜನಕ ಸ್ಥಿತಿ.

೩

ಸ್ವಾವಲಂಬನೆ - ಸಹಕಾರ : ಜನತೆ ಸ್ವಾವಲಂಬಿಯಾಗಿದ್ದಾಗ ತನ್ನ ದೈನಿಕ ಆವಶ್ಯಕತೆಗಳನ್ನು ತಾನೇ ಪೂರಯಿಸಿಕೊಳ್ಳುತ್ತಿತ್ತು. ತವಗೆ ಆಗತ್ಯವಾದುದನ್ನು ತಮ್ಮ ಕೈಯಾರೆ ದುಡಿದೇ ಮಾಡಿಕೊಳ್ಳಬೇಕಾಗಿ ಬಂದರೆ, ಪ್ರತಿಯೊಬ್ಬನೂ ತನ್ನ ಪಾಡಿಗೆ ತಾನು ಒಂಟಿಯಾಗಿ ತನಗೆ ಬೇಕಾದುದನ್ನೆಲ್ಲಾ ತಾನೇ ಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಸ್ವಾವಲಂಬಿ ಸಮಾಜವ್ಯವಸ್ಥೆಯಾಗಬೇಕಾದರೆ ಸಹಕಾರದಿಂದ, ಜೊತೆಗಾರಿಕೆಯಿಂದ ಸಾಮಾಜಿಕ ಉತ್ಪಾದನೆ ನಡೆಯಬೇಕಾದ್ದು ಆತ್ಯಗತ್ಯ. ನಿಜವಾಗಿ ನೋಡಿದರೆ, ಉತ್ಪಾದನೆಯ ರೀತಿಯಿಂದಲೇ, ಉತ್ಪಾದನೆಯ ಏರ್ಪಾಡಿನ ಫಲವಾಗಿಯೆ ಸಮಾಜದ ವ್ಯವಸ್ಥೆ ರೂಪುಗೊಳ್ಳುತ್ತದೆ. ಸ್ವಾವಲಂಬನದ ರೀತಿಯಲ್ಲಿ ನಮ್ಮ ಉತ್ಪಾದನೆ ನಡೆಯುತ್ತಿದ್ದಾಗ ಸಮಾಜದ ಕೆಲಸವೆಲ್ಲವೂ ಪಾಲುಗಾರಿಕೆಯ ರೀತಿಯಲ್ಲಿ ನಡೆಯುತ್ತಿತ್ತು. ಪಾಲುಗಾರಿಕೆಯೆಂದರೆ ಸಮಾಜದ ಪ್ರತಿಯೊಬ್ಬ ಸದಸ್ಯನಿಗೂ ಪರಸ್ಪರ ನಂಬುಗೆ, ಪರಸ್ಪರ ಮಾನವೀಯತೆಯಿಂದ ನಡೆಮುಕೊಳ್ಳುವುದು. ಮನುಷ್ಯರು ಒಬ್ಬರೊಬ್ಬರಿಗೆ ಮೋಸ ಮಾಡದಿರುವವರೆಗೆ ಸಹಕಾರಿ - ಸಮಾಜ. ಜನರು ಪ್ರಾಮಾಣಿಕರಾಗಿದ್ದರೆ ಮಾತ್ರ ಅದು ಸಾಧ್ಯ. ಪಾಲುಗಾರಿಕೆಯಲ್ಲಿ ಅಪ್ರಾಮಾಣಿಕತೆ ಸಾಧ್ಯವಿಲ್ಲ. ಪಾಲುಗಾರಿಕೆಯಿಲ್ಲದ ಜನತೆ ಸ್ವಾವಲಂಬಿಯಾಗಲಾರದು. ಸ್ವಾವಲಂಬಿ ಸಮಾಜದಲ್ಲಿ ಜನತೆಯ ನೈತಿಕ ಮಟ್ಟ ಸ್ವಾಭಾವಿಕವಾಗಿಯೇ ಎತ್ತರದಲ್ಲಿರುತ್ತದೆ.

ಕೇಂದ್ರೀಯ ಸಮಾಜದಲ್ಲಿ ಪರಸ್ಪರ ಸಹಕಾರವಿಲ್ಲ : ಆರ್ಥಿಕ, ಸಾಮಾಜಿಕ ಕೇಂದ್ರೀಕರಣದಿಂದ ಸಮಾಜದಲ್ಲಿ ಆ ಸ್ಥಿತಿಯಿರುವುದಿಲ್ಲ. ಜನರ ಬಳಕೆಗೆ ಬೇಕಾದ ಪದಾರ್ಥಗಳಿಗೆ ಗಿರಣಿಗಾರಿಕೆಯ ಕೇಂದ್ರದಿಂದ, ಸಮಾಜದ ವ್ಯವಸ್ಥೆಗೆ ರಾಜಕೀಯ ಕೇಂದ್ರ ಉಗಮಸ್ಥಾನವಾಗುತ್ತದೆ. ಆ ಪರಿಸ್ಥಿತಿಯಲ್ಲಿ ಮನುಷ್ಯ ಒಂಟಿಯಾಗಿರಬಲ್ಲ, ನೆರೆಯವನ ಸಂಬಂಧ ಸ್ವಲ್ಪವೂ ಇಲ್ಲದಿರಬಲ್ಲ; ಹಾಗಿದ್ದೂ ತನಗೆ ಬೇಕಾದುದನ್ನು ಪೂರಯಿಸಿಕೊಳ್ಳಬಲ್ಲ. ಯಾರಿಗೂ ಯಾರ ವಿಶ್ವಾಸವೂ ಅಗತ್ಯವಿಲ್ಲ. ಜನರು

ಒಬ್ಬರೊಬ್ಬರ ಚಿಂತೆ ಮಾಡಬೇಕಾಗಿಲ್ಲ. ಪ್ರತಿಯೊಬ್ಬರಿಗೂ ತಮ್ಮ ತಮ್ಮ ಮಟ್ಟಿಗೆ ಕೇಂದ್ರೀಯ ಯಂತ್ರ-ತಂತ್ರದ್ದೇ ಭರವಸೆ, ಆಧಾರ. ಪರಿಸ್ಥಿತಿ ಹೀಗಾದರೆ ಪರಸ್ಪರ ಸಹಕಾರ, ಪಾಲುಗಾರಿಕೆ, ಮಾನವೀಯ ಸಂಬಂಧ ಎಲ್ಲವೂ ಕಡಿದುಹೋಗಬೇಕಾದುದು ಸಹಜವಲ್ಲವೆ? ಈಗ ಬದುಕು-ಬಾಳಿಗೆ ಮೊದಲಿನಷ್ಟು ಪರಸ್ಪರ ಸಂಬಂಧ ಆಗತ್ಯವೇ ಇಲ್ಲ ವಾಗಿದೆ. ಜನರ ಬಳಕೆಗೆ ಬೇಕಾದುದೆಲ್ಲ ಕೇಂದ್ರೀಯ ವ್ಯವಸ್ಥೆಯಲ್ಲಿ ಹಲವಾರು ಮಧ್ಯಸ್ಥಗಾರರ ತೊಡಕಿನ ಏರ್ಪಾಟಿನ ಮೂಲಕ ಸರಬರಾಜು ಆಗುತ್ತದೆ. ಹೀಗಾಗಿ ಪದಾರ್ಥಗಳನ್ನು ಹಂಚುವ, ಸರಬರಾಜು ಮಾಡುವ ಮೂಲಸ್ಥಾನಕ್ಕೂ ಪದಾರ್ಥಗಳನ್ನು ಪಡೆಯುವ ಜನಕ್ಕೂ ಏನೂ ಪ್ರತ್ಯಕ್ಷ ಸಂಬಂಧ ಉಳಿದಿಲ್ಲ. ಇದರಿಂದ ಸಮಾಜದಲ್ಲಿ ಎಲ್ಲರೂ ಬೇರೆಯವರು (ಪರರು) ಆದರು; ತನ್ನವರು ಯಾರೂ ಇಲ್ಲ. ಎಲ್ಲರೂ ಪರಕೀಯರಾದಾಗ ಮೋಸ ಲೂಟಿ ಶೋಷಣೆ ಮಾಡಲು ಸಂಕೋಚಕ್ಕೆ ಅವಕಾಶವೆಲ್ಲಿದೆ? ಯಾರ ದಾಕ್ಷಿಣ್ಯವೇನು? ಸಮಾಜದಲ್ಲಿ ಈಗ ಕಳ್ಳ ವ್ಯಾಪಾರ, ಮೋಸ, ಅಪ್ರಾಮಾಣಿಕತೆ, ಲಂಚಕೋರತನ ಮಿತಿಮೀರಿ ಬೆಳೆದು ಮನುಷ್ಯರಲ್ಲಿ ಪರಸ್ಪರ ಮಾನವ ಸಂಬಂಧವೇ ಕಾಣದಂತಾಗಿದೆ. ಮಾನವತೆಯೆಂದರೆ ಅರ್ಥವಿಲ್ಲದಾಗಿದೆ.

ಜನತೆಯ ನೀತಿಹ್ರಾಸ: ಸ್ವತಂತ್ರವಾಗಿ ಕೇವಲ ತನ್ನ ವಿವೇಕದ ಬಲದಿಂದಲೇ ಮನುಷ್ಯ ಸ್ವಭಾವದ ಪವಿತ್ರತೆಯನ್ನು ಕಾಪಾಡುವುದು ಎಲ್ಲರಿಗೂ ಸುಲಭವಲ್ಲ. ನೀತಿಯ ಆಧಾರದ ಮೇಲೆ ಬಾಳಿನಲ್ಲಿ ಸತ್ಯ ಅಹಿಂಸೆ ಪ್ರಾಮಾಣಿಕತೆ ಸಹಕಾರ ಮುಂತಾದ ಸತ್-ಪ್ರವೃತ್ತಿಗಳನ್ನು ದೃಢವಾಗಿ, ಸ್ಥಿರವಾಗಿ ಸ್ಥಾಪಿಸಬಲ್ಲವರು ಜಗತ್ತಿನಲ್ಲಿ ಬಹಳ ಸ್ವಲ್ಪ ಜನ. ಹೀಗಿರುವಾಗ ಈ ಗುಣಗಳನ್ನು, ಪ್ರವೃತ್ತಿಗಳನ್ನು ಸಮಷ್ಟಿ ಜನತೆಯಲ್ಲಿ ಸ್ಥಿರಗೊಳಿಸಬೇಕಾದರೆ, ಬರೀ ವೈಯಕ್ತಿಕ ಶಿಕ್ಷಣ ಸಾಲದು; ಅದಕ್ಕೆ ಅನುಕೂಲವಾದ ಸಮಾಜ ವ್ಯವಸ್ಥೆಯನ್ನು ಜೊತೆಯಲ್ಲಿಯೆ ಮಾಡಬೇಕು. ಸಮಾಜಕ್ಕೆ ಅನಿವಾರ್ಯವಾಗಿ ಬೇಕಾಗುವ ವಸ್ತುಗಳನ್ನು ಪರಿಸ್ಥಿತಿಗೆ ಅನುಸಾರವಾಗಿ ಪೂರಯಿಸಿ, ತನ್ಮೂಲಕ ಸಮಾಜದ ಮೂಲ ಸದ್-ವೃತ್ತಿಗಳನ್ನು ಜಾಗೃತಗೊಳಿಸಿಡದಿದ್ದರೆ ಬೇರೆ ಸೈತಾನೀ ವೃತ್ತಿಗಳು ತಲೆಯೆತ್ತಿ

ಸದ್ವೃತ್ತಿಗಳನ್ನು ಅದುಮಿಬಿಟ್ಟವು. ಮನುಷ್ಯನ ಒಳಗಡೆ ದೇವಾಸುರ ಸಂಗ್ರಾಮ ನಡೆದೇ ಇರುತ್ತದೆಯಲ್ಲ. ಆದ್ದರಿಂದಲೇ, ಜಗತ್ತಿನ ಆರ್ಥಿಕ-ಸಾಮಾಜಿಕ ವ್ಯವಸ್ಥೆ ಪಾರಸ್ಪರ್ಯದ ಸೂತ್ರವನ್ನು ತೊರೆದು ಸ್ವತಂತ್ರವಾಗಿ ನೇರವಾಗಿ ಕೇಂದ್ರದ ಸಂಬಂಧವನ್ನು ಕಲ್ಪಿಸಿಕೊಂಡಾಗಿನಿಂದ ಲೋಕದಲ್ಲಿ ಅಸತ್ಯ ಹಿಂಸೆ ಅಪ್ರಾಮಾಣಿಕತೆ ದ್ವೇಷ ತಿರಸ್ಕಾರ ಮುಂತಾದ ದುರ್ಗುಣ ಬಹಳವಾಗಿ ಹರಡಿಕೊಂಡವು. ಇದರ ಪರಿಣಾಮವಾಗಿ ಮೊದಲು ಸಾಮಾನ್ಯ ಸದ್ಗೃಹಸ್ಥನಲ್ಲಿ ಇರುತ್ತಿದ್ದ ಸದ್ಗುಣಗಳೇ ಈಗ ಮಹಾತ್ಮರ ಲಕ್ಷಣಗಳಾಗಿಬಿಟ್ಟಿವೆ. ಜನತೆಯ ಉತ್ಕರ್ಷದ ಬದಲು ಭೀಷಣ ನೀತಿ ಹ್ರಾಸವಾಗಿದೆ.

ಈ ತೊಡಕಿನಿಂದ ಲೋಕವನ್ನು ಬಿಡಿಸಿ, ಮಾನವ ಜಾತಿಯನ್ನು ಅಸತ್ಯ ಹಿಂಸೆ ಪ್ರಳಯಗಳಿಂದ ಕಾಪಾಡಬೇಕೆಂದರೆ, ಜಗತ್ತಿನ ಆರ್ಥಿಕ ಸಾಮಾಜಿಕ ರಚನೆಯನ್ನು ಸ್ವಾವಲಂಬನದ ತಳಹದಿಯ ಮೇಲೆ ವಿಕೇಂದ್ರಿತ ಉತ್ಪಾದನೆ, ವಿಕೇಂದ್ರಿತ ವ್ಯವಸ್ಥೆಗಳ ಸಹಾಯದಿಂದ ನಿರ್ಮಿಸಬೇಕು. ಆಗ ಮನುಷ್ಯರ ದಿನ ಬಳಕೆಯ ಅಗತ್ಯಗಳಿಗಾಗಿ ಪರಸ್ಪರ ಸಂಬಂಧ ದೃಢವಾಗಿ ಸ್ಥಾಪಿತವಾಗುತ್ತದೆ. ಆದರೂ ಜನರಲ್ಲಿ ಸಾಮಾನ್ಯವಾಗಿ ಸತ್ಯ ಪೂರ್ಣ ಪ್ರೇಮ- ಸಹಕಾರಗಳಿಲ್ಲದಿದ್ದರೆ ಈ ಪಾರಸ್ಪರ್ಯವೂ ಸ್ಥಿರವಾಗಿ ಉಳಿಯಲಾರದು.

ರಾಟೆ: ಸ್ವಾವಲಂಬ ಉತ್ಪಾದನೆಯ ಮಧ್ಯಬಿಂದು : ಔದ್ಯೋಗಿಕ ಕೇಂದ್ರೀಕರಣದಿಂದ ಯುದ್ಧದ ರೂಪದಲ್ಲಿ ಘೋರ ಹಿಂಸೆ, ವರ್ಗ ಸಂಘರ್ಷಣದ ವಿನಾಶಕ ಸ್ಥಿತಿ ಹೇಗೆ ಹುಟ್ಟುತ್ತದೆಯೋ ಅರಿತಿದೇವೆ. ಯಂತ್ರ-ತಂತ್ರಗಳ ಕೇಂದ್ರೀಕರಣದಿಂದ ಮನುಷ್ಯರಲ್ಲಿ ಪರಸ್ಪರ ಸಂಬಂಧ ಕಡಿದು ಹೋಗಿ ಜನರು ಯಂತ್ರಗಳ ಮೊಳೆ-ಮರಡು ಆಗಿಬಿಡುತ್ತಾರೆ. ಇದನ್ನೂ ಅರಿತುದಾಯಿತು. ಇಡೀ ಸಮಾಜವೇ ಜೀವಂತ ಸಮಷ್ಟಿಯ ಬದಲು ಒಂದು ವಿಶಾಲ ಜಡ ತಂತ್ರವಾಗಿಬಿಡುತ್ತದೆ. ಮನುಷ್ಯನೊಳಗಿರುವ ಸದ್ವೃತ್ತಿ ಅನುಕೂಲ ಪರಿಸ್ಥಿತಿಯಿಲ್ಲದೆ ನಷ್ಟ - ಭ್ರಷ್ಟವಾಗಿ ಹೋಗುತ್ತದೆ. ಈ ವಿಘಾತಕ ಪರಿಸ್ಥಿತಿಗೆ ಸ್ವಾವಲಂಬಿ ಅರ್ಥನೀತಿ, ಸಮಾಜ ವ್ಯವಸ್ಥೆಗಳೇ ಮದ್ದು, ಬೇರೆ ಇಲ್ಲ. ಈ ಕಾರಣದಿಂದಲೇ ಗಾಂಧೀಜಿ ರಾಟೆಯನ್ನು

ಅಹಿಂಸೆಯು ಪ್ರತೀಕವೆಂದದ್ದು. ಸ್ವಾವಲಂಬನದ ಉತ್ಪಾದನೆಗೆ ರಾಟೆಯೇ ಮಧ್ಯಬಿಂದು.

ನಯೀ ತಾಲೀಂ: ಮುಂದಿನ ಸಮಾಜದ ರೂಪು: ಹಾಗಾದರೆ ಅಂಥ ಸಮಾಜವನ್ನು ಸ್ಥಾಪಿಸಲು ದಾರಿಯೇನು ಎಂಬುದೇ ಪ್ರಶ್ನೆ. ಸಮಾಜಕ್ಕೆ ಒಂದು ಸ್ಥಾಯಿ ವ್ಯವಸ್ಥೆ ಮಾಡಲು ತಕ್ಕ ವಾತಾವರಣವನ್ನು ಹುಟ್ಟಿಸಲು ಸಾಮಾನ್ಯವಾಗಿ ಕೆಲವು ತಾತ್ಕಾಲಿಕ ಕಾರ್ಯಕ್ರಮಗಳಿರುತ್ತವೆ. ಅದರಿಂದ ಜನರ ಮೇಲೆ ಪ್ರಭಾವವೂ ಬೀಳುತ್ತದೆ. ಆದರೆ ನಾವು ಯೋಚಿಸುತ್ತಿರುವ ಆದರ್ಶ ಸಮಾಜಕ್ಕೆ ಯೋಗ್ಯರಾಗುವ ಜನರನ್ನು ಅಣಿಮಾಡಲು ನಮ್ಮ ಶಿಕ್ಷಣ ಪದ್ಧತಿಯಲ್ಲಿಯೆ ಒಂದು ಕ್ರಾಂತಿಕಾರಿ ಪರಿವರ್ತನೆಯಾಗಬೇಕು. ಅದರಿಂದ ಮುಂದಿನ ಪೀಳಿಗೆಯವರು ಬಾಲ್ಯ ದಿಂದಲೇ ಆ ತಳಹದಿಯ ಮೇಲೆ ಬೆಳೆದಾರು. ನಯೀ ತಾಲೀಮಿನ ಮೂಲಕ ಗಾಂಧೀಜಿ ಜನರನ್ನು ಆ ದಾರಿಯಲ್ಲಿ ನಡೆಸಬಯಸಿದ್ದರು. ಸಮಾಜದಲ್ಲಿ ಪ್ರತಿಯೊಬ್ಬ ಮನುಷ್ಯನೂ ಸ್ವತಂತ್ರವಾಗಿ ಬಾಳಿನ ಆವಶ್ಯ ಕತೆಗಳನ್ನು ಪೂರಯಿಸಿಕೊಂಡು, ಸಮಾಜ ವ್ಯವಸ್ಥೆಯನ್ನು ನಡೆಸಬಲ್ಲವ ನಾದಾಗಲೇ ವಿಕೇಂದ್ರೀಕರಣದ ತಳಹದಿಯ ಮೇಲೆ ಸ್ವಾವಲಂಬಿ ಸಮಾಜ ವನ್ನು ಕಟ್ಟಲು ಸಾಧ್ಯ. ಈ ಯೋಗ್ಯತೆ ಬಂದ ಮಾತ್ರಕ್ಕೇ ಇಂಥ ಸಮಾಜ ರೂಪುಗೊಳ್ಳದು. ಸಮಾಜದ ಸಂಸ್ಕಾರ, ಸ್ವಭಾವಗಳೂ ಸ್ವಾವ ಲಂಬಿಯಾಗಬೇಕು.

ನಯೀ ತಾಲೀಂ: ಸ್ವಾವಲಂಬನದ ಕ್ರಿಯಾತ್ಮಕ ಶಕ್ತಿ: ಆದ್ದರಿಂದ ಹೊಸ ಶಿಕ್ಷಣ ಪದ್ಧತಿಯಲ್ಲಿ ಶಿಕ್ಷಣದ ಮಾಧ್ಯಮ ಅಕ್ಷರವಲ್ಲ; ಸಾಮಾಜಿಕ ವಾತಾವರಣ, ಉತ್ಪಾದನ ಕಾರ್ಯ. ಸಾಮಾಜಿಕ ವಾತಾವರಣದ ಅಧ್ಯ ಯನದಿಂದ ಸಮಸ್ಯೆಗಳ ಅರಿವಾಗುತ್ತದೆ. ಸಮಸ್ಯೆಗಳಿಗೆ ಸಮಾಧಾನವನ್ನು ಒದಗಿಸುವ ಅಭ್ಯಾಸ ಬರುತ್ತದೆ. ಈ ಅಭ್ಯಾಸದಿಂದ ಸಮಾಜವ್ಯವಸ್ಥೆಯ ಜವಾಬದಾರಿಯ ಅರಿವು ಮುಂದಿನ ಈ ಸ್ವತಂತ್ರ ನಾಗರಿಕರಿಗೆ ಸ್ವಭಾವಿಕ ವಾಗುತ್ತದೆ. ಜನತೆಯಲ್ಲಿ ಈ ಜವಾಬದಾರಿ ವಹಿಸುವ ಸ್ವಯಂ ಪ್ರೇರಣೆ ಎಲ್ಲಿಯ ವರೆಗೆ ಬಾರದೋ ಅಲ್ಲಿಯ ವರೆಗೆ ಜನರು ಒಳವ್ಯವಸ್ಥೆ, ರಕ್ಷಣೆ ಗಳಿಗಾಗಿ ಹೊರಗಿನ ಶಕ್ತಿಯನ್ನು ಅವಲಂಬಿಸಿ ಕೂಡಬೇಕಾಗುತ್ತದೆ.

ಪ್ರಜಾತಂತ್ರ ವಾಸ್ತವವಾಗದೆ ಬರೀ ಶಾಸ್ತ್ರ - ಆಕಾರ ಆಗಿಬಿಡುತ್ತದೆ. ಆದರೆ ಚಿಕ್ಕಂದಿನಿಂದಲೇ ಉತ್ಪಾದನ ಕಾರ್ಯದ ಅನುಭವವಿದ್ದರೆ ತನ್ನ ದಿನದ ಆವಶ್ಯಕತೆಗಳಿಗಾಗಿ ಕೇಂದ್ರೀಯ ಯಂತ್ರಗಳಿಗೆ ಶರಣುಹೋಗುವುದನ್ನು ಮನುಷ್ಯ ಸುಲಭವಾಗಿಯೆ ಬಿಟ್ಟು ಬಿಡುತ್ತಾನೆ. ಕಷ್ಟವಾದರೂ ಚಿಕ್ಕಂದಿನಿಂದಲೇ ಈ ಕಾರ್ಯದ ಮಾಧ್ಯಮದಿಂದ ಬೇರೆ ಬೇರೆ ವಿಷಯಗಳ ಜ್ಞಾನವನ್ನು ಮಾಡಿಕೊಡುವುದರ ದೆಸೆಯಿಂದ ಉತ್ಪಾದನ ಕ್ರಮದಲ್ಲಿ ಜಡತೆ ಉಳಿಯದು. ಜನರು ಅದರ ವೈಜ್ಞಾನಿಕ ತತ್ವವನ್ನೂ ಅರಿತು ಕೊಳ್ಳುತ್ತಾರೆ. ನಿರಂತರ ಪ್ರಗತಿಯಾಗುತ್ತದೆ. ಹೀಗೆ ನಯೀ ತಾಲೀಂ ಪದ್ಧತಿಯಿಂದ ಜನರು ಕೇಂದ್ರೀಯ ಯಂತ್ರಗಳ, ಗಿರಣಿಗಾರಿಕೆಯ ಭರವಸೆಯನ್ನು ಬಿಟ್ಟು ತಮ್ಮನ್ನೇ ನಂಬುವಂತೆ ಆಗುತ್ತದೆ. ಹೀಗಾಗಿ ನಯೀ ತಾಲೀಂ ಸ್ವಾವಲಂಬನದ ಒಂದು ಪರಮ ಕ್ರಿಯಾತ್ಮಕ ಶಕ್ತಿ ಯಾಗುತ್ತದೆ.

ಬರೀ ಭರವಸೆ, ಅವಲಂಬನಗಳ ಮಾತೇ ಅಲ್ಲ. ಮೂಲ ಆವಶ್ಯ ಕತೆಗಳ ಪ್ರಾಪ್ತಿಯ ವೈಜ್ಞಾನಿಕ ರಹಸ್ಯ ತಮ್ಮ ಕೈಯಲ್ಲಿಯೆ ಇರುವುದ ರಿಂದ ಜನರ ಶ್ರಮ - ದುಡಿತ ಇಂದು ಶೋಷಣವಾಗುತ್ತಿರುವಂತೆ ಆಗ ನಡೆಯದು. ವೈಜ್ಞಾನಿಕ ಜ್ಞಾನವಿಲ್ಲದುದರಿಂದ ಈಗ ನಡೆಯುತ್ತಿರುವ ಪೀಡನೆಯೂ ಆಗ ನಡೆಯದು.

೪

ನಯೀ ತಾಲೀಂ ಶಿಕ್ಷಣಕೇಂದ್ರ ಸ್ವಾವಲಂಬಿಯಾಗಬೇಕು : ನಯೀ ತಾಲೀಮಿನಿಂದ ಶಿಕ್ಷಣಕೇಂದ್ರ ಸ್ವಾವಲಂಬಿಯಾಗಬೇಕು, ಸ್ವಾವಲಂಬನದ ಬುದ್ಧಿ ಮಕ್ಕಳಲ್ಲಿ ಬೇರೂರಿ ಅವರ ಸಂಸ್ಕಾರ ವ್ಯವಹಾರಗಳಲ್ಲಿ ಒಡಮೂಡ ಬೇಕು, ಇದು ಅಗತ್ಯ ಎಂದು ಗಾಂಧೀಜಿ ಹೇಳಿದಾರೆ. ಶಿಕ್ಷಣಕೇಂದ್ರ ವನ್ನು ಸ್ವಾವಲಂಬಿಯಾಗಿಡಬೇಕೆಂದರೆ, ಅದಕ್ಕೆ ಏನು ಉಪಾಯ ಮಾಡ ಬೇಕೆಂದು ಮಕ್ಕಳು ವಿಚಾರ ಮಾಡಬೇಕಾಗುತ್ತದೆ. ತಮ್ಮ ಉದ್ದೇಶ್ಯ ಸಿದ್ಧಿಗಾಗಿ ಯಾರು ಯಾರಿಂದ ನೆರವು ಪಡೆಯಬೇಕೆಂಬುದನ್ನೂ ಅವರು

ಈ ಸಂದರ್ಭದಲ್ಲಿ ಆಲೋಚಿಸಬೇಕಾಗುತ್ತದೆ. ಸಹಾಯಕ್ಕಾಗಿ ಮಾಡುವ ಪ್ರಯತ್ನದಲ್ಲಿ ಸಾಮಾಜಿಕ ಸಹಕಾರದ ಪ್ರೇರಣೆ ಸಿಗುತ್ತದೆ.

ಶಾಲೆಯ ವ್ಯವಸ್ಥೆ - ಶಿಕ್ಷಣ : ಈ ಪದ್ಧತಿಯ ಅನುಸಾರ ಶಾಲೆಯ ವ್ಯವಸ್ಥೆಯನ್ನೂ ಹುಡುಗರೇ ಮಾಡಬೇಕು. ಶಿಕ್ಷಕರು ಕೇವಲ ಮಾರ್ಗದರ್ಶಕರು. ಹೀಗೆ ಮಕ್ಕಳು ತಮ್ಮ ಶಾಲೆಯ ಸರ್ವ ವ್ಯವಸ್ಥೆಯನ್ನೂ ತಮ್ಮ ಕೈಗೆ ತೆಗೆದುಕೊಂಡರೆ ಶಾಲೆ ಅವರ ಪಾಲಿಗೆ ಒಂದು ಸಮಾಜವಾಗಿ ಬಿಡುತ್ತದೆ. ಆ ವಾತಾವರಣವನ್ನೇ ಶಿಕ್ಷಕರು ಸಾಮಾಜಿಕ ವಿಷಯಗಳ ಜ್ಞಾನವನ್ನು ಮಾಡಿಕೊಡಲು ಸಹಜವಾದ ಮಾಧ್ಯಮವಾಗಿ ಮಾಡಿಕೊಳ್ಳುತ್ತಾರೆ. ಹೀಗೆ ಮಕ್ಕಳಲ್ಲಿ ಆತ್ಮವಿಶ್ವಾಸ, ಪರಸ್ಪರತೆಗಳ ಸಂಸ್ಕಾರ ಅರಳುತ್ತವೆ. ಸಹಕಾರ - ಸ್ವಾವಲಂಬನಪೂರ್ಣ ಸಮಾಜದ ನಾಗರಿಕತೆಯನ್ನು ಮಕ್ಕಳು ಕಲಿಯುತ್ತಾರೆ.

ಪ್ರಾಚೀನ ಶಿಕ್ಷಣ ಪದ್ಧತಿ : ತನ್ನ ಆವಶ್ಯಕತೆಗಳನ್ನು ತಾನೇ ಪೂರಯಿಸಿಕೊಳ್ಳಬೇಕು, ತನಗೆ ಬೇಕಾದುದನ್ನೆಲ್ಲ ತಾನೇ ಮಾಡಿಕೊಳ್ಳಬೇಕು ಎಂದಾಗ ಮನುಷ್ಯನ ಸಾಮಾಜಿಕ ಗುಣಗಳು ಸಹಜವಾಗಿಯೆ ವಿಕಾಸಗೊಳ್ಳುತ್ತವೆ. ಹಿಂದಿನ ಕಾಲದಲ್ಲಿ ಸ್ವಾವಲಂಬಿ ಉತ್ಪಾದನ ಪದ್ಧತಿ ಇತ್ತಲ್ಲ; ಹಾಗಾದರೆ ಜನರೇಕೆ ಪರಾವಲಂಬಿಗಳಾದರು ಎಂದು ಕೇಳಬಹುದು. ಮೊದಲನೆಯದು - ಆ ಕಾಲದ ಜನಕ್ಕೆ ಕೇಂದ್ರೀಕರಣದ ದೋಷಗಳು ತಿಳಿದಿರಲಿಲ್ಲ. ಆದ್ದರಿಂದ ವಿಕೇಂದ್ರೀಕರಣದ ವೈಜ್ಞಾನಿಕ ಆಧಾರದ ಮೇಲೆ ಅವರು ಸಮಾಜ ವ್ಯವಸ್ಥೆಯ ಸ್ವಾವಲಂಬಿ ಯೋಜನೆಯನ್ನು ಮಾಡಲಿಲ್ಲ. ಎರಡನೆಯದು - ಉತ್ಪಾದನೆಯ ಕಾರ್ಯ ಶಿಕ್ಷಣದ ಮಾಧ್ಯಮವಾಗದೆ ಬೇರೆಯಾಗಿ ಯಂತ್ರವತ್ತಾಗಿ ನಡೆಯುತ್ತಿತ್ತು. ಜನರು ಜ್ಞಾನ ವಿಜ್ಞಾನದ ಚರ್ಚೆಯನ್ನು ಬೇರೆಯಾಗಿ ಕುಳಿತು ಮಾಡುತ್ತಿದ್ದರು. ಇದರಿಂದ ಉತ್ಪಾದನ ಕಾರ್ಯ ವಿಜ್ಞಾನ ಶೂನ್ಯವಾಯಿತು. ಕಾಲಕ್ಕೆ ಅನುಸಾರವಾಗಿ ಪ್ರಗತಿಯಾಗಲಿಲ್ಲ. ಅತ್ತ ಜ್ಞಾನವಿಜ್ಞಾನ ಚರ್ಚೆ ವೈಜ್ಞಾನಿಕ ಅನುಭವವಿಲ್ಲದೆ ಒಂದು ಮಟ್ಟ ಕೆಳಗಿಳಿಯಿತು.

ನಯೀ ತಾಲೀಂ : ವೈಜ್ಞಾನಿಕ ಪ್ರಗತಿಶೀಲ ಸಮಾಜದ ಒಂದು ಸಂಯೋಜಿತ ಕಾರ್ಯ : ಈ ಘಾತಕ ಸ್ಥಿತಿಯನ್ನು ತಡೆಗಟ್ಟಲು ಸ್ವಾವ

ಲಂಬನೆ, ವಿಕೇಂದ್ರೀಕರಣಗಳ ಆಧಾರದ ಮೇಲೆ ಸಮಾಜದ ಕಟ್ಟಡ ಕಟ್ಟ
ಬೇಕು; ಅದಕ್ಕೆ ಉತ್ಪಾದನ ಕಾರ್ಯವನ್ನು ಸಜೀವ, ವೈಜ್ಞಾನಿಕ, ಪ್ರಗತಿ
ಶೀಲ ಆಗಿ ಮಾಡದೆ ಗತ್ಯಂತರವಿಲ್ಲ. ನಯೀ ತಾಲೀಂ ಪದ್ಧತಿ ಈ ದಿಕ್ಕಿ
ನಲ್ಲಿ ಮಾಡಿದ ಒಂದು ಪ್ರಯೋಗ.

ಶ್ರಮವನ್ನು ತಪ್ಪಿಸುವ ಸ್ವಭಾವ: ಮನುಷ್ಯನ ಲೋಭ - ದುರಾಸೆ
ಯಂತ್ರವಾದ ಗಿರಣಿಗಾರಿಕೆಗಳನ್ನು ತಂದಿದೆ. ದಿನಬಳಕೆಯ ವಸ್ತುಗಳನ್ನು
ಹರಡುವ ಒಂದು ಬಗೆಯ ಹಸಿವೇ ಅಲ್ಲದೆ ಈ ಯಂತ್ರಗಳಿಂದ ಇನ್ನೊಂದು
ಪರಿಣಾಮವೂ ಆಗಿದೆ—ಕಷ್ಟಪಡಬಾರದು, ಶ್ರಮವನ್ನು ತಪ್ಪಿಸಬೇಕು
ಎಂಬ ಬುದ್ಧಿ ಹುಟ್ಟಿದೆ ಲೋಕದಲ್ಲಿ. ಯಂತ್ರಗಳನ್ನಿಟ್ಟು ಕೆಲಸ ಮಾಡಿದರೆ
ಅಲ್ಪ ಶ್ರಮಕ್ಕೇ ಹೆಚ್ಚು ಉತ್ಪಾದನೆಯಾಗುತ್ತದೆ. ಇದನ್ನು ಕಂಡ
ಮೇಲೆ ಮನುಷ್ಯ ತನ್ನ ಬುದ್ಧಿಯನ್ನೆಲ್ಲಾ ಈ ದಾರಿಯಲ್ಲೇ ಉಪಯೋಗಿಸ
ತೊಡಗಿದ.

**ಬಂಡವಾಳಗಾರಿಕೆ: ಪ್ರಚಾರತೆಯ ಆಸೆ, ಶ್ರಮ ತಪ್ಪಿಸುವ ಬಯಕೆ-
ಇವೆರಡೂ ವಿರುದ್ಧ ಗುಣಗಳ ಜೋಡಣೆಯ ದುಷ್ಪರಿಣಾಮ:** ಕಷ್ಟಪಡ
ಬಾರದು, ಶ್ರಮವನ್ನು ತಪ್ಪಿಸಬೇಕೆಂಬುದರ ಕಥೆ ಬಹಳ ಹಳೆಯದು.
ಇತಿಹಾಸದ ಪ್ರಾರಂಭ ಕಾಲದಲ್ಲಿ ಪರಸ್ಪರ ಹಿಂಸೆಯಿಂದ ಬಳಲಿ ಬೆಂಡಾಗಿ
ಮನುಷ್ಯ ಕೇಂದ್ರೀಯ ಆಡಳಿತವನ್ನು ಮೊದಲಿಟ್ಟ. ಆಗಲೇ ಬಿತ್ತನೆ
ಯಾಯಿತು ಸಮಾಜದಲ್ಲಿ ವರ್ಗ - ಶ್ರೇಣಿಗಳ ಬೀಜ. ಶಾಸಕ, ವ್ಯವಸ್ಥಾ
ಪಕ, ವರ್ತಕ ವರ್ಗಗಳು ಸ್ವಯಂ ಶ್ರಮಪಡದೆ ಉತ್ಪಾದಕ ವರ್ಗದ
ಶ್ರಮದಿಂದ ತಮ್ಮ ಬದುಕನ್ನು ನಡೆಸತೊಡಗಿದವು. ದುಡಿಯುವವರಿಗಿಂತ
ದುಡಿಯದವರ ಗೌರವ ಹೆಚ್ಚು ಎಂಬ ತಿಳಿವಿನಿಂದ, ದುಡಿಯದಿರುವುದೇ
ಒಂದು ಗೌರವ ಎಂಬ ಭಾವನೆ ಬೆಳೆಯಿತು. ಹೀಗಾಗಿ, ಒಂದು ಕಡೆ
ಸಮಸ್ತ ಪದಾರ್ಥಗಳೂ ಸಮೃದ್ಧಿಯಾಗಿರಬೇಕೆಂಬ ಆಸೆ, ಇನ್ನೊಂದು
ಕಡೆ ಶ್ರಮವನ್ನು ತಪ್ಪಿಸುವ ಬುದ್ಧಿ, ಎರಡು ಪರಸ್ಪರ ವಿರುದ್ಧ ಗುಣಗಳನ್ನು
ಜೋಡಿಸಿಕೊಂಡಿತು ಸಮಾಜ. ಅದರಿಂದ ಸ್ವಾಭಾವಿಕವಾಗಿ ಯಂತ್ರೋ
ದ್ಯೋಗ ವಾದ ಹುಟ್ಟಿತು. ಅದರ ಗರ್ಭದಲ್ಲಿ ಬಂಡವಾಳಗಾರಿಕೆಯ

ಸಮಾಜ ಹುಟ್ಟಿಬಂತು. ಆದರ ಪರಿಣಾಮವಾಗಿ ಉತ್ತರೋತ್ತರ ವರ್ಗ ವಿಷಮತೆ ಹೆಚ್ಚಿತು.

ರಾಯರು, ಅಣ್ಣಾ ಅವರು : ಕೇಂದ್ರೀಯ ವ್ಯವಸ್ಥಾಪಕ ವರ್ಗಕ್ಕೆ, ಬಂಡವಾಳಗಾರರ ವರ್ಗಕ್ಕೆ ಕ್ರಮೇಣ ಮತ್ತೊಂದು ಗುಂಪಿನ ನೆರವು ಬೇಕಾಯಿತು. ಉತ್ಪಾದನ ಕಾರ್ಯದಲ್ಲಿ ಪ್ರತ್ಯಕ್ಷವಾಗಿ ತೊಡಗದೆ ತಮ್ಮ ಉದ್ಯೋಗಗಳನ್ನು ನಡೆಸುವ, ಸಂಚಾಲನ ಮಾಡುವ, ಆಡಳಿತ ನಡೆಸುವ ಜನರು ಆಗತ್ಯವಾದರು. ಆದಕ್ಕಾಗಿ ಒಂದು ಹೊಸ ಶಿಕ್ಷಣ ಪದ್ಧತಿಯನ್ನೇ ಅವರು ರಚಿಸಿದರು. ಆದರಲ್ಲಿ ಶರೀರಶ್ರಮ ಮಾಡಬೇಕಾಗಿಲ್ಲ, ಆದರೂ ಇವನಿಗೆ ಸಮಾಜದಲ್ಲಿ ಗೌರವವಿರಬೇಕು ಎಂಬುದು ಸೂತ್ರ. ಇದನ್ನು ಸೋಮಾರಿಗಳ ಪೂಜೆ ಎನ್ನಬಹುದು. ಇವನಿಗೆ ಬರೀ ಓದು-ಬರೆಹ ಬಂದರೆ ಸಾಕು. ಯಾಂತ್ರಿಕ ವ್ಯವಸ್ಥೆಯಲ್ಲಿ ತಾನೂ ಒಂದು ಮೊಳೆ-ಮರಡು ಆದರಾಯಿತು, ಸ್ವತಂತ್ರಕರ್ಮ ಮಾಡುವಂತೆಯೆ ಇಲ್ಲ. ಹೀಗೆ ಸಮಾಜದಲ್ಲಿ ಓದು ಬರೆಹ ಬಲ್ಲವರ ಮಧ್ಯಮ ಶ್ರೇಣಿಯೊಂದು - ರಾಯರದು, ಅಣ್ಣಾ ಅವರದು - ಸೃಷ್ಟಿಯಾಯಿತು. ಈ ಪುಸ್ತಕ ವಿದ್ಯೆ ಹೆಚ್ಚಾದ ಹಾಗೆಲ್ಲ ಈ ವರ್ಗದ ಸಂಖ್ಯೆ ಬೆಳೆದು, ಇಂದು ಇವರದೇ ಒಂದು ಭೀಷಣ ವರ್ಗಸಮಸ್ಯೆಯಾಗಿ ಲೋಕದಲ್ಲಿ. ಈ ಸಮಸ್ಯೆಯನ್ನು ಬಿಡಿಸದಿದ್ದರೆ ಜಗತ್ತಿನ ಉಳಿದ ಸಮಸ್ಯೆಗಳಿಗೆ ಪರಿಹಾರವಿಲ್ಲ. ನಯೀ ತಾಲೀಂ ಮೂಲಕ ಗಾಂಧೀಜಿ ಈ ಸಮಸ್ಯಾ ಪರಿಹಾರದ ದಾರಿಯಲ್ಲಿ ಒಂದು ನಿಶ್ಚಿತ ಕ್ರಾಂತಿಕಾರಕ ಹೆಜ್ಜೆಯಿಡಲು ಬಯಸಿದರು.

ಜಗತ್ತಿನಲ್ಲಿ ಯಾರೂ ಯಾರನ್ನೂ ಶೋಷಿಸದಂತೆ ಆದಾಗಲೇ, ಮಾನವ ಸಮಾಜವೆಲ್ಲಾ ಒಂದೇ ವರ್ಗವಾದಾಗಲೇ, ಸತ್ಯ ಅಹಿಂಸೆಗಳ ಆಧಾರದ ಮೇಲೆ ಕಟ್ಟಿದ ಸಮಾಜ ಸ್ಥಿರವಾಗಬಲ್ಲದು. ಎರಡು ವರ್ಗವಿದ್ದು ಒಂದು ಇನ್ನೊಂದನ್ನು ಹೀರಿ ಹಿಂಡಿದಾಗಲೇ ವರ್ಗ-ವಿಷಮತೆ. ಆದ್ದರಿಂದಲೇ ಭಾರತದ ಶಾಸ್ತ್ರಕಾರರು ಸತ್ಯಯುಗದಲ್ಲಿ ಒಂದೇ ವರ್ಗವಿತ್ತು, ಮತ್ತೆ ಮೊದಲಿನಂತೆ ಲೋಕದಲ್ಲಿ ಒಂದೇ ವರ್ಗವಾಗುವವರೆಗೆ ಸತ್ಯಯುಗ ಮರಳಿ ಬಾರದು ಎಂದು ಹೇಳಿದಾರೆ.

ಸಮಾಜ ಸತ್ಯವನ್ನು ಕೈಬಿಟ್ಟಷ್ಟೂ ಸಾಮಾಜಿಕ ಜಟಿಲತೆ ಹೆಚ್ಚಾಯಿತು. ಸಮಾಜದಲ್ಲಿ ವಿಷಮತೆ ಹೆಚ್ಚಾದ ಹಾಗೆ ಸತ್ಯವೂ ಲೋಪವಾಗತೊಡಗಿತು. ಕೊನೆಗೆ ಇಂದು ಲೋಕ ಒಂದು ಭಯಂಕರ ಸ್ಥಿತಿಗೆ ಬಂದು ಮುಟ್ಟಿದೆ. ಆದ್ದರಿಂದ ಮೊಟ್ಟಮೊದಲು ಈ ಸ್ಥಿತಿಯನ್ನು ಕೊನೆಗಾಣಿಸಬೇಕು. ನಯೀ ತಾಲೀಂ ಮೂಲಕ ಅದನ್ನೇ ಮಾಡಬಯಸಿದರು ಗಾಂಧೀಜಿ.

ಶ್ರೇಣಿಹೀನ ಸಮಾಜ : ಶ್ರೇಣಿಹೀನ ಸಮಾಜವೆಂದರೆ ಜಗತ್ತಿನಲ್ಲಿ ಒಂದೇ ವರ್ಗವಿರಲಿ ಎಂದು. ಹಾಗಾದರೆ ಆದಾವುದು ಆ ಒಂದು ವರ್ಗ ? ಜಗತ್ತಿನಲ್ಲಿ ಮುಖ್ಯವಾಗಿ ಮೂರು ಶ್ರೇಣಿಗಳಿವೆ : ರಾಜ, ರಾಯ, ರಂಕ– ೧. ಶ್ರೀಮಂತರದು ೨. ಮಧ್ಯಮ - ರಾಯರದು ೩. ಶ್ರಮಿಕರದು. ಸಮಾಜವನ್ನು ವರ್ಗಹೀನವಾಗಿಸಬೇಕೆಂದರೆ ಈ ಮೂರರಲ್ಲಿ ಎರಡನ್ನು ನಾಶಮಾಡಿ ಎಲ್ಲವನ್ನೂ ಒಂದುಗೂಡಿಸಬೇಕು. ಇವುಗಳಲ್ಲಿ ಯಾವುದನ್ನು ಉಳಿಸೋಣ, ಯಾವುದನ್ನು ಅಳಿಸೋಣ ಎಂಬುದು ಮುಂದಿನ ಪ್ರಶ್ನೆ. ಅದಕ್ಕೆ ಉತ್ತರ ಸ್ಪಷ್ಟವಾಗಿಯೆ ಇದೆ : ತನ್ನ ಕಾಲಿನ ಮೇಲೇ ನಿಲ್ಲಬಲ್ಲ ವರ್ಗ ಇರಬೇಕು. ಎಂದರೆ ತನಗೆ ಬೇಕಾದುದನ್ನೆಲ್ಲ ತಾನೇ ನಿರ್ಮಿಸಿಕೊಳ್ಳಬಲ್ಲ ವರ್ಗ, ನಿರ್ಮಿಸಲು ದುಡಿಯಬಲ್ಲ ಶ್ರೇಣಿ. ಅಂಥದು ಇರುವುದು ಒಂದೇ ವರ್ಗ : ಶ್ರಮಿಕರದು. ರಾಜರು ರಾಯರು ಶ್ರಮಿಕರನ್ನು ಶೋಷಿಸಿಯೆ ಬದುಕಬೇಕು. ಹೀಗೆ ವರ್ಗಹೀನ ಸಮಾಜವೆಂದರೆ ತಮ್ಮ ದುಡಿತದಿಂದ ಉತ್ಪಾದನೆ ಮಾಡಬಲ್ಲವರದೇ ಸಮಾಜ. ಇದರ ಅರ್ಥ - ಇತರರ ಶೋಷಣೆಮಾಡಿ ಬದುಕುತ್ತಿರುವವರ ಗುಂಪು ಅಳಿಯಬೇಕು.

ಪಾಶ್ಚಿಮಾತ್ಯ ದೇಶಗಳಲ್ಲಿಯೂ ಹೀಗೆಯೆ ಶ್ರಮಿಕರ ಶ್ರೇಣಿಹೀನ ಸಾಮಾಜಿಕ ಕಲ್ಪನೆ ಮಾಡಿದಾರೆ. ಆದಕ್ಕಾಗಿ ಸಾಕಷ್ಟು ಕೆಲಸ ಮಾಡಿದಾರೆ. ಆದರಿಂದ ರಾಜ – ರಾಯರ ವರ್ಗಗಳಿಗೂ ಶ್ರಮಿಕವರ್ಗಕ್ಕೂ ತಿಕ್ಕಾಟವೂ ಆಯಿತು. ಶ್ರಮಿಕವರ್ಗದವರಿಂದ ಹಿಂಸೆಯ ಮೂಲಕ ರಾಜ - ರಾಯರನ್ನು ನಾಶಮಾಡಿಸುವ ಕೆಲಸ ನಡೆಯಿತು. ಈ ಎರಡೂ ವರ್ಗಗಳನ್ನು ನಾಶಮಾಡಿಬಿಟ್ಟರೆ ಉಳಿಯುವುದು ಒಂದೇ ಎಂದು ಅವರು

ಯೋಚಿಸಿದರು. ಆದರೆ ಹೀಗೆ ಹಿಂಸಾತ್ಮಕ ವರ್ಗಸಂಘರ್ಷಣೆ ನಡೆದರೆ ಏನು ಪರಿಣಾಮ? ಹಿಂಸೆಗೆ ಪ್ರತಿಹಿಂಸೆ ಹುಟ್ಟಿಯೇ ಹುಟ್ಟುತ್ತದೆ, ಈ ಹಿಂಸೆ - ಪ್ರತಿ ಹಿಂಸೆಗಳ ಆಘಾತ - ಪ್ರತ್ಯಾಘಾತಗಳಿಂದ ಮಾನವ ಸಮಾಜ ಜರ್ಜರಿತವಾಗಿ ಸದಾ ಭಿನ್ನ - ಭಿನ್ನವಾಗಿಯೇ ಇದ್ದೀತು; ಸಮಾಜ ಬಯಸಿದ ಸುಖ ಶಾಂತಿ ಸಿಗದೆಯೆ ಹೋದೀತು - ಇದು ಸ್ಪಷ್ಟ. ಸುಖ ಶಾಂತಿಗೂ ಎಳ್ಳು ನೀರು ಬಿಡೋಣ. ಇಷ್ಟ ಸಿದ್ಧಿಯಾದರೂ ಆಗುತ್ತದೆಯೆ? ಹಿಂಸೆಯ ಪ್ರಯೋಗದಿಂದ ಶೋಷಕ ವರ್ಗ ಕೊನೆ ಗಂಡೀತೆ? ಹಿಂಸೆಯಿಂದ ಈ ಕೆಲಸಮಾಡಿ ಎನ್ನುವವರು ತಾವು ದೊಡ್ಡ ವಿಜ್ಞಾನಿಗಳೆಂದು ತಿಳಿದಿದ್ದಾರೆ. ಆದರೆ ವಿಜ್ಞಾನದ ಮೊದಲನೆ ನಿಯಮ - 'ಜಗತ್ತಿನಲ್ಲಿ ಯಾವುದೂ ನಾಶವಾಗದು'–ಎಂಬುದನ್ನೇ ಇವರು ಮರೆಯು ತ್ತಾರೆ. ವಸ್ತುಗಳ ರೂಪ ಬೇರೆಯಾಗಬಹುದು; ವಸ್ತುವೇ ನಾಶವಾಗದು. ವೈಜ್ಞಾನಿಕ ಯೂರೋಪು ಮೇಲಿನ ವರ್ಗಗಳನ್ನು ನಾಶಮಾಡಲು ತೊಡಗಿ ದಾಗ, ವಿಜ್ಞಾನದ ಈ ಮೂಲಸೂತ್ರವನ್ನೆ ಮರೆಯಿತು. ಆದರಿಂದ ಈ ವರ್ಗಗಳು ನಾಶವಾಗಲಿಲ್ಲ, ಬೇರೆ ರೂಪು ತಳೆದು ವ್ಯವಸ್ಥಾಪಕ ವರ್ಗದ ಹೆಸರಿನಲ್ಲಿ ಮತ್ತೆ ಮೊದಲಿನ ಸ್ಥಳದಲ್ಲಿಯೆ ಬಂದು ಕುಳಿತಿವೆ. ಈ ಪರಿ ವರ್ತನೆಯೂ ಹಿಂಸೆಯಿಂದ ಆಯಿತಾದ್ದರಿಂದ ಅದರಲ್ಲಿ ಪ್ರತಿಹಿಂಸೆ ಹುಟ್ಟಿತು.

ನಯೀ ತಾಲೀಂ: ಸಮಾಜಕ್ಕೆ ಉತ್ಪಾದಕ ವರ್ಗದ ರೂಪು ಕೊಡು ತ್ತದೆ: ಒಂದು ಕ್ರಿಯೆಗೆ ಒಂದು ಪ್ರತಿಕ್ರಿಯೆ ಇದ್ದೇ ಇದೆ. ಅನಿವಾರ್ಯ. ಹೊಸದಾಗಿ ಹುಟ್ಟಿದ ಈ ವ್ಯವಸ್ಥಾಪಕ ವರ್ಗದವರು ಸಮಾಜವನ್ನು ಬೌದ್ಧಿಕ,ಶಾಸಕೀಯ ಸಂಕೋಲೆಗಳಿಂದ ಬಲವಾಗಿ ಬಿಗಿದುಬಿಟ್ಟರು. ಹಿಂದೆ ರಾಜ - ರಾಯ ಆಗಿದ್ದಾಗ ಅವರು ಊಹಿಸಿಯೂ ಇರಲಿಲ್ಲ, ಅಷ್ಟು ಬಲ ವಾಗಿ. ಜಗತ್ತಿನಲ್ಲಿ ಉತ್ಪಾದಕರದು ಒಂದೇ ವರ್ಗ ಇರಬೇಕೆಂದು ಸಮಾಜ ಬಯಸುವ ಪಕ್ಷದಲ್ಲಿ, ಉಳಿದೆರಡೂ ವರ್ಗ ಲೋಪವಾಗಿ ಇಡೀ ಸಮಾಜ ಸ್ವಯಂ ಉತ್ಪಾದಕವಾಗುವಂತೆ ಪರಿವರ್ತಿತವಾಗುವಂಥ ಒಂದು ವ್ಯವಸ್ಥೆ ಯನ್ನು ಹುಡುಕಬೇಕು. ನಯೀ ತಾಲೀಮಿನ ಮೂಲಕ ಗಾಂಧೀಜಿ ಸಮಾಜವನ್ನು ಈ ದಾರಿಯಲ್ಲಿ ಒಯ್ಯಲು ಸಂಕಲ್ಪಿಸಿದ್ದರು. ಉತ್ಪಾದಕರ

ಕೈಯಿಂದ ಉಳಿದಿಬ್ಬರನ್ನು ಕೊಂದು ಹಾಕಿಸುವುದಲ್ಲ ಅವರ ದಾರಿ, ಅವರನ್ನೇ ಉತ್ಪಾದಕರ ವರ್ಗಕ್ಕೆ ಸೇರಿಸಿಕೊಳ್ಳುವ ಅಹಿಂಸಾತ್ಮಕ ಮಾರ್ಗ. ಹಿಂಸಾತ್ಮಕ ರೀತಿಯಲ್ಲಿ ಯಾರೂ ಯಾರನ್ನೂ ಸೇರಿಸಕೊಳ್ಳಲಾರರು. ಸಮ್ಮೇಲನ ಪ್ರೀತಿ ಸಹಕಾರಗಳಿಂದಲೇ ಅದು ಸಾಧ್ಯ.

ಹಿಂಸೆ: ನಿರಾಶೆಯ ಪ್ರಮಾಣ: ಹಿಂಸೆಯಿಂದ ಲೋಕದಲ್ಲಿ ಕ್ರಾಂತಿಯಾಗದು. ಹಿಂಸೆ - ಕ್ರಾಂತಿ ಎರಡೂ ಪರಸ್ಪರ ವಿರುದ್ಧ ಶಬ್ದಗಳು. ಕ್ರಾಂತಿ ಎಂದರೆ ಸಮೂಲ ಪರಿವರ್ತನೆ. ಪರಿವರ್ತನೆಯಲ್ಲಿ ನಂಬಿಕೆಯಿದ್ದವರು ಹಿಂಸೆ ಮಾಡಲಾರರು. ಏಕೆಂದರೆ ಹಿಂಸೆ ನಿರಾಶೆಯ ಪ್ರಮಾಣ. ಜನರಲ್ಲಿ ಪರಿವರ್ತನೆಯಾದೀತೆಂಬ ನಂಬಿಕೆಯಿಲ್ಲದವನೇ ವಿನಾಶದ ಯೋಚನೆ ಮಾಡುತ್ತಾನೆ. ಹೀಗೆ ಹಿಂಸೆ, ನಿರಾಶಾವಾದದ ಮೂಲಕ ಕ್ರಾಂತಿ ಸಫಲವಾದೀತೆಂದು ಬಯಸುವುದು ಆತ್ಮವಂಚನೆ. ಸಮಾಜದಲ್ಲಿ ವಾಸ್ತವವಾದ ಸಮೂಲ ಕ್ರಾಂತಿಯಾಗಬೇಕೆಂದರೆ ವರ್ಗ ಸಂಘರ್ಷಣದ ಹಿಂಸಾತ್ಮಕ, ನಿಷ್ಫಲ ಕಾರ್ಯವನ್ನು ಮಾಡದೆ ವರ್ಗ - ಪರಿವರ್ತನದ ಅಹಿಂಸಾತ್ಮಕ ರೀತಿಯಿಂದ ನಿಶ್ಚಿತ ಕ್ರಾಂತಿಯ ದಾರಿಯಲ್ಲಿ ಹೆಜ್ಜೆ ಹಾಕಬೇಕು.

ಅಹಿಂಸಾತ್ಮಕ ಮಾರ್ಗ: ನಿಜವಾದ ಸಂಪೂರ್ಣ ಕ್ರಾಂತಿಯ ಒಂದೇ ದಾರಿ: ಒಂದು ಗಳಿಗೆ ಈ ದಾರಿಯನ್ನು ಬಿಡೋಣ. ಆದರೆ, ಈ ವಿಜ್ಞಾನ ಯುಗದಲ್ಲಿ ಹಿಂಸಾ ರೀತಿಯಿಂದ ಯಾವ ಸಮಸ್ಯೆಯೂ ವ್ಯಾವಹಾರಿಕವಾಗಿ ಪರಿಹಾರವಾಗದಲ್ಲ! ಈ ಯುಗದಲ್ಲಿ ಹಿಂಸೆಯ ಮೂಲಕ ಸಮಸ್ಯೆಗಳನ್ನು ಬಿಡಿಸಲು ಯತ್ನಿಸಿದರೆ ಮಾನವ ಸಮಾಜವೇ ಕೊನೆಯಾದೀತು. ಹಿಂದಿನ ಕಾಲದಲ್ಲಿ ವಿಜ್ಞಾನ ಈಗಿನಷ್ಟು ವಿಕಾಸವಾಗಿರದಿದ್ದಾಗ ಹಿಂಸಾತ್ಮಕ ರೀತಿಯಿಂದ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ಮಾಡಿಯೂ ಬದುಕುವ ಆಸೆಯಿತ್ತು. ಕಲ್ಲು, ದೊಣ್ಣೆ, ಬಿಲ್ಲು - ಬಾಣ, ಕತ್ತಿ - ಕೋವಿಗಳಿಂದ ಮನುಷ್ಯ ಎಷ್ಟೇ ಯತ್ನಿಸಿದರೂ ಆ ವಿಧ್ವಂಸ ಒಂದು ಮಿತಿಯೊಳಗೇ ಇರುತ್ತಿತ್ತು. ಈಗ ವಿಶ್ವಶಕ್ತಿ - ಕಾಸ್ಮಿಕ್ ಶಕ್ತಿ-ಯ ಕಾಲ. ಈಗ ಹಿಂಸೆಯ ಪ್ರಯೋಗವೆಂದರೆ ಏನು ಪರಿಣಾಮವಾದೀತೋ ಊಹಿಸಬಹುದು. ಈ ವಿಜ್ಞಾನ ಯುಗದಲ್ಲಿ ಹಿಂಸೆಯ ಎಲ್ಲಾ ಯೋಜನೆಗಳೂ ನಿತಾಂತ ಅವ್ಯಾವಹಾರಿಕವಾಗಿದೆ. ಅವುಗಳ ಬಗ್ಗೆ ವಿಚಾರವನ್ನೇ

ಮಾಡಬೇಕಾಗಿಲ್ಲ. ಆದ್ದರಿಂದ ನಿಜವಾದ ಸಂಪೂರ್ಣ ಕ್ರಾಂತಿಗಾಗಿ ಗಾಂಧೀಜಿಯ ಅಹಿಂಸಾತ್ಮಕ ಮಾರ್ಗವಲ್ಲದೆ ಬೇರೆ ವಿಶ್ವಸನೀಯ ಮಾರ್ಗ ವಿಲ್ಲ.

ಆತ್ಮಶುದ್ಧಿ : ಗಾಂಧೀಜಿಯ ಕ್ರಾಂತಿ ಮಾರ್ಗ ರಾಯರನ್ನು ರಾಜ ರನ್ನು ಪರಿವರ್ತಿಸಿ ಉತ್ಪಾದಕ ವರ್ಗದಲ್ಲಿ ಸೇರಿಸುವುದು. ಆದ್ದರಿಂದಲೇ ಅವರು ತಮ್ಮ ಎಲ್ಲಾ ಚಳುವಳಿಗಳನ್ನೂ ಆತ್ಮಶುದ್ಧಿಯ ಚಳುವಳಿ ಎಂದರು. ಇದಕ್ಕಾಗಿ ಅವರು ಮೊಟ್ಟಮೊದಲು ನೀತಿ ಮಾರ್ಗದಿಂದ ಶೋಷಕ ವರ್ಗದ ವಿವೇಕವನ್ನು ಎಚ್ಚರಿಸಿ, 'ನೀವು ಶೋಷಕ ರೂಪನ್ನು ಬಿಡಿ. ಸ್ವೇಚ್ಛೆಯಿಂದ ಉತ್ಪಾದಕ ವರ್ಗದಲ್ಲಿ ಸೇರಿಕೊಳ್ಳಿ, ಅವರ ಜೊತೆಗೆ ಉತ್ಪಾದನದಲ್ಲಿ ತೊಡಗಿಬಿಡಿ' ಎಂದರು. ತಮ್ಮ ರಚನಾತ್ಮಕ ಕಾರ್ಯಕ್ರಮದ ಎಲ್ಲಾ ಕೆಲಸಗಳನ್ನೂ ಈ ದಿಕ್ಕಿಗೆ ತಿರುಗಿಸಿದರು ಗಾಂಧೀಜಿ. ಉಚ್ಚ ವರ್ಗದ ತರುಣರಿಗೆ ಹಳ್ಳಿಗರಾಗಿ ಕೈಯಾರೆ ದುಡಿದು ಸಮಗ್ರ ಗ್ರಾಮಸೇವೆ ಮಾಡುವ ಕಾರ್ಯಕ್ರಮವನ್ನು ಕೊಟ್ಟರು. ಖಾದೀ ತೊಡಲು ಕನಿಷ್ಠ ಅಷ್ಟಮಾಂಶ ದಾರ ಕೊಡು ಎಂದರು. ಬೊಂಬಾಯಿಯ ಜನಕ್ಕೆ ಹೊಲವಿಲ್ಲದಿದ್ದರೆ ಹಿತ್ತಿಲಲ್ಲೇ ಅಹಾರ ಬೆಳೆದು ಆಹಾರವನ್ನು ಸೇವಿಸುವ ಅಧಿಕಾರ ಪಡೆಯಿರಿ ಎಂದರು. ಸೇವಕ ವಿದ್ಯಾಲಯದಲ್ಲಿ ಶರೀರಶ್ರಮ ಕ್ಕಿಂತ ಉತ್ಪಾದನೆಗೆ ಹೆಚ್ಚು ಪ್ರಾಧಾನ್ಯ ಕೊಟ್ಟರು. ಮೇಲಿನ ವರ್ಗದವ ರನ್ನು ಶ್ರಮಿಕವರ್ಗದಲ್ಲಿ ಬೆರೆಸುವ ಪ್ರಯತ್ನ ಇವೆಲ್ಲ-ಗಾಂಧೀಜಿಯದು.

ಹಾಗೆ, ಗಾಂಧೀಜಿಯ ಎಲ್ಲಾ ಕಾರ್ಯವೂ ವರ್ಗಹೀನ ಸಮಾಜದ ಪೂರ್ವಪೀಠಿಕೆಯೆ. ಆದರೆ ನಯೀ ತಾಲೀಂ ಮೂಲಕ ಜಗತ್ತಿನಲ್ಲಿ ಉತ್ಪಾದಕರ ಒಂದೇ ವರ್ಗಹೀನ ಸಮಾಜವನ್ನು ರಚಿಸಲು ಹುಡುಕಿದ ದಾರಿ ಅವರ ಕಟ್ಟಕಡೆಯ - ಆದರೆ ಅತ್ಯಂತ ವ್ಯಾಪಕ, ಸಂಯೋಜಿತ ಶಿಕ್ಷಣ ಚಳುವಳಿ.

ನಯೀ ತಾಲೀಂ - ಮೂಲ ಶಿಕ್ಷಣ : ಈ ಶಿಕ್ಷಣ ಪದ್ಧತಿಯಲ್ಲಿ ಉತ್ಪಾದನೆಯ ಕಾರ್ಯದ ಮೂಲಕವೇ ಪ್ರತಿಯೊಂದು ವಿಷಯದ ಅರಿವೂ ಆಗುತ್ತದೆ. ಶರೀರಶ್ರಮದ ಮೂಲಕ ಉತ್ಪಾದನೆಯ ಕಾರ್ಯವೇ ಶಿಕ್ಷಣ ಮಾಧ್ಯಮವಾಯಿತು. ಈ ಪದ್ಧತಿಯಲ್ಲಿ ತಮ್ಮ ಮೂಲ ಆವಶ್ಯಕತೆಗಳಿ

ಗಾಗಿ ದುಡಿಯುತ್ತಲೇ ಮನುಷ್ಯನ ಬೌದ್ಧಿಕ ಶಿಕ್ಷಣ ಪೂರ್ಣವಾಗಬೇಕು. ಆದ್ದರಿಂದ ಅದನ್ನು ಮೂಲಶಿಕ್ಷಣವೆಂದರು. ಏಕೆಂದರೆ, ಇದರಲ್ಲಿ ಬಾಳಿನ ಮೂಲಾವಶ್ಯಕತೆಗಳ ಪೂರಯಿಕೆಯ ಕೆಲಸದಲ್ಲಿ ಮನುಷ್ಯನಿಗೆ ತನ್ನ ಸ್ವಾಭಾವಿಕ ಕೆಲಸಗಳಿಗೆ ಸಮಯಾನುಕೂಲ ಶಿಕ್ಷಣ ಸಿಗುತ್ತದೆ.

ಹಿಂದಿನ ಶಿಕ್ಷಣ - ವರ್ಗಪರಿವರ್ತನೆ, ವಿರುದ್ಧ ದಿಕ್ಕಿನಲ್ಲಿ: ಇದರ ಅರ್ಥ - ಉತ್ಪಾದನೆಯ ಅಭ್ಯಾಸ ಇರುವವನೇ, ಸ್ವಯಂ ಉತ್ಪಾದಕನಾದವನೇ ಶಿಕ್ಷಿತ. ಆದರೆ ಹಳೆಯ ಶಿಕ್ಷಣದಲ್ಲಿ ಕೋಣೆಯಲ್ಲಿ ಕುಳಿತು ಪುಸ್ತಕಗಳನ್ನು ಪಾಠಮಾಡುವ ಪದ್ಧತಿಯಿಂದ ಶಾಲೆಗೆ ಬರುವ ಮಕ್ಕಳು ಉತ್ಪಾದನ ಕಾರ್ಯವನ್ನು ಬಿಡಬೇಕಾಗುತ್ತಿತ್ತು. ಉತ್ಪಾದಕ ವರ್ಗದ ಹುಡುಗರು ತಮ್ಮ ವರ್ಗವನ್ನು ತ್ಯಜಿಸಿ ರಾಯರ, ಅಣ್ಣಾ ಅವರ ವರ್ಗದಲ್ಲಿ ಸೇರಿಕೊಳ್ಳುತ್ತಿದ್ದರು. ಹೀಗೆ ಹಳೆಯ ಶಿಕ್ಷಣವೂ ಒಂದು ವರ್ಗ ಪರಿವರ್ತನೆಯ ಪದ್ಧತಿಯೇ - ಆದರೆ ತಿರುಗು ಮುರುಗು, ವಿರುದ್ಧದಿಕ್ಕಿನಲ್ಲಿ. ಆದ್ದರಿಂದ ಹಳೆಯ ಶಿಕ್ಷಣ ಹೆಚ್ಚಿದ ಹಾಗೆಲ್ಲ ರಾಯರು - ಅಣ್ಣಾ ಅವರ ಗುಂಪು ಹೆಚ್ಚಿತು; ಉತ್ಪಾದಕರ ಹೆಗಲಿನ ಮೇಲೆ ಶೋಷಕರ ಭಾರವೂ ಹೆಚ್ಚಿತು. ಆದರಿಂದ ಲೋಕದಲ್ಲಿ ವರ್ಗವಿಷಮತೆ ಜಟಿಲವಾಯಿತು. ಇದೇ ವೇಗದಿಂದ ಈ ಕೆಲಸ ನಡೆದರೆ ಬಹುಬೇಗ ಜಗತ್ತಿನಲ್ಲಿ ಶೋಷಕರ ಸಂಖ್ಯೆ ಮಿತಿಮೀರಿ ಬೆಳೆದು, ಅವರ ಭಾರಕ್ಕೆ ಉತ್ಪಾದಕ ವರ್ಗ ನುಚ್ಚುನುರಿಯಾದೀತು, ಸತ್ತೀತು. ಉತ್ಪಾದಕರು ಸತ್ತರೆ ರಾಯರೂ ಒಣಗಿ ಸತ್ತಾರು.

ನಯೀ ತಾಲೀಮಿನಿಂದ ರಾಯರ ವರ್ಗ ಕಡಮೆಯಾಗಿ ಉತ್ಪಾದಕರು ಹೆಚ್ಚುತ್ತಾರೆ. ನೇಗಿಲು, ಗುದ್ದಲಿ, ರಾಟೆ, ಸುತ್ತಿಗೆ, ಉಳಿಗಳ ಜೊತೆಗೆ ಅಂಟಿಕೊಂಡು ಪ್ರತಿಯೊಬ್ಬ ವ್ಯಕ್ತಿಯೂ ಸಹಜವಾಗಿಯೆ ಉತ್ಪಾದಕನಾಗಿ ತನ್ನ ಉತ್ಪಾದನದ ಕೆಲಸಮಾಡುತ್ತಾ ಶಿಕ್ಷಿತನಾಗುವ ಅವಕಾಶ ಸಿಗುತ್ತದೆ. ಹೀಗೆ ಬೌದ್ಧಿಕ ವರ್ಗದ ಪ್ರತ್ಯೇಕ ವ್ಯಕ್ತಿಯೂ ಉತ್ಪಾದಕನಾಗಬೇಕಾಗುತ್ತದೆ. ಪ್ರತಿಯೊಬ್ಬ ಉತ್ಪಾದಕನಿಗೂ ಬೌದ್ಧಿಕ ವಿಕಾಸಕ್ಕೆ ಸಂಪೂರ್ಣ ಅವಕಾಶ ಸಿಗುತ್ತದೆ. ಇದರಲ್ಲಿ ಹಿಂಸಾತ್ಮಕ ಸಂಘರ್ಷಣದ ಅಶಾಂತಿಕಾರಕ ಜಂಜಾಟದಲ್ಲಿ ತೊಳಲುವ ಅಗತ್ಯವಿಲ್ಲ.

ಶ್ರಮ ಅಥವಾ ವರ್ಗವಿಭಾಗ – ಜನ್ಮದಿಂದಲೇ ಕರ್ಮದಿಂದಲೆ? ಈಗ ವರ್ಗಹೀನಸಮಾಜದ ಮಾತಾಡುವ ಜನರೆಲ್ಲ ಸ್ವಯಂ ಬೌದ್ಧಿಕವರ್ಗದವರು. ಆದರೆ ತಾವು ಶ್ರಮಿಕ ವರ್ಗದ ಸದಸ್ಯರೆಂದೇ ಅವರು ತಿಳಿಯುತ್ತಾರೆ; ಇದು ಮೋಸ. ಎಲ್ಲರೂ ಎಲ್ಲಾ ಕೆಲಸಗಳನ್ನೂ ಮಾಡುವುದು ಸಾಧ್ಯವಿಲ್ಲ. ಸಮಾಜದಲ್ಲಿ ಶ್ರಮ ವಿಭಾಜನ ಅಗತ್ಯ. ಆದ್ದರಿಂದ ಪುಸ್ತಕ ಬರೆವವರು, ಭಾಷಣ ಮಾಡುವವರು, ಅಂಥದೇ ಬೇರೆ ಬೌದ್ಧಿಕ ಶ್ರಮಪಡುವವರು ಮತ್ತೆ ಶರೀರಶ್ರಮ ಮಾಡಲಿ ಎಂಬ ಒತ್ತಾಯವೇಕೆ? ಅದೂ ಉತ್ಪಾದನೆಯೆ ಅಲ್ಲವೆ ಎಂದು ಅವರ ವಾದ. ಕೆಲವರು ಬೌದ್ಧಿಕ ಶ್ರಮವನ್ನು, ಕೆಲವರು ಶರೀರ ಶ್ರಮವನ್ನು ಆರಿಸಿಕೊಳ್ಳಲಿ ಎನ್ನುತ್ತಾರೆ. ಇದನ್ನು ಅವರು ವರ್ಗವಿಭಾಜನ ಶ್ರೇಣಿವಿಭಾಜನ ಎನ್ನರು, ಶ್ರಮವಿಭಾಜನ ಎನ್ನುತ್ತಾರೆ. ಬೌದ್ಧಿಕ ಕಾರ್ಯಕ್ರಮದಲ್ಲಿ ತೊಡಗಿರುವವರನ್ನು ಶರೀರ ಶ್ರಮದಲ್ಲಿ ಮುಳುಗಿಸಿ ಕಾಲ–ಶಕ್ತಿ ಎರಡನ್ನೂ ಏಕೆ ಅಪವ್ಯಯ ಮಾಡುತ್ತೀರಿ? ಇದರಿಂದೇನು ಲಾಭ? ಶರೀರಶ್ರಮಕ್ಕೆ ಯೋಗ್ಯರಾದವರು ಶರೀರಶ್ರಮ ಮಾಡಲಿ. ಹಾಗೆ ಮಾಡಿದರೇನೆ, ಅವರ ಅಭಿಪ್ರಾಯದಂತೆ, ಸಮಾಜ ಶ್ರೇಣಿಹೀನವಾಗುತ್ತದೆ. ಆದರೆ ಇದೇ ಜನರೇ ಭಾರತದ ಪ್ರಾಚೀನ ವರ್ಣಭೇದದ ಪದ್ಧತಿಗೆ ಎಲ್ಲರಿಗಿಂತ ಹೆಚ್ಚು ವಿರೋಧಿಗಳು. ವರ್ಣವ್ಯವಸ್ಥೆ ಪ್ರತಿಗಾಮಿ ವ್ಯವಸ್ಥೆ ಎಂದು ಅವರ ಮತ. ಆದರಿಂದ ಸಮಾಜದ ಪ್ರಗತಿ ನಿಂತುಹೋಗುತ್ತದೆ. ಸಮಾಜವನ್ನು ಬ್ರಾಹ್ಮಣ, ಶೂದ್ರ ಎಂದು ಶ್ರೇಣಿಗಳಾಗಿ ಹಂಚುವುದಕ್ಕೆ ಅವರು ಘೋರ ವಿರೋಧಿಗಳು. ಆದರೆ ಬೌದ್ಧಿಕ ಕಾರ್ಯಕ್ರಮ ಮಾಡುವವರಿಗೆ ಶರೀರಶ್ರಮ ಅಗತ್ಯವಿಲ್ಲ; ಅವರ ವಿಶ್ರಾಂತಿಗಾಗಿ, ಇತರ ಕೆಲಸಗಳಿಗಾಗಿ ಬೇರೆಯವರನ್ನು ನೇಮಿಸಿ ಎಂದರೆ, ಇದು ಬ್ರಾಹ್ಮಣ ಶೂದ್ರರ ರೂಪಾಂತರವಲ್ಲದೆ ಮತ್ತೇನು? ಇಷ್ಟೇ. ಈಗಿನ ಜನ ಜನ್ಮನಾ ವರ್ಣಭೇದ ಬೇಡ, ಕರ್ಮಣಾ ಇರಲಿ ಎನ್ನುತ್ತಾರೆ. ಆದರೆ ಸಮಾಜವನ್ನು ಬೌದ್ಧಿಕ ಶಾರೀರಕ ಎಂದು ಎರಡು ಗುಂಪಾಗಿ ಭಾಗಿಸಲೇ ಬೇಕು ಎಂದರೆ ಜನ್ಮನಾ ಅಥವಾ ಹುಟ್ಟಿನಿಂದ ಎರಡು ಶ್ರೇಣಿಗಳಾಗಿ ಭಾಗಿಸುವುದೇ ಹೆಚ್ಚು ವೈಜ್ಞಾನಿಕ. ಆದರಿಂದ

ಸಮಾಜದ ಪ್ರಗತಿ ಹೆಚ್ಚು ಆಗುತ್ತದೆ ಎಂಬುದನ್ನು ಅವರು ಮರೆಯು ತ್ತಾರೆ. ಆದರಲ್ಲಿ ಸಮಾಜಕ್ಕೆ ಪರಿಪೂರ್ಣ ಪೈತೃಕ ಸಂಸ್ಕಾರದ ಲಾಭ ಸಿಗುತ್ತದೆ. ಎಲ್ಲಾದರೂ ಒಂದು ಸಂದರ್ಭದಲ್ಲಿ ಅಪವಾದ ರೂಪವಾಗಿ ಒಬ್ಬೊಬ್ಬ ವ್ಯಕ್ತಿಗೆ ಈ ಪದ್ಧತಿಯಿಂದ ಅನ್ಯಾಯವಾದೀತು. ಆದರೆ ಸಮಾಜದ ವೈಜ್ಞಾನಿಕ ವ್ಯವಸ್ಥೆ ಮಾಡುವಾಗ ಒಂದೆರಡು ಅಪವಾದ ಗಳನ್ನು ನೋಡಲು ಆಗದು, ಇಡೀ ಸಮಾಜದ ಹಿತವನ್ನು ನೋಡ ಬೇಕು.

ಈ ರೀತಿಯ ವಿಚಾರವೇ ತಪ್ಪು. ಬೌದ್ಧಿಕ - ಶಾರೀರಿಕ ಶ್ರಮ ದವರಿಬ್ಬರನ್ನೂ ಒಂದೇ ಶ್ರೇಣಿಯಲ್ಲಿಡಬಹುದು. ಈ ಎರಡು ಬಗೆಯ ಶ್ರಮಗಳಲ್ಲಿ ಒಂದು ರುಚಿಕರ, ಇನ್ನೊಂದು ಅರುಚಿಕರ. ಇದರಲ್ಲಿ ರುಚಿಕರ ಶ್ರಮವೇ ಶ್ರೇಷ್ಠ. ಆದ್ದರಿಂದ ರುಚಿಕರ ಶ್ರಮದ ಅವಕಾಶವೇ ಸಿಗಲಿ ಎಂದು ಪ್ರತಿಯೊಬ್ಬನೂ ಆಸೆಗೊಳ್ಳುವುದು ಸಹಜ. ಸಮಾಜಕ್ಕೆ ಅರುಚಿಕರ ಶ್ರಮದ ಅಗತ್ಯವೂ ಇದೆ. ಆದರೆ ಅಂಥ ಅರುಚಿಕರ ಶ್ರಮವನ್ನು ಕೆಲಸದ ವ್ಯವಸ್ಥೆಯ ದೆಸೆಯಿಂದಲೋ ಅಥವಾ ಪರಿಸ್ಥಿತಿಯ ಒತ್ತಾಯದಿಂದಲೋ ಮನುಷ್ಯ ಮಾಡಬೇಕು. ಸ್ವೇಚ್ಛೆಯಿಂದ ಯಾರೂ ಆ ಕೆಲಸವನ್ನು ಇಷ್ಟಪಟ್ಟು ಮಾಡರು. ಹಣದಾಸೆ ತೋರಿಸಿದರೂ ಪರಿಸ್ಥಿತಿ ಎಷ್ಟೇ ಬಲಾತ್ಕಾರ ಮಾಡಿದರೂ ಇಂದು ಮೇಲಿನ ವರ್ಣದ ಜನ ಭಂಗಿ ಕೆಲಸವನ್ನು ಮಾಡುವುದಿಲ್ಲ. ಅಂತೂ ನ್ಯಾಯ ಸ್ವಾತಂತ್ರ್ಯಗಳ ಆಧಾರದ ಮೇಲೆ ಸಮಾಜದಲ್ಲಿ ಶ್ರಮಿಕರದೇ ಒಂದು ವರ್ಗವನ್ನು ಸ್ಥಿರಗೊಳಿಸಬೇಕೆಂದರೆ, ಪ್ರತಿಯೊಬ್ಬ ಮನುಷ್ಯನೂ ಬೌದ್ಧಿಕ-ಶಾರೀರಿಕ ಎರಡೂ ಕೆಲಸಗಳನ್ನು ಮಾಡಲೇಬೇಕು.

ಒಂದು ವೇಳೆ ವಿಧಿಯಿಲ್ಲದೆ ಬ್ರಾಹ್ಮಣ - ಶೂದ್ರ ಎಂಬ ಎರಡು ಶ್ರೇಣಿಗಳನ್ನು ಇಡಲೇಬೇಕಾಗಿ ಬಂದರೆ, ಮಾನವ ವಿಕಾಸದ ಒಂದು ಮೂಲ ಸಿದ್ಧಾಂತದ ಲಾಭ ಸಮಾಜಕ್ಕೆ ಏಕೆ ಆಗಬಾರದು ? 'ಆನುವಂಶಿಕ ಗುಣಗಳ ಸಹಜಪ್ರಾಪ್ತಿ'ಯ ಆನುವಂಶೀಯತೆಯ (Law of Heredity) ಸಿದ್ಧಾಂತ ಅದು. ವಿದ್ಯಾವಂತರ ಕುಟುಂಬದ ಐದು ವರ್ಷದ ಮಗು

ಒಂದು ಶಾಲೆಯಲ್ಲಿ ರೈತರ ಮಕ್ಕಳಿಗಿಂತ ಹೆಚ್ಚು ಬೇಗ ಬೇಗ ಪಾಠ ಓದ ಬಲ್ಲ; ರೈತನ ಮಗ ಇವನಿಗಿಂತ ಚೆನ್ನಾಗಿ ನೆಲ ಅಗೆಯಬಲ್ಲ, ಹೆಚ್ಚು ಭಾರ ಎತ್ತಬಲ್ಲ. ಇಬ್ಬರಲ್ಲೂ ಪರಂಪರಾಗತವಾದ ಆ ಆನುವಂಶೀಯತೆ ಬೇರೆ ಬೇರೆ. ಆದ್ದರಿಂದ ಸಮಾಜವನ್ನು ಬೌದ್ಧಿಕ-ಶ್ರಮಿಕ ಎರಡು ಭಾಗ ಮಾಡಲೇಬೇಕು ಎಂದರೆ, ಆ ವಿಭಾಗ ಜನ್ಮಗತವಾದರೆ, ಜನ್ಮನಾ ವಿಭಜಿಸಿದರೆ, ಆ ವಿಭಾಜನೆ ವೈಜ್ಞಾನಿಕವೂ ಆಗುತ್ತದೆ, ಸಮಾಜಕ್ಕೆ ಹಿತವೂ ಆಗುತ್ತದೆ. ಜಾತಿಭೇದಗಳು ಇರಕೂಡದು ಎನ್ನುವವರು ಶ್ರೇಣಿ ವಿಭಾಗಕ್ಕೂ ವಿರುದ್ಧವಾಗಬೇಕು. ಏಕೆಂದರೆ, ಶ್ರಮದ ಶ್ರೇಣಿಭೇದವನ್ನು ಇಟ್ಟುಕೊಳ್ಳುವುದಾದರೆ, ಅದರಿಂದ ಜನ್ಮದಿಂದ ಎಂಬ ಸಿದ್ಧಾಂತವನ್ನು ತಿರಸ್ಕರಿಸಿ ಕರ್ಮದಿಂದ ಎಂಬ ಸಿದ್ಧಾಂತವನ್ನು ಒಪ್ಪಿದರೆ, ಸಮಾಜಕ್ಕೆ ಕುಶಲತೆ ಯೋಗ್ಯತೆಗಳ ಲಾಭವಾಗದಂತೆ ಮಾಡಿದಂತಾಗುತ್ತದೆ.

ಶ್ರೇಣಿಹೀನ ಸಮಾಜದ ಶ್ರಮವಿಭಾಗ : ಶ್ರಮ ವಿಭಾಗವಿಲ್ಲದಿದ್ದರೆ ಸಮಾಜದ ಉತ್ಪಾದನೆಯ ಕಾರ್ಯ ಹೇಗೆ ನಡೆಯುತ್ತದೆ? ಎಂದು ಜನ ಕೇಳತ್ತಾರೆ. ಪ್ರತಿಯೊಬ್ಬ ವ್ಯಕ್ತಿಯೂ ಒಂಟಿಯಾಗಿ ಕೆಲಸ ಮಾಡಲಾರ. ಹೀಗಾಗಿ ಶ್ರಮವಿಭಾಜನೆಯ ತಳಹದಿ ಸ್ವಲ್ಪವಾದರೂ ಅಗತ್ಯ. ವಾಸ್ತವಿಕ ಶ್ರೇಣಿಹೀನ ಸಮಾಜದಲ್ಲಿ ಈ ತಳಹದಿ ಗುಣ-ಸಂಬಂಧವಾದ್ದಲ್ಲ, ವಸ್ತು ಸಂಬಂಧವಾದದ್ದು. ಒಬ್ಬರು ಒಂದು ವಸ್ತುವನ್ನು ನಿರ್ಮಿಸಬಹುದು; ಇನ್ನೊಬ್ಬರು ಇನ್ನೊಂದನ್ನು. ಆದರೆ ಉತ್ಪಾದನ ಕಾರ್ಯದಲ್ಲಿ ಪ್ರತಿ ಯೊಬ್ಬನೂ ಶರೀರ-ಬುದ್ಧಿ ಎರಡೂ ಬಗೆಯ ಶ್ರಮಗಳನ್ನು ಮಾಡಬೇಕು, ಶ್ರಮ ವಿಭಾಜನದ ಹೆಸರಿನಲ್ಲಿ ಒಬ್ಬನಿಗೆ ಶೌಚಮಾಡುವ ಶ್ರಮ, ಇನ್ನೊಬ್ಬ ನಿಗೆ ಅದನ್ನು ಗುಡಿಸುವ ಶ್ರಮ-ಇಂಥ ಏರ್ಪಾಡು ಶ್ರೇಣಿಹೀನ ಸಮಾಜ ದಲ್ಲಿ ಸಾಧ್ಯವಿಲ್ಲ. ಗಾಂಧೀಜಿಯ ಕಲ್ಪನೆಯಂತೆ ಶ್ರೇಣಿಹೀನ ಸಮಾಜ ದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಶಾರೀರಿಕ ಬೌದ್ಧಿಕ ಎರಡೂ ಶ್ರಮಗಳನ್ನು ಮಾಡಬೇಕು. ಇಲ್ಲದಿದ್ದರೆ ಈ ಸಿದ್ಧಾಂತ ಬರೀ ಆಕಾಶ ಪುರಾಣ ವಾದೀತು. ಈ ಶ್ರೇಣಿಹೀನ ಸಮಾಜರಚನೆಯ ಶಿಕ್ಷಣದಲ್ಲಿ ಉಳಿದೆಲ್ಲ ಪದ್ಧತಿಗಳಿಗಿಂತ ಗಾಂಧೀಜಿಯ ನಯೀ ತಾಲೀಂ ಪದ್ಧತಿ ಹೆಚ್ಚು ವ್ಯಾವ ಹಾರಿಕ, ವೈಜ್ಞಾನಿಕ, ವಾಸ್ತವಿಕ.

೫


ಸಮಾನ ಅವಕಾಶದ ನಿಜ ಅರ್ಥ: ವಿದ್ಯಾವಂತರ ಸಮಾಜದಲ್ಲಿ 'ಸಮಾನ ಅವಕಾಶದ' ಬೊಬ್ಬೆ ಬಹಳವಾಗಿದೆ. ಶಿಕ್ಷಣಕ್ಕೆ ಪ್ರತಿಯೊಬ್ಬನಿಗೂ ಸಮಾನಾವಕಾಶ ಸಿಗಬೇಕು ಎನ್ನುತ್ತಾರೆ. ಉತ್ಪಾದನೆಯ ಕೆಲಸವನ್ನು ಬಿಡುವುದೇ ಶಿಕ್ಷಣದ ಪದ್ಧತಿಯಾದರೆ, ಪ್ರತಿಯೊಬ್ಬರಿಗೂ ಶಿಕ್ಷಣಕ್ಕೆ ಸಮಾನಾವಕಾಶಕೊಡಬೇಕು ಎಂದರೆ ಉತ್ಪಾದನೆಯ ಕೆಲಸವನ್ನು ಕೈಬಿಡಲು ಪ್ರತಿಯೊಬ್ಬನಿಗೂ ಅವಕಾಶಕೊಡಬೇಕು ಎಂದು ಅರ್ಥ. ಎಂದರೆ ಶಿಕ್ಷಣ ಮುಗಿದ ಮೇಲೇ ಪ್ರತಿಯೊಬ್ಬ ವ್ಯಕ್ತಿಯೂ ಉತ್ಪಾದನೆಯ ಕೆಲಸದಲ್ಲಿ ತೊಡಗಬೇಕೆಂದು ಅರ್ಥ. ಆಮೇಲೆ ಅವರವರ ಇಷ್ಟದಂತೆ ರುಚಿಕರ ಅಥವಾ ಅರುಚಿಕರ ಶ್ರಮವನ್ನು ಮಾಡಲಿ ಎಂದು ಬಿಡಬೇಕಾದೀತು. ಹೀಗಾದರೆ ಪ್ರತಿಯೊಬ್ಬನೂ ಎತ್ತಕಡೆ ವಾಲುತ್ತಾನೆಂಬುದು ಪ್ರತಿಯೊಬ್ಬನಿಗೂ ಗೊತ್ತು. ಪ್ರತಿಯೊಬ್ಬನೂ ತನ್ನ ಶಿಕ್ಷಣಕ್ಕೆ ಅನುಸಾರವಾಗಿ ರುಚಿಕರ ಶ್ರಮವನ್ನೇ ಆರಿಸಿಕೊಂಡರೆ ಸಮಾಜ ಇದಕ್ಕೆ ತಕ್ಕ ವ್ಯವಸ್ಥೆ ಮಾಡಬಲ್ಲದೆ? ಹೀಗೆ ಉತ್ಪಾದನೆಯ ಕೆಲಸವೇ ನಿಂತುಹೋದರೆ ಸಮಾಜ ನಡೆಯುವುದು ಹೇಗೆ? ಈ ಮಾತನ್ನು ನಾವು ಬಹಳ ದೂರ ಎಳೆದುಬಿಟ್ಟೆವೆಂದು ಜನ ಹೇಳುತ್ತಾರೆ. ಸಮಾನ ಅಧಿಕಾರವೆಂದರೆ ಇಷ್ಟವಿರಲಿ ಬಿಡಲಿ ಎಲ್ಲರೂ ಅಧಿಕಾರವನ್ನು ಉಪಯೋಗಿಸಿ ಶಿಕ್ಷಣವನ್ನು ಪೂರ್ತಿಗೊಳಿಸಬೇಕು ಎಂದಲ್ಲ. ಶಿಕ್ಷಣದ ಕಡೆ ಮುಖವನ್ನೇ ಇಡದವರು ಅನೇಕರಿದಾರೆ. ಅಥವಾ ಕೆಲವು ದಿನ ಓದಿ ಆಮೇಲೆ ನೇಗಿಲು ಹಿಡಿದಿದಾರೆ. ಸ್ವಾಭಾವಿಕವಾಗಿ ಹೀಗೇ. ಅನೇಕ ಜನರಿಗೆ ಓದಿನಲ್ಲಿ ರುಚಿಯಿಲ್ಲವೆಂದಲ್ಲ, ಅವರ ಪರಿಸ್ಥಿತಿ ಅವರನ್ನು ಓದಲು ಹೋಗಗೊಡದು. ಪರಿಸ್ಥಿತಿಯ ದೆಸೆಯಿಂದ ಕೆಲವರು ಓದಲು ಹೋಗಲಿಲ್ಲವೆಂದರೆ ಸಮಾನಾವಕಾಶವೇನು ಬಂತು? ಪ್ರತಿಯೊಬ್ಬನಿಗೂ ಸಮಾನ ಅವಕಾಶ ಕೊಡಬೇಕೆಂದರೆ ಈಗಿರುವ ಪರಿಸ್ಥಿತಿಯಲ್ಲಿದ್ದುಕೊಂಡೇ ಅವನಿಗೆ ಶಿಕ್ಷಣ ಸಿಗಬೇಕು. ಈಗ ವಿದ್ಯಾವಂತರ ಬಾಯಿಂದ ಇನ್ನೂ ಒಂದು ಮಾತು ಕೇಳಿ ಬರುತ್ತಿದೆ: ಶಿಕ್ಷಣವನ್ನು ಬಲಾತ್ಕಾರಮಾಡಿ. ಬಲಾತ್ಕಾರ ಶಿಕ್ಷಣ

ಎಂದರೆ, ಪ್ರತಿಯೊಬ್ಬನನ್ನೂ ಶಿಕ್ಷಿತ ಸ್ಥಿತಿಯಲ್ಲಿಡಬೇಕಾದರೆ ೧೫ ವರ್ಷದ ವರೆಗೆ ಅವನನ್ನು ಓದಿಸಬೇಕು. ೧೫ ವರ್ಷವಾಗುವವರೆಗೆ ಪಾಠಶಾಲೆಯ ಕೋಣೆಯಲ್ಲಿ ಕುಳಿತು ಪುಸ್ತಕ ಓದಿದ ಮೇಲೆ, ಅವನು ತನ್ನ ಹೊಲದಲ್ಲಿ ನೇಗಿಲು ಹಿಡಿದರೆ ಅವನ ಅವಸ್ಥೆಯೇನೆಂಬುದನ್ನು ಊಹಿಸಬಹುದು. ಉತ್ಪಾದನೆಯ ಕೆಲಸದ ಅಭ್ಯಾಸ ಚಿಕ್ಕಂದಿನಲ್ಲಿಯೆ ಆಗಬೇಕು. ಇಲ್ಲ ದಿದ್ದರೆ ಕೆಲಸದಲ್ಲಿ ಕೌಶಲವಾಗಲಿ ವೇಗವಾಗಲಿ ಬಾರದು. ಇಷ್ಟು ಮಾತ್ರ ಒಡೆದು ಕಾಣುತ್ತದೆ: ಹಳೆಯ ಪದ್ಧತಿಯಲ್ಲಿ ಶಾಲೆಗಳಲ್ಲಿ ೧೫ ವರುಷದ ವರೆಗೆ ಓದಿದ ಮೇಲೆ ಪ್ರತಿಯೊಬ್ಬನೂ ಉತ್ಪಾದನೆಯ ಕೆಲಸದಲ್ಲಿ ತೊಡಗಿ ಮನುಷ್ಯದ ಅಗತ್ಯಗಳನ್ನು ಪೂರಯಿಸಿಕೊಳ್ಳುವ ಮಾತು ಅಸಂಭವ.

ವಿಕೇಂದ್ರಿತ ಸಮಾಜದಲ್ಲಿ ಉತ್ಪಾದನೆಯ ಕೆಲಸದ ಅಭ್ಯಾಸ ಎಳೆತನದಲ್ಲಿಯೆ ಆಗಬೇಕು: ಯಂತ್ರಗಳಿಂದ ಉತ್ಪಾದನೆ ನಡೆವ ಇತರ ದೇಶಗಳಲ್ಲಿ ಯಂತ್ರ ನಡೆಸುವವನು ತನ್ನ ಕಣ್ಣು ಕೈ-ಬುದ್ಧಿಗಳನ್ನು ಉಪಯೋಗಿಸಿ ಉತ್ಪಾದನೆ ಮಾಡಬೇಕಾಗಿಲ್ಲ. ಅಲ್ಲಿ ಯಂತ್ರ ಚಾಲಕನೂ ಯಂತ್ರದ ಒಂದು ಮೊಳೆ-ಮುರಡು. ಅಲ್ಲಿ ಚಿಕ್ಕಂದಿನಿಂದ ರೂಢಿ ಮಾಡಿಕೊಳ್ಳಬೇಕಾದ ಅಗತ್ಯವೇನೂ ಇಲ್ಲ. ಆದ್ದರಿಂದ ಈ ರೀತಿ ಓದು ಬರೆಹ ಮುಗಿಸಿದ ಮೇಲೂ ಯಂತ್ರ ನಡೆಸುವುದು ಅವರಿಗೆ ಸಾಧ್ಯ. ಆದರೆ ಗಾಂಧೀಜಿಯ ವಿಕೇಂದ್ರಿತ - ಸ್ವಾವಲಂಬಿ ಸಮಾಜದಲ್ಲಿ ಎಳೆತನದಿಂದಲೇ ಉತ್ಪಾದನೆಯ ವೈಜ್ಞಾನಿಕ ಕ್ರಿಯೆ ರೂಢಿಯಾಗಬೇಕಾದುದು ಅನಿವಾರ್ಯ. ಆ ಕ್ರಿಯೆ ಶಿಕ್ಷಣದ ಮಾಧ್ಯಮವಾದಾಗಲೇ ಅದು ಸಾಧ್ಯ.

ಬಾಪೂನ ನಯೀ ತಾಲೀಂ ವಿಶ್ವದಲ್ಲಿಯೆ ಶ್ರೇಷ್ಠ ಪದ್ಧತಿ: ಜಗತ್ತಿನ ಸಮಸ್ತ ಉತ್ಪಾದನ ಕಾರ್ಯವನ್ನೂ ಸೊಗಸಾಗಿ ನಡೆಸುತ್ತ ಒಂದು ಶ್ರೇಣಿ ಹೀನ ಸಮಾಜವನ್ನು ಕಟ್ಟಬೇಕೆಂದರೆ ಪ್ರತಿಯೊಬ್ಬ ಮನುಷ್ಯನೂ ಉತ್ಪಾದನೆಯ ಕೆಲಸಮಾಡುತ್ತಲೇ ತನ್ನ ಬೌದ್ಧಿಕ ವಿಕಾಸ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಜನಹಿತದ ಎಲ್ಲಾ ಸಿದ್ಧಾಂತವೂ ಜನರ ವೋಟನ್ನು ಗಳಿಸುವ ಒಣ ರಾಜಕೀಯವಾದೀತು. ಅದಕ್ಕೆ ವ್ಯಾವಹಾರಿಕ-ವಾಸ್ತವಿಕ ರೂಪು ಅಸಂಭವವಾದೀತು. ಜಗತ್ತಿನಲ್ಲಿ ಶಾಸನಹೀನ ಶ್ರೇಣಿಹೀನ ಸಮಾಜ

ವನ್ನು ರಚಿಸುವುದು ನಮ್ಮ ಧ್ಯೇಯವಾಗಿದ್ದರೆ, ಮಾನವತೆಯನ್ನು ಶೋಷಣೆ ಹಿಂಸೆಗಳಿಂದ ಬಿಡುಗಡೆ ಮಾಡಿ ಪೂರ್ಣ ಸ್ವತಂತ್ರಗೊಳಿಸ ಬೇಕೆಂದರೆ, ಬಾಪೂ ತೋರಿಸಿದ ' ನಯೀ ತಾಲೀಂ ' ಬಿಟ್ಟರೆ ಬೇರೆ ಯಾವ ವ್ಯಾವಹಾರಿಕ ವೈಜ್ಞಾನಿಕ ಶಿಕ್ಷಣಪದ್ಧತಿಯೂ ಇಲ್ಲ; ಯಾರೂ ತೋರಿಸಿಲ್ಲ.



ಗಾಂಧೀ ಸ್ಮಾರಕ ನಿಧಿ
ಬೆಂಗಳೂರು-೩.
ಬೆಲೆ ೬ ಆಣೆ.